ಉಲುಚುಕಮ್ಮೆ ಪ್ರಕಾಶನ ಮಾಲೆ

ಕರ್ನಾಟಕ ಕವಿರತ್ನ

ಹೊಸಕೆರೆ ಚಿದಂಬರಯ್ಯ

ಪ್ರೊ. ಜಿ. ಅಶ್ವತ್ಥನಾರಾಯಣ



ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ

ನಂ.33, ಹೆಚ್. ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು-27.

ಉಲುಚುಕಮ್ಮೆ ಸಾಧಕರ ಮಾಲೆ

ಕರ್ನಾಟಕ ಕವಿರತ್ನ

ಹೊಸಕೆರೆ ಚಿದಂಬರಯ್ಯ

ಪ್ರೊ. ಜಿ. ಅಶ್ವತ್ಥನಾರಾಯಣ

ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ

ನಂ.33, ಹೆಚ್. ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್,

ಬೆಂಗಳೂರು-560 027. ದೂರವಾಣಿ: 080-2223 3049

HOSAKERE CHIDAMBARAYYA written by Prof. G. Ashwathanarayana, # 95, 34 'B' Cross, 16th Main, 4th 'T' Block, Jayanagar, Bangalore-560 041. Ph: 2663 7783

Published by Uluchukamme Brahmana Mahasabha, # 33, H. Siddhaiah Road, Wilson Garden, Bangalore-560 027, Ph: 080-22233049

First Edition	:	2010
Copy Right	:	Author
Pages	:	68
Paper used	:	70 GSM Maplitho
Copies	:	1000
Price	:	₹ **50/-**

ಹೊಸಕೆರೆ ಚಿದಂಬರಯ್ಯ ಲೇಖಕರು ಪ್ರೊ. ಜಿ. ಅಶ್ವತ್ಥನಾರಾಯಣ, # 95, 34 B ಅಡ್ಡರಸ್ತೆ, 16ನೇ ಮುಖ್ಯರಸ್ತೆ, 4 'T' ಬ್ಲಾಕ್, ಜಯನಗರ, ಬೆಂಗಳೂರು-560 041. ದೂರವಾಣಿ: 26637783

ಪ್ರಕಾಶಕರು: ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ, ನಂ.33, ಹೆಚ್. ಸಿದ್ದಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು-560 027. ದೂರವಾಣಿ: 080-2223 3049

ಮೊದಲ ಮುದ್ರಣ	:	2010
ಕೃತಿ ಸ್ವಾಮ್ಯ	:	ಲೇಖಕರು
ಪ್ರತಿಗಳು	:	1000
ಬೆಲೆ	:	₹ **50/-**

ಮುದ್ರಕರು : ಪರಿಶ್ರೀ ಪ್ರಿಂಟರ್ಸ್

9, 4ನೇ ಅಡ್ಡರಸ್ತೆ, ನಾಗಪ್ಪ ಬ್ಲಾಕ್, ಶ್ರೀರಾಮಪುರಂ, ಬೆಂಗಳೂರು-560 021.

✆ 23128286, 32016398, Email: parishree@yahoo.com; parishree@gmail.com

ಅಧ್ಯಕ್ಷರ ನುಡಿ



ಉಲುಚುಕಮ್ಮೆಯು ಕರ್ನಾಟಕದಲ್ಲಿ ಬಹು ಪ್ರಾಚೀನ ಕಾಲದಿಂದಲೂ ನೆಲೆಸಿರುವ ಸಮುದಾಯಗಳಲ್ಲಿ ಒಂದು. ಕಮ್ಮೆ ಎಂಬ ಸಾಮಾನ್ಯ ಸಮುದಾಯಕ್ಕೆ ಸೇರಿದ ಅನೇಕ ಬ್ರಾಹ್ಮಣ ಪಂಗಡ ಸುಮಾರು ಸಾವಿರ ವರ್ಷಗಳ ಹಿಂದಿನಿಂದಲೂ ಕಂಡುಬರುತ್ತದೆ. ಉದಾಹರಣೆಗೆ ಚಾಲುಕ್ಯದೊರೆ ಅರಿಕೇಸರಿಯ ಆಸ್ಥಾನದಲ್ಲಿ ದಂಡನಾಯಕನಾಗಿದ್ದ ಕವಿ ಪಂಪ, ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿದ್ದ ವೀರಶೈವಧರ್ಮ ಪ್ರತಿಪಾದಕ ಬಸವಣ್ಣ, ಹೊಯ್ಸಳ ರಾಜರ ಆಶ್ರಯದಲ್ಲಿದ್ದ ಜನ್ನ, ಸುಮನೋಭಾಣ ಇತ್ಯಾದಿ ದಿಗ್ಗಜರೆಲ್ಲಾ ಕಮ್ಮೆಕುಲದವರೇ. ಅದರಲ್ಲೂ ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ವಿದ್ಯಾರಣ್ಯರು ಉಲುಚುಕಮ್ಮೆ ಸಮುದಾಯದವರೆಂದೇ ನಂಬಲಾಗಿದೆ. ಈ ಸಮುದಾಯ ಮೂಲತಃ ಬ್ರಾಹ್ಮಣ ಕರ್ಮಗಳನ್ನು ನಡೆಸಿಕೊಂಡು ಹೋಗುತ್ತಿದ್ದರಲ್ಲದೆ ರಾಜ್ಯದ ಆಡಳಿತದಲ್ಲಿ ಅಧಿಕಾರವರ್ಗದವರೂ ಆಗಿರುತ್ತಿದ್ದರು. ಈ ಸಂಪ್ರದಾಯ ನಮ್ಮ ಉಲುಚುಕಮ್ಮೆ ಸಮುದಾಯದಲ್ಲಿ ಈಗಲೂ ಕಂಡುಬರುತ್ತಿದೆ. ಇತ್ತೀಚಿನ ದಿನಗಳಲ್ಲಿ ಆಗಿರುವ ಸಾಮಾಜಿಕ ಬೆಳವಣಿಗೆಗೆ ಅನುಗುಣವಾಗಿ ತಮ್ಮ ಜೀವನಕ್ರಮವನ್ನು ವಿಸ್ತರಿಸಿಕೊಂಡಿದ್ದಾರೆ. ಅಂದರೆ ಸಾಹಿತ್ಯ, ಸಂಗೀತ, ಸಮಾಜ ಸೇವೆ, ಇತಿಹಾಸ, ಆಡಳಿತ, ಕ್ರೀಡೆ, ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನ ಉದ್ಯಮ ಮುಂತಾದ ಕ್ಷೇತ್ರಗಳಲ್ಲಿ ಅನುಪಮ ಸೇವೆ ಮಾಡಿ ರಾಜ್ಯ, ರಾಷ್ಟ್ರ, ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾಗಿದ್ದಾರೆ. ಅಂತಹ ಮಹನೀಯರ ಸಂಕ್ಷಿಪ್ತ ಜೀವನಚರಿತ್ರೆಯನ್ನು ನಮ್ಮ ಮುಂದಿನ ಪೀಳಿಗೆಯವರಿಗೆ ಪರಿಚಯ ಮಾಡಿಸುವ ಪ್ರಯುಕ್ತ ಉಲುಚುಕಮ್ಮೆ ಸಾಧಕರ ಮಾಲೆ ಪ್ರಕಟಿಸಲು ಮಹಾಸಭೆಯು ನಿಶ್ಚಯಿಸಿತು. ಈ ಕಾರ್ಯದಲ್ಲಿ ನಮ್ಮ ಸಮುದಾಯದ ಅನೇಕ ಬಂಧುಗಳ ಹಾಗೂ ಮಹನೀಯರ ಉತ್ತಮ ಸಹಕಾರದಿಂದ ಸಾಧಕರ ಮಾಲೆಯನ್ನು ಪ್ರಕಟಿಸಲು ಸಾಧ್ಯವಾಗಿದೆ.


ನಮ್ಮ ಆಹ್ವಾನಕ್ಕೆ ಓಗೊಟ್ಟು ಸಾಧಕರ ಮಾಲೆಗೆ ಪ್ರಧಾನ ಸಂಪಾದಕರಾಗಲು ಪ್ರಸಿದ್ಧ ಇತಿಹಾಸ ತಜ್ಞರಾದ ಡಾ. ಎಸ್. ನಾಗರಾಜುರವರು ಒಪ್ಪಿಕೊಂಡಿರುವುದು ಸಂತೋಷದ ವಿಷಯ. ಈ ಕಾರ್ಯವನ್ನು ಸಾಧಿಸಲು ಈ ಮಾಲೆಯ ಸಂಚಾಲಕರಾಗಿ ಪ್ರಸಿದ್ಧ ಸಾಹಿತಿ ಮತ್ತು ವಿಜ್ಞಾನಿಯಾದ ಶ್ರೀ ಟಿ.ಆರ್. ಅನಂತರಾಮುರವರು ವಿಶೇಷ ಆಸ್ಥೆವಹಿಸಿದವರಾಗಿದ್ದಾರೆ. ಖ್ಯಾತ ಬರಹಗಾರರಾದ ಶ್ರೀ ಸುರೇಶ ಮೂನ, ಶ್ರೀ ಎನ್. ಆನಂದ ರಾಮರಾವ್ ಮತ್ತು ಶ್ರೀ ನೆ.ಲ. ರಾಮಮೂರ್ತಿ ಸಾಧಕರ ಮಾಲೆಯ ಸಂಪಾದಕ ಮಂಡಳಿಯ ಸದಸ್ಯರಾಗಿದ್ದಾರೆ. ಮಾಲೆಯ ಎಲ್ಲಾ ಲೇಖಕರ ಶ್ರದ್ಧೆ ಮತ್ತು ಶ್ರಮ ಶ್ಲಾಘನೀಯವಾದುದು.

ಶ್ರೀ ಬಿ.ವಿ. ಕುಮಾರ್, ಮತ್ತಿಕೆರೆ ಶ್ರೀ ಆರ್. ಅನಂತರಾಮನ್ ಮತ್ತು ಶ್ರೀ ಎಂ.ಎಸ್. ನಾಗರಾಜರಾವ್ ಈ ಮಹತ್ತರ ಕಾರ್ಯವನ್ನು ಅನುಷ್ಠಾನಕ್ಕೆ ತರಲು ಶ್ರಮಿಸಿದ್ದಾರೆ. ಈ ಕಾರ್ಯಕ್ರಮ ಅತ್ಯುತ್ತಮವಾಗಿ ಶೀಘ್ರವಾಗಿ ನೆರವೇರಿಸುವುದಕ್ಕೆ ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ಜಿ.ವಿ. ಪ್ರಭಾಕರ್‌ರವರು ಹಾಗೂ ಕಾರ್ಯದರ್ಶಿಗಳಾದ ವಿ. ಮಂಜುನಾಥ್‌ರವರ ಉತ್ಸಾಹ ಮತ್ತು ಶ್ರಮ ಶ್ಲಾಘನೀಯವಾದುದ್ದು.

"ಸಾಧಕರ ಮಾಲೆ"ಯನ್ನು ಪ್ರಕಟಿಸಲು ಕಾರ್ಯಕಾರಿ ಮಂಡಳಿ ಸದಸ್ಯರು ವಿಶೇಷವಾಗಿ ಶ್ರಮಿಸಿದ್ದಾರೆ ಮತ್ತು ಪರಿಶ್ರೀ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಶ್ರೀನಾಥ್‌ರವರು ಮುದ್ರಣ ಕೆಲಸವನ್ನು ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟಿರುವರು. ಇವರೆಲ್ಲರನ್ನು ಸ್ಮರಿಸುವದು ನನ್ನ ಆದ್ಯ ಕರ್ತವ್ಯ ಮತ್ತು ಇವರೆಲ್ಲರಿಗೂ ನಾನು ಅಭಾರಿ.

ಪಿ.ಎಸ್. ಅಶ್ವತ್ಥನಾರಾಯಣ ರಾವ್
ಗೌರವ ಅಧ್ಯಕ್ಷರು

ಸಾಧಕರ ಮಾಲೆ ಕುರಿತು ಎರಡು ಮಾತು



ಉಲುಚುಕಮ್ಮೆ ಬ್ರಾಹ್ಮಣ ಮಹಾಸಭೆಯು ಆಗಿಂದಾಗ್ಗೆ ಚಿಂತಕರೊಡನೆ ಚರ್ಚೆ ಮಾಡಿ ಮಹಾಸಭೆಯ ಸರ್ವಾಂಗೀಣ ಬೆಳವಣಿಗೆಗಾಗಿ ಸಲಹೆಗಳನ್ನು ಪಡೆಯುತ್ತ, ಅವುಗಳನ್ನು ಅನುಷ್ಠಾನ ಮಾಡುತ್ತಾ ಬಂದಿದೆ. ಸಂಸ್ಥೆಯ ಕಾರ್ಯಚಟುವಟಿಕೆಗಳ ಜೊತೆಗೆ ನಮ್ಮ ಸಮುದಾಯದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಅನನ್ಯ ಸಾಧನೆ ಮಾಡಿರುವವರನ್ನು ಕುರಿತು ಕೃತಿರೂಪದಲ್ಲಿ ಪ್ರಕಟಣೆ ಮಾಡಬೇಕೆಂದು ಇಂತಹ ಚಿಂತಕರ ಸಭೆಯಲ್ಲಿ ಮೂಡಿಬಂದ ಒಂದು ಅಭಿಪ್ರಾಯ. ಇದನ್ನು ಸಭೆಯಲ್ಲಿ ಪ್ರಸ್ತಾಪಿಸಿದವರು ಸದಸ್ಯರಲ್ಲೊಬ್ಬರಾದ ಹಾಗೂ ಈ ಮಾಲೆಯ ಹಾಲಿ ಸಂಚಾಲಕರಾದ ಲೇಖಕ ಶ್ರೀ ಟಿ.ಆರ್. ಅನಂತರಾಮು. ಈ ಅಭಿಪ್ರಾಯಕ್ಕೆ ಒಡನೆಯೇ ಸಮ್ಮತಿಸಿ ಅದನ್ನು ಕಾರ್ಯಶೀಲವಾಗಿಸುವಲ್ಲಿ ಉತ್ತೇಜಿಸಿದವರು ಸಾಧಕರ ಮಾಲೆಯ ಪೋಷಕರಾದ ಶ್ರೀ ಬಿ.ವಿ. ಕುಮಾರ್ ಅವರು ಹಾಗೂ ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ವಿ. ಮಂಜುನಾಥ್‌ರವರು. ಈ ಪ್ರಸ್ತಾವನೆಯನ್ನು ತುಂಬು ಮನಸ್ಸಿನಿಂದ ಮಹಾಸಭಾದ ಕಾರ್ಯಕಾರಿ ಸಮಿತಿಯವರು ಸ್ವೀಕರಿಸಿದರು. ಒಡನೆಯೇ ಕಾರ್ಯೋನ್ಮುಖವಾಗುವ ಉತ್ಸಾಹವನ್ನು ಮಹಾಸಭೆ ವ್ಯಕ್ತಪಡಿಸಿತು.

ಯಾವುದೇ ಪ್ರಕಟಣೆಯ ಕೆಲಸ ಸುಲಭವಲ್ಲವಷ್ಟೇ. ಇದಕ್ಕಾಗಿ ಸಮಿತಿ ನೇಮಕವಾಗಿ ನನಗೆ ಮಹಾಸಭೆಯ ಗೌರವ ಉಪಾಧ್ಯಕ್ಷ ಸ್ಥಾನದ ಜೊತೆಗೆ 'ಸಾಧಕರ ಮಾಲೆ'ಯ ಕಾರ್ಯನಿರ್ವಹಣೆಯ ಹೊಣೆಯನ್ನು ಮಹಾಸಭೆ ವಹಿಸಿತು. ಇದೊಂದು ನನ್ನ ಪಾಲಿಗೆ ಬಂದ ಭಾಗ್ಯವೆಂದೇ ಭಾವಿಸಿದ್ದೇನೆ. ಹತ್ತಾರು ಮುದ್ರಣಾಲಯಗಳಿಗೆ ಹೋಗಿ, ಅತ್ಯಂತ ಕಡಿಮೆ ಬೆಲೆಯಲ್ಲಿ ಮುದ್ರಣ ಮಾಡುವ, ಆದರೆ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದ ಮುದ್ರಣಕಾರರನ್ನು ಗೊತ್ತು ಮಾಡುವ ಕೆಲಸದಲ್ಲಿ ನನ್ನೊಂದಿಗೆ ಮತ್ತೀಕೆರೆಯ ಶ್ರೀ ಚೌಡೇಶ್ವರಿ ಚಾರಿಟಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಸಾಧಕರ ಮಾಲೆಯ ಪೋಷಕರೂ ಆದ ಶ್ರೀ ಆರ್. ಅನಂತರಾಮನ್‌ರವರು ತುಂಬ ಆಸಕ್ತಿ ತೋರಿದರು. ಲೇಖಕರನ್ನು ಸಂಪರ್ಕಿಸುವ, ಸಾಧಕರ ಬಗ್ಗೆ ಬರೆಸಲು ಏರ್ಪಾಟು ಮಾಡುವ, ಆಗಿಂದಾಗ್ಗೆ ಸಂಪಾದಕ ಮಂಡಲಿಯ ಸಭೆ ಕರೆಯುವ ಈ ಹೊಣೆಗಾರಿಕೆಯಲ್ಲಿ ನಾನು ಕಲಿತದ್ದೇ ಹೆಚ್ಚು, ಇದೊಂದು ಸಂತೋಷದ ಅನುಭವ ಕೂಡ. ಪ್ರಥಮವಾಗಿ ಮಹಾಸಭೆ ಯೋಜಿಸಿದ ಇಂಥ ದೊಡ್ಡ ಯೋಜನೆಯೊಂದರಲ್ಲಿ ನಾನು ಪಾಲ್ಗೊಳ್ಳುವ ಅವಕಾಶವನ್ನು ಕಲ್ಪಿಸಿದ ಮಹಾಸಭೆಗೆ ಮತ್ತು ಉಲುಚುಕಮ್ಮೆ ಸಾಧಕರ ಮಾಲೆಯ ಸಂಪಾದಕ ವರ್ಗಕ್ಕೆ ಹಾಗೂ ಉಲುಚುಕಮ್ಮೆ ಬ್ರಾಹ್ಮಣ ಮಹಾಸಭೆಯ ಗೌರವ ಅಧ್ಯಕ್ಷರು, ಗೌರವ ಕಾರ್ಯದರ್ಶಿಗಳು ಮತ್ತು ಕಾರ್ಯಕಾರಿ ಮಂಡಳಿಯ ಎಲ್ಲ ಸದಸ್ಯರಿಗೆ ನನ್ನ ಕೃತಜ್ಞತೆಗಳು.

ಸಾಧಕರ ಮಾಲೆಯಲ್ಲಿ ಮೊದಲ ಕಂತಾಗಿ ಹತ್ತು ಮಂದಿ ಅನನ್ಯ ಸಾಧಕರ ಜೀವನ ಚರಿತ್ರೆ ಹೊರಬರುತ್ತಿದೆ. ಈ ಮಾಲೆಯಡಿ ಮುಂದೆಯೂ ನಮ್ಮ ಸಮುದಾಯದ ಅನೇಕ ಖ್ಯಾತರ ಜೀವನ ಚರಿತ್ರೆಗಳು ಪ್ರಕಟವಾಗಲಿವೆ. ಇಂಥದೊಂದು ಮಾಲೆ ಮಹಾಸಭೆಯ ಮೂಲಕ ಪ್ರಕಟವಾಗುತ್ತಿದೆಯೆಂಬ ಸುದ್ದಿಯೊಂದರಿಂದಲೇ ಅನೇಕ ಮಂದಿ ಸ್ಫೂರ್ತಿಗೊಂಡು ಕೆಲವರು ಪ್ರಕಟಣೆಯ ವೆಚ್ಚವನ್ನೂ ನೀಡಿದ್ದಾರೆ. ಇದರಲ್ಲಿ ಮೊದಲು ಉತ್ತೇಜನ ದೊರೆತದ್ದು ಹೊಸಕೆರೆ ಚಿದಂಬರಯ್ಯನವರನ್ನು ಕುರಿತು ಕೃತಿ ಹೊರತರಲು ಮುಂದೆ ಬಂದವರು ಅವರ ಮೊಮ್ಮಗನಾದ ನೆಲಮಂಗಲದ ವಾಸಿ ದಿವಂಗತ ಚಿದಂಬರರವರು. ಮಹಾಸಭೆ ಇದರಿಂದ ಇನ್ನಷ್ಟು ಉತ್ತೇಜಿತವಾಗಿದೆ. ಈ ಮಾಲೆಯ ಪ್ರಕಟಣೆಗಾಗಿ ತಾವೂ ಕೊಡುಗೆ ನೀಡಿ ತಮ್ಮ ಸಾರಸ್ವತ ಪ್ರೀತಿಯನ್ನು ತೋರಿಸಬಹುದು. ಸಾಧಕರ ಮಾಲೆಯ ಕೃತಿಗಳು ನಮ್ಮ ಸಮುದಾಯದವರಿಗೆ, ವಿಶೇಷವಾಗಿ ಮುಂದಿನ ಪೀಳಿಗೆಗೆ, ಸ್ಫೂರ್ತಿಯ ಸೆಲೆಯಾಗಲಿವೆ. ಇಂಥ ಒಂದು ಮಹತ್ತರ ಯೋಜನೆಗೆ ನಮ್ಮ ಮಹಾಸಭೆಯ ಸದಸ್ಯರು ಎಲ್ಲ ಬಗೆಯ ಸಹಕಾರವನ್ನು ನೀಡುತ್ತಾರೆಂಬ ಭರವಸೆ ನನಗಿದೆ.

ಜೆ.ವಿ. ಪ್ರಭಾಕರ್
ಕಾರ್ಯನಿರ್ವಾಹಕ ವ್ಯವಸ್ಥಾಪಕರು
ಸಾಧಕರ ಮಾಲೆ

ಸಂಪಾದಕೀಯ



ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾದಿಂದ ಚಾಲನೆಗೊಂಡಿರುವ ಈ ಪುಸ್ತಕಮಾಲೆಗೆ ಎರಡು ಮುಖ್ಯ ಉದ್ದೇಶಗಳಿವೆ. ಮೊದಲನೆಯದು ವಿವಿಧ ರಂಗಗಳಲ್ಲಿ ವಿಶೇಷ ಸಾಧನೆಗಳನ್ನು ಮಾಡಿ ಸಮುದಾಯಕ್ಕೆ ಹೆಮ್ಮೆ ತರುವಂತಹ ಸಾರ್ಥಕ ಜೀವನವನ್ನು ನಡೆಸಿದ ಎಲ್ಲಾ ಮಹನೀಯರನ್ನೂ ಗುರುತಿಸಿ ಈ ಮೂಲಕ ಗೌರವಿಸುವುದು. ಎರಡನೆಯದು ಇಂತಹ ಸಾಧಕರ ಜೀವನ ಸಾಧನೆಗಳು ಮುಂದಿನ ಪೀಳಿಗೆಗಳಿಗೆ ತೋರುದೀಪವಾಗಿ ಅವರಲ್ಲಿ ಸ್ಫೂರ್ತಿ, ಉತ್ಸಾಹ, ಆತ್ಮವಿಶ್ವಾಸಗಳನ್ನು ಹೆಚ್ಚಿಸಲು ಸಾಧ್ಯವಾಗುವಂತಾಗಬೇಕು ಎಂಬುದು. ಈಗ ಮೊದಲಿನ ಕಂತಿನಲ್ಲಿ ಹತ್ತು ಹಿರಿಯ ಸಾಧಕರ ಬಗ್ಗೆ ಕೃತಿಗಳನ್ನು ಹೊರತರಲಾಗುತ್ತಿದೆ. ಮುಂದಿನ ದಿನಗಳಲ್ಲಿ ಹಿರಿಯ-ಕಿರಿಯ ಎಂಬ ಭೇದವೆಣಿಸದೆ ಎಲ್ಲಾ ರಂಗದ ಸಾಧಕರ ಬಗ್ಗೆ ಕನಿಷ್ಠ ಒಂದುನೂರು ಪುಸ್ತಕಗಳನ್ನಾದರೂ ತರಬೇಕೆಂಬ ಆಶಯವಿದೆ. ಈ ದಿಶೆಯಲ್ಲಿ ಈ ಮಾಲೆಯ ಸಂಪಾದಕ ಮಂಡಲಿಯು ಈಗಾಗಲೇ ಗುರುತಿಸಿರುವ ಪಟ್ಟಿ ಆಶಾದಾಯಕವಾಗಿದೆ. ಪ್ರಸ್ತುತ ಮಾಲೆಯ ಪ್ರಥಮ ಪ್ರಯೋಗದ ಈ ಪುಸ್ತಕಗಳಲ್ಲಿ ಇರುವ ಅರೆಕೊರೆಗಳನ್ನು ಮನ್ನಿಸಿ ಹಂಸಕ್ಷೀರ ನ್ಯಾಯದಂತೆ ಇವನ್ನು ಸ್ವೀಕರಿಸಬೇಕೆಂದು ನಮ್ಮ ಓದುಗ ಬಾಂಧವರಲ್ಲಿ ಪ್ರಾರ್ಥನೆ. ಸಲಹೆ, ಸೂಚನೆಗಳಿಗೆ ಸದಾ ಸ್ವಾಗತವಿದೆ.

ಈ ಸಾಧಕರ ಮಾಲೆಯ ಉಪಯೋಗ ಮತ್ತು ಔಚಿತ್ಯ ಉಲುಚುಕಮ್ಮೆ ಸಮುದಾಯಕ್ಕಷ್ಟೇ ಸೀಮಿತವಲ್ಲ. ಈ ಸಾಧಕರೆಲ್ಲಾ ಸರ್ವ ಸಮಾಜದ ಹಿತ, ಅಭಿವೃದ್ಧಿ, ಶ್ರೇಯಸ್ಸುಗಳಿಗಾಗಿ ದುಡಿದವರು. ಹಾಗೂ ತಾವು ಆರಿಸಿಕೊಂಡ ರಂಗದಲ್ಲಿ ಚರಿತ್ರಾರ್ಹ ಸಾಧನೆಗಳನ್ನು ಮಾಡಿರುವವರು. ಹಾಗಾಗಿ ಇವರೆಲ್ಲರ ಜೀವನ ಚರಿತ್ರೆಗಳು ಇಡೀ ಸಮಾಜಕ್ಕೆ ಪ್ರಸ್ತುತ.

ಅಲ್ಲದೆ ಇದಕ್ಕೆ ಇನ್ನೂ ಒಂದು ಆಯಾಮವಿದೆ. ಇತಿಹಾಸಕಾರರು ಮತ್ತು ಸಮಾಜ ವಿಜ್ಞಾನಿಗಳ ಪ್ರಕಾರ ಮಾನವ ಜನಾಂಗದ ನಾಗರೀಕತೆಯ ಉಳಿವು ಮತ್ತು ವಿಕಾಸಕ್ಕೆ ಕೆಲವೇ ಬೆರಳೆಣಿಸುವಷ್ಟು ಮಂದಿ ಶ್ರದ್ಧಾವಂತ ವ್ಯಕ್ತಿಗಳ ಕಾರ್ಯಸಾಧನೆಗಳೇ ಮೂಲಧಾತುಗಳು; ಹಾಗೂ ಈ ರೀತಿಯ ಗುರಿಯನ್ನೂ, ಜನಹಿತಸಾಧನೆಯೇ ಜೀವನದ ಸಾರ್ಥಕ್ಯ ಎಂಬ ಮೌಲ್ಯವನ್ನೂ ಮನದಟ್ಟು ಮಾಡಿಸಿ, ಅವರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡುವುದು ವಿಶೇಷವಾಗಿ ಸಣ್ಣ ಸಮುದಾಯಗಳು. ಇವುಗಳ ಜೀವನ ಮೌಲ್ಯಗಳು, ಅದಕ್ಕೆ ಪೂರಕವಾದ ಜೀವನ ವಿಧಾನ ಇವೆಲ್ಲಾ ಈ ಸಮುದಾಯಗಳ ವಿಶಿಷ್ಠ ಸಂಸ್ಕಾರವಾಗಿ ಪರಂಪರಾನುಗತವಾಗಿ ಮುಂದುವರಿಯುತ್ತಿರುತ್ತವೆ. ಇಂತಹ ಸಮುದಾಯುಗಳು ವಿಶ್ವದ ಎಲ್ಲೆಡೆ ಅಲ್ಲಲ್ಲಿ ಕಂಡುಬರುವುದಾದರೂ, ಭಾರತದಲ್ಲಿ ಇದ್ದ ಇಂತಹ ಒಂದು ಚಿಕ್ಕ ಸಮುದಾಯ ಗುಣಕರ್ಮವಿಭಾಗಶಃ ಗುರುತಿಸಲ್ಪಡುತ್ತಿದ್ದ ಬ್ರಾಹ್ಮಣವರ್ಣ. ಆದರೆ ಕಳೆದ ಎರಡು ಸಾವಿರ ವರ್ಷಗಳಿಂದೀಚೆಗೆ ಕಾರಣಾಂತರಗಳಿಂದ ಈ ಬ್ರಾಹ್ಮಣವರ್ಣವು ಬ್ರಾಹ್ಮಣ ಜಾತಿಯಾಗಿ ಬದಲಾಗಿ

ಮುಂದೆ ಮತ್ತಷ್ಟು ಉಪಪಂಗಡಗಳಾಗಿ ವಿಭಜಿತಗೊಂಡಿದೆ. ಆದರೂ ಈ ಸಣ್ಣಸಮುದಾಯಗಳು ದಯೆ, ದಾನ, ಅಹಿಂಸೆ, ಜ್ಞಾನ, ಲೋಕಸಂಗ್ರಹ ಇತ್ಯಾದಿ ಮೂಲ ಬ್ರಾಹ್ಮಣಮೌಲ್ಯಗಳು ಹಾಗೂ ಅವುಗಳನ್ನು ರೂಢಿಸಿಕೊಳ್ಳಲು ಉಪಯುಕ್ತವಾದ ಸಂಪ್ರದಾಯಗಳನ್ನೂ ಉಳಿಸಿಕೊಂಡು ಬಂದಿವೆ. ಇಂತಹ ಸಂಸ್ಕಾರದಿಂದ ಪ್ರಭಾವಿತರಾದ ಸಾಧಕರ ಜೀವನಚರಿತ್ರೆಗಳು ಭಾರತೀಯ ಸಾಮಾಜಿಕಚರಿತ್ರೆಯ ದಾಖಲೆಗಳೂ ಹೌದು.

ಈ ಮಾಲೆಯ ಮಹತ್ಕಾರ್ಯವನ್ನು ನಡೆಸಿಕೊಡಲು ನನ್ನನ್ನು ಆಹ್ವಾನಿಸಿ ಹಾಗೂ ಇದರ ಸಾಧನೆಗೆ ಎಲ್ಲ ರೀತಿಯ ಸಹಕಾರವನ್ನು ಒದಗಿಸಿರುವ ಉಲುಚುಕಮ್ಮೆ ಬ್ರಾಹ್ಮಣ ಮಹಾಸಭೆಯ ಗೌರವ ಅಧ್ಯಕ್ಷರಾದ ಶ್ರೀ ಅಶ್ವತ್ಥನಾರಾಯಣರಾವ್, ಗೌರವ ಉಪಾಧ್ಯಕ್ಷರಾದ ಶ್ರೀ ಪ್ರಭಾಕರ್, ಉತ್ಸಾಹೀ ಕಾರ್ಯದರ್ಶಿ ಶ್ರೀ ಮಂಜುನಾಥ್ ಹಾಗೂ ಇತರೆ ಎಲ್ಲಾ ಪದಾಧಿಕಾರಿಗಳಿಗೂ ನಾನು ಆಭಾರಿಯಾಗಿದ್ದೇನೆ. ಈ ಮಾಲೆಯ ವಿಚಾರವನ್ನು ಮುಂದಿಟ್ಟು, ಅದರ ಸಾಧನೆಗೆ ಶ್ರಮಿಸಿರುವ ಮಾಲೆಯ ಸಂಚಾಲಕರಾದ ಶ್ರೀ ಟಿ.ಆರ್. ಅನಂತರಾಮು ಅವರಿಗೂ, ಆಸಕ್ತಿ, ಶ್ರದ್ಧೆಯಿಂದ ಸಂಪಾದನಾಕಾರ್ಯದಲ್ಲಿ ಭಾಗಿಗಳಾಗಿರುವ ಸಂಪಾದಕಮಂಡಳಿಯ ಎಲ್ಲಾ ಮಿತ್ರರಿಗೂ ನನ್ನ ಕೃತಜ್ಞತೆಗಳು.

ಹೊಸಗನ್ನಡ ಗದ್ಯ ಶ್ರೀಮಂತಿಕೆಯನ್ನು ಬೆಳೆಸಿ, ಶಿಕ್ಷಣ, ಇತಿಹಾಸ, ಆಧ್ಯಾತ್ಮ ಇತ್ಯಾದಿ ಅನೇಕ ವಿಷಯಗಳ ಬಗ್ಗೆ ಸುಮಾರು ೮೦ ಕೃತಿಗಳನ್ನು ಬರೆದಿರುವ ಹೊಸಕೆರೆ ಚಿದಂಬರಯ್ಯನವರು ಸಂಸಾರದಲ್ಲಿದ್ದೂ ಯೋಗಿ ಜೀವನವನ್ನು ನಡೆಸಿದವರು. ಯಾವುದೇ ರಂಗವಾದರೂ ಲೋಕಸಂಗ್ರಹಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟವರು. ಇಂತಹ ಮಹಾ ಚೇತನದ ಬಗ್ಗೆ ಆಳವಾದ ಸಂಶೋಧನೆಯನ್ನು ಕೈಗೊಂಡು, ಅನೇಕ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ, ಈ ಚೊಕ್ಕ ಕೃತಿಯನ್ನು ರಚಿಸಿರುವವರು ಕನ್ನಡದ ಸಿದ್ಧ ಲೇಖಕರಲ್ಲಿ ಒಬ್ಬರಾದ ಪ್ರೊಫೆಸರ್ ಜಿ. ಅಶ್ವತ್ಥನಾರಾಯಣ ಅವರು ಎಂದು ಹೇಳಿಕೊಳ್ಳುವುದೇ ನಮಗೆ ಹೆಮ್ಮೆಯ ವಿಷಯ. ಬಹುಶಃ ಶ್ರೀ ಚಿದಂಬರಯ್ಯನವರ ಬಗ್ಗೆ ಗ್ರಂಥ ರೂಪದಲ್ಲಿ ರಚಿತವಾಗಿರುವ ಪ್ರಥಮ ಕೃತಿ ಇದೇ. ಈ ಕೃತಿಯನ್ನು ನಮಗೆ ಬರೆದುಕೊಟ್ಟದ್ದಕ್ಕಾಗಿ ಪ್ರೊಫೆಸರ್ ಅಶ್ವತ್ಥನಾರಾಯಣ ಅವರಿಗೆ ನಮ್ಮ ಅನಂತಾನಂತ ವಂದನೆಗಳು. ಹಾಗೆಯೇ ಅಚ್ಚುಕೃತಿಯನ್ನು ಪರಿಶೀಲಿಸಲು ಶ್ರೀಯುತ ಎನ್. ಆನಂದ ರಾಮರಾವ್ ಮತ್ತು ನೆ.ಲ. ರಾಮಮೂರ್ತಿ ನೆರವಿತ್ತಿದ್ದಾರೆ. ಇವರಿಗೂ ನಮ್ಮ ಕೃತಜ್ಞತೆಗಳು.

ಈ ಬರಹವನ್ನು ಪುಸ್ತಕರೂಪದಲ್ಲಿ ತರಲು ನಮ್ಮ ಕಡೆಯಿಂದ ಆಗಾಗ್ಗೆ ಅನೇಕ ತೊಂದರೆಗಳು ಉಂಟಾಗುತ್ತಿದ್ದರೂ, ನಗುಮುಖದಿಂದ ಸಹಕರಿಸಿ, ಅಚ್ಚುರೂಪಕ್ಕೆ ಸುಂದರವಾಗಿ ಸಿದ್ಧಪಡಿಸಿದ ಚಿ.ಸೌ. ಆಶಾರವರಿಗೂ ಹಾಗೂ ಇದನ್ನು ಮುದ್ದಾಗಿ ಮುದ್ರಿಸಿದ ಪರಿಶ್ರೀ ಪ್ರಿಂಟರ್ಸ್‌ನ ಮಾಲೀಕರಾದ ಆರ್. ಶ್ರೀನಾಥ್ ರವರಿಗೂ ನನ್ನ ಅಭಿನಂದನೆಗಳು.

ಎಸ್. ನಾಗರಾಜು

ಪ್ರಧಾನ ಸಂಪಾದಕ

ಉಲುಚುಕಮ್ಮೆ ಸಾಧಕರ ಮಾಲೆ

ಲೇಖಕರ ಮಾತು

ನನಗೆ ತಿಳಿದಂತೆ ಹೊಸಕೆರೆ ಚಿದಂಬರಯ್ಯನವರನ್ನು ಕುರಿತು ಗ್ರಂಥರೂಪದಲ್ಲಿ ಬರುತ್ತಿರುವ ಮೊದಲ ಪುಸ್ತಕ ಇದು. ಇದೊಂದು ಕಿರು ಪ್ರಯತ್ನ. ಕನ್ನಡ ನಾಡಿನಲ್ಲಿ ಹೊಸಗನ್ನಡ ಗದ್ಯವನ್ನು ಶ್ರೀಮಂತಗೊಳಿಸಿರುವ ಅಗ್ರಗಣ್ಯರಲ್ಲಿ ಹೊಸಕೆರೆ ಚಿದಂಬರಯ್ಯನವರು ಒಬ್ಬರಾದರೂ ಅವರನ್ನು ನಾಡಿನ ಸಾಹಿತಿಗಳು, ವಿದ್ವಾಂಸರು ಲಕ್ಷಿಸದೆ ಇರುವುದು ವಿಷಾದದ ಸಂಗತಿ. ಹೊಸಗನ್ನಡ ಸಾಹಿತ್ಯದಲ್ಲಿ ಅವರಿಗೆ ಸಲ್ಲಬೇಕಾದ ಸ್ಥಾನ ಸಂದಿಲ್ಲ. ಅವರ ಜೀವನ ಭವ್ಯ, ಸಾಧನೆ ಗಣ್ಯ, ಸಾಹಿತ್ಯ ಸೇವೆ ವಿಶಿಷ್ಟ ಆಗಿದೆ. ಛಂದಸ್ಸು, ಕೀರ್ತನೆ, ನಾಟಕ, ಹರಿಕಥೆ, ಭಾಷಣಸಂಗ್ರಹ, ಅನುವಾದ, ಕಾವ್ಯ, ಜೀವನಚರಿತ್ರೆ, ಭಗವದ್ಗೀತಾನುವಾದ, ಪತ್ರಿಕಾ ಸಂಪಾದಕತ್ವ, ಸ್ತೋತ್ರಸಾಹಿತ್ಯ ಶಿಕ್ಷಣ, ಅಧ್ಯಾತ್ಮ ಸಾಹಿತ್ಯ ಕ್ಷೇತ್ರಗಳಲ್ಲಿ ಕನ್ನಡಕ್ಕೆ ವಿಶಿಷ್ಟ ಕೃತಿಗಳನ್ನು ಮೊದಲ ಕೃತಿಗಳನ್ನು ಕೊಟ್ಟವರು ಅವರು. ಅವರ ಬಗ್ಗೆ ಅಲ್ಲಲ್ಲಿ ಒಂದಷ್ಟು ಲೇಖನಗಳು ಬಂದಿವೆ. ಈ ಲೇಖನಗಳಿಗೆಲ್ಲ ಆಧಾರ ವೈ. ಸುಬ್ಬರಾಯರ ಆತ್ಮಕಥೆ ಎನ್ನಬಹುದು. ಅವರು ಚಿದಂಬರಯ್ಯನವರ ಸಹೋದ್ಯೋಗಿಗಳಾಗಿದ್ದು ಜೀವನದ ಕಷ್ಟನಷ್ಟಗಳಲ್ಲಿ ಪಾಲುಗಾರರಾಗಿದ್ದು ಅತ್ಯಂತ ಆತ್ಮೀಯ ಜೀವಗೆಳೆಯರಾಗಿದ್ದರು. ಹೊಳೆನರಸೀಪುರದ ಅಧ್ಯಾತ್ಮ ಪ್ರಕಾಶನಾಲಯದ ಶ್ರೀ ಸಚ್ಚಿದಾನಂದ ಶ್ರೀ ಸರಸ್ವತಿ ಸ್ವಾಮಿಗಳವರ ಆತ್ಮಕಥೆಯೇ ಚಿದಂಬರಯ್ಯನವರ ಜೀವನಚರಿತ್ರೆ ಬರೆಯಲು ಮುಖ್ಯಾಧಾರವಾಗಿದೆ. ಅವರಿಗೆ ಅವರ ಗ್ರಂಥಕ್ಕೆ ಋಣಿ ಆಗಿದ್ದೇನೆ. ಮತ್ತು ಚಿದಂಬರಯ್ಯನವರ ಸೊಸೆ ಗುಂಡಮ್ಮನವರ ಸಂದರ್ಶನದಿಂದ, ಮೊಮ್ಮಗ ಚಿದಂಬರ ಹಾಗೂ ಇತರ ಬಂಧುವರ್ಗದಿಂದ ಸಾಕಷ್ಟು ಮಾಹಿತಿ ದೊರೆತಿದೆ. ಅವರಿಗೆಲ್ಲಾ ನನ್ನ ಕೃತಜ್ಞತೆಗಳು.

ಹೊಸಕೆರೆ ಚಿದಂಬರಯ್ಯನವರ ಜೀವನಚರಿತ್ರೆ ಬರೆಯಲು ಅನೇಕರು ಪ್ರೋತ್ಸಾಹಿಸಿದ್ದಾರೆ. ಲಕ್ಷ್ಮೀನಾರಾಯಣ, ನರಸಿಂಹಮೂರ್ತಿ, ಅನಂತರಾಮು, ರಾಘವೇಂದ್ರ, ಚಿದಂಬರ ಮೊದಲಾದ ಸಹೃದಯರು ಮಿತ್ರರು, ನಾನಾವಿಧದಲ್ಲಿ ನೆರವಾಗಿದ್ದಾರೆ.

ಹೊಸಕೆರೆ ಚಿದಂಬರಯ್ಯನವರನ್ನು ಕಂಡವರು, ಅವರ ಬಗ್ಗೆ ತಿಳಿದವರು, ಅವರ ಸಾಹಿತ್ಯ ಸಂಗ್ರಹಿಸಿದವರು, ಪ್ರಕಟಿಸಿದವರು, ಓದಿದವರು, ಪ್ರಚಾರ ಮಾಡಿದವರು ಅನೇಕರಿದ್ದಾರೆ. ಅವರೆಲ್ಲರು ಚಿದಂಬರಯ್ಯನವರ ಬಗ್ಗೆ ತಿಳಿದಷ್ಟು ಲೇಖಕನಿಗೆ ಮಾಹಿತಿ ನೀಡಬೇಕಾಗಿ ಬಿನ್ನಹ. ಅವರ ಗ್ರಂಥ ಲೇಖನಗಳು ನಾಡಿನಲ್ಲೆಲ್ಲಾ ಚೆದುರಿವೆ. ಯಾರಲ್ಲಾದರೂ ಗ್ರಂಥ ಮಾಹಿತಿ ಇದ್ದರೆ ಅದನ್ನು ಕಳಿಸಿದರೆ ಉಪಕಾರವಾಗುತ್ತದೆ.

ಹೊಸಕೆರೆ ಚಿದಂಬರಯ್ಯನವರ ಜೀವನದ ಬಗ್ಗೆ ಕೃತಿಗಳ ಬಗ್ಗೆ ಸಂಶೋಧನೆ ಮಾಡಿ ಬೃಹತ್ ಗ್ರಂಥ ರಚಿಸುವ ಅಗತ್ಯವಿದೆ. ಆ ದಿಸೆಯಲ್ಲಿ ಇದು ಕಿರುಪ್ರಯತ್ನ. ಸಮಾಜದ ಹಿರಿಯರು ಶ್ರೀಮಂತರು ಆಸಕ್ತವ್ಯಕ್ತಿಗೆ ಸಂಶೋಧನ ವೇತನ ನೀಡಿ ಬೃಹತ್ ಗ್ರಂಥ ರಚನೆಗೆ ನೆರವಾಗಬಹುದು. ಅವರ ಹೆಸರಿನಲ್ಲಿ ನೆನಪಿನ ದತ್ತಿ ನಿಧಿಯೊಂದನ್ನು ಇಟ್ಟು ಪ್ರತಿವರ್ಷ

ಅವರ ಕೃತಿಗಳ ಬಗ್ಗೆ ಉಪನ್ಯಾಸಗಳನ್ನು ನಾಡಿನ ನಾನಾ ಕಡೆಗಳಲ್ಲಿ ಏರ್ಪಡಿಸಿ ಜನ ಅವರನ್ನು ಮರೆಯದಂತೆ ಮಾಡಬೇಕು. ಕೊನೆಯಪಕ್ಷ ಅವರ ಜನ್ಮದಿನ ಮತ್ತು ದೈವಾಧೀನರಾದ ದಿನಗಳಲ್ಲಾದರೂ ಕಾರ್ಯಕ್ರಮ ನಡೆಸಬೇಕಾದ್ದು ಅಗತ್ಯವಾಗಿದೆ.

ಕನ್ನಡನಾಡು-ನುಡಿಗಳಿಗೆ ಮತ್ತು ಉಲುಚುಕಮ್ಮೆ ಪಂಗಡದವರಿಗೆ ಹೆಮ್ಮೆಯನ್ನು ತಂದ ಹಿರಿಯರಲ್ಲಿ ಅಗ್ರಗಣ್ಯರು ಹೊಸಕೆರೆ ಚಿದಂಬರಯ್ಯನವರು. 'ಆದರ್ಶದ ಬದುಕು ನಡೆಸಿ, ಶ್ರೇಷ್ಠ ಗ್ರಂಥಗಳನ್ನು ರಚಿಸಿ ಮುಂದಿನ ಜನಾಂಗಕ್ಕೆ ಮಾರ್ಗದರ್ಶಕರೂ ಸ್ಫೂರ್ತಿವಂತರಾದವರೂ ಆದ ವಿದ್ಯಾರಣ್ಯರು ಉಲುಚುಕಮ್ಮೆ ಪಂಗಡದವರು ಭಾರದ್ವಾಜಗೋತ್ರದವರು' ಎಂಬಂಶವನ್ನು ಬೆಳಕಿಗೆ ತಂದವರು ಹೊಸಗನ್ನಡ ಗದ್ಯ ನಿರ್ಮಾಪಕರು ಚಿದಂಬರಯ್ಯನವರು. ಇಂಥವರ ಬಗ್ಗೆ ಕೃತಿಯನ್ನು ಪ್ರಕಟಿಸಲು ನಿರ್ಧರಿಸಿದ ಉಲುಚುಕಮ್ಮೆ ಮಹಾಸಭಾದ ಆಡಳಿತವರ್ಗದವರು ಗ್ರಂಥ ಪ್ರಕಟಣೆಗೆ ಮುಂದಾಗಿರುವುದು ಅಭಿನಂದನೀಯವಾಗಿದೆ.

ಈ ಕೃತಿಯನ್ನು ಪ್ರಕಟಿಸಲು ಅವಕಾಶವಿತ್ತ ಉಲುಚುಕಮ್ಮೆ ಮಹಾಸಭಾದ ಆಡಳಿತವರ್ಗಕ್ಕೆ ಮತ್ತು ಮಾಲೆಯ ಸಂಪಾದಕವರ್ಗಕ್ಕೆ ನಾನು ಆಭಾರಿಯಾಗಿದ್ದೇನೆ.

- ಪ್ರೊ. ಜಿ. ಅಶ್ವತ್ಥನಾರಾಯಣ
ನಿವೃತ್ತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು

ಕರ್ನಾಟಕ ಕವಿರತ್ನ

ಹೊಸಕೆರೆ ಚಿದಂಬರಯ್ಯ

ಪೀಠಿಕೆ

ಹೊಸಗನ್ನಡದ ಗದ್ಯಶಿಲ್ಪಿ : ಕನ್ನಡದಲ್ಲಿ ಶಿವರಾಮ ಕಾರಂತರ ಹಾಗೆ, ನಾಟಕ, ಕಥೆ, ಕಾದಂಬರಿ, ವೇದಾಂತ, ಅನುವಾದ, ಟೀಕೆ, ಜೀವನಚರಿತ್ರೆ, ಕೀರ್ತನೆ, ಹರಿಕಥೆ, ವಿಮರ್ಶೆ, ಕಾವ್ಯ, ಕವಿತೆ ಶಿಕ್ಷಣ, ಪ್ರಬಂಧ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ೮೦ಕ್ಕೂ ಹೆಚ್ಚಿನ ಗ್ರಂಥಗಳನ್ನು ರಚಿಸಿ ಸ್ವಾತಂತ್ರ್ಯಪೂರ್ವದಲ್ಲಿ ೨೦ನೇ ಶತಮಾನದ ಮೊದಲ ೪ ದಶಕಗಳಲ್ಲಿ ಕನ್ನಡ ಜಾಗೃತಿಗೆ ಸಾಹಿತ್ಯ ರಚನೆ ಮಾಡಿದ ಅದ್ವಿತೀಯ ಸಾಹಿತಿಗಳು, ವಿದ್ವಾಂಸರು ಹೊಸಕೆರೆ ಚಿದಂಬರಯ್ಯನವರು. ಹೊಸಗನ್ನಡ ಗದ್ಯವನ್ನು ನಿರ್ಮಿಸಿದವರಲ್ಲಿ ಅಗ್ರಗಣ್ಯರು. ದ.ಕೃ. ಭಾರದ್ವಾಜರು ಹೇಳಿದಂತೆ "ಶುದ್ಧ ಸರಳ ಗಂಭೀರ ಗದ್ಯರಚನೆಯ ಹಳಬರಲ್ಲಿ ಒಬ್ಬರು ಚ. ವಾಸುದೇವಯ್ಯ, ಇನ್ನೊಬ್ಬರು ಹೊಸಕೆರೆ ಚಿದಂಬರಯ್ಯನವರು ಮತ್ತು ಕನ್ನಡದಲ್ಲಿ ಅಧ್ಯಾತ್ಮಿಕ ಸಾಹಿತ್ಯ ಗ್ರಂಥಗಳನ್ನು ಹೆಚ್ಚಾಗಿ ಬರೆದವರಲ್ಲಿ ಮೊದಲನೆಯವರು" (ಕನ್ನಡ ನುಡಿ ಲೇಖನ ದ.ಕೃ.ಭಾ).

ಕನ್ನಡದಲ್ಲಿ ಆಲೂರು ವೆಂಕಟರಾಯರ ಹಾಗೆ, ದೇವುಡು ನರಸಿಂಹ ಶಾಸ್ತ್ರಿಗಳ ಹಾಗೆ, ಭಗವದ್ಗೀತೆಯನ್ನು ಕುರಿತು ಗ್ರಂಥಗಳನ್ನು ರಚಿಸಿ ಪ್ರವಚನ ಪ್ರಚಾರ ಮಾಡಿದ ಗೀತಾಸಾಹಿತಿಗಳು; ಹರಿಕಥೆಗಳ ರಚನೆ ಮಾಡಿ ಆ ಮೂಲಕ ಕೀರ್ತನೆ ಸಾಹಿತ್ಯವನ್ನು ವಿಶಿಷ್ಟ ರೀತಿಯಲ್ಲಿ ರಚಿಸಿದವರು. ವಿದ್ಯಾರ್ಥಿಗಳಿಗೆ ಅಧ್ಯಾಪಕರಿಗೆ ಶಿಕ್ಷಣಸಾಹಿತ್ಯ ರಚಿಸಿದ ಶಿಕ್ಷಕರು. ಉಪನಿಷತ್ತು, ಬ್ರಹ್ಮಸೂತ್ರ ಭಗವದ್ಗೀತೆಗಳನ್ನು ಅಚ್ಚಗನ್ನಡದಲ್ಲಿ ಅಚ್ಚುಕಟ್ಟಾಗಿ ಹೊಸಗನ್ನಡ ಗದ್ಯದಲ್ಲಿ ಕನ್ನಡಕ್ಕೆ ಕೊಟ್ಟವರಲ್ಲಿ ಅಗ್ರಗಣ್ಯರು. ಸ್ವದೇಶೀ ಚಳವಳಿಯಲ್ಲಿ ಭಾಗವಹಿಸಿದ ದೇಶಾಭಿಮಾನಿ, ಕಥೆ, ನಾಟಕ, ಪದ್ಯ, ಪ್ರಬಂಧ, ಜೀವನ ಚರಿತ್ರೆ ಇತ್ಯಾದಿ ರಚಿಸಿದ ಹೊಸಗನ್ನಡ ಸಾಹಿತಿ, ವಿದ್ಯಾರಣ್ಯ ಕಾವ್ಯ ಬರೆದ ಕರ್ನಾಟಕ ಕವಿರತ್ನ, ಅನುಭವಾಮೃತ, ಮಲ್ಲಾರಿ ಮಹಾತ್ಮೆಗಳ ಗ್ರಂಥ ಸಂಪಾದಕ ಮತ್ತು ಟೀಕಾಕಾರ, ಹೀಗೆ ಕನ್ನಡಕ್ಕೆ ಬಹುಮುಖ ಸೇವೆ ಸಲ್ಲಿಸಿದ ಪ್ರತಿಭಾವಂತ ಸಾಹಿತಿ ವಿದ್ವಾಂಸರು ಹೊಸಕೆರೆ ಚಿದಂಬರಯ್ಯನವರು.

ಜನ ಮರೆತ ಪ್ರಸಿದ್ಧ ಸಾಹಿತಿ

ಇಂಥ ಸವ್ಯಸಾಚಿ ಸಾಹಿತಿಯನ್ನು ಅವರ ಸಾಹಿತ್ಯ ಸೇವೆಯನ್ನು ನಮ್ಮ ನಾಡಿನ ಸಾಹಿತ್ಯ ಚರಿತ್ರಕಾರರು ಗಮನಿಸದಿರುವುದು ವಿಷಾದದ ಸಂಗತಿ. ಕರ್ನಾಟಕ ಕವಿಚರಿತೆ ಬರೆದ

ಆರ್. ನರಸಿಂಹಾಚಾರ್ಯರು ಸಮಕಾಲೀನರು. ಇವರು ತಮ್ಮ ಕವಿಚರಿತೆಯ ೩ನೇ ಭಾಗದಲ್ಲಿ ೧೭೦೦ ರಿಂದ ೧೯೦೦ ರವರೆಗಿನ ಕವಿಗಳ ಬಗ್ಗೆ ಬರೆಯುತ್ತಾ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಬದುಕಿದವರ ಬಗ್ಗೆ ಹೇಳಿರುವ ಮಾತುಗಳಿವು (ಪುಟ ೨೧೮, ಭಾಗ ೩).

"ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಇನ್ನೂ ಅನೇಕರು ಗ್ರಂಥ ರಚನೆ ಮಾಡಿದ್ದಾರೆ. ಆದರೆ ಇವರ ಚರಿತವನ್ನೆಲ್ಲಾ ವಿವರವಾಗಿ ಬರೆಯಲು ಸಾಧ್ಯವಿಲ್ಲ. ಇದಲ್ಲದೆ ಇವರುಗಳಲ್ಲಿ ನಿಜವಾಗಿಯೂ ಕವಿಗಳು ಎಂದು ಹೇಳಿಸಿಕೊಳ್ಳುವುದಕ್ಕೆ ಕೆಲವರೇ ಯೋಗ್ಯರಾಗಿರುತ್ತಾರೆ......"

ಇದಕ್ಕಿಂತ ಗಮನಾರ್ಹವಾದ ಮತ್ತೊಂದು ಮಾತು ಹೇಳಿದ್ದಾರೆ. ಜೀವಂತರಾದ ಗ್ರಂಥಕರ್ತರ ಹೆಸರನ್ನು ನಾವು ಎತ್ತುವುದಿಲ್ಲ. ಹೀಗಾಗಿ ಕವಿಚರಿತಕಾರರು ಹೊಸಕೆರೆ ಚಿದಂಬರಯ್ಯನವರನ್ನು ಕೈಬಿಟ್ಟರು. ಪರಿಣಾಮವಾಗಿ ಕನ್ನಡ ಸಾಹಿತ್ಯಾಭ್ಯಾಸಿಗಳ ಕಣ್ಣಿಗೆ ಅವರು ಬೀಳಲೇ ಇಲ್ಲ.

ಶ್ರೀನಿವಾಸ ಹಾವನೂರ ಅವರ ಅದ್ವಿತೀಯ ಸಾಹಿತ್ಯ ಚರಿತ್ರೆ ಗ್ರಂಥ 'ಹೊಸಗನ್ನಡದ ಅರುಣೋದಯ'ದಲ್ಲಿ ೧೯ನೇ ಶತಮಾನದ ಅಚ್ಚಿನ ಸಾಹಿತ್ಯವನ್ನು ಮಾತ್ರ ಸಮೀಕ್ಷಿಸಿದ್ದಾರೆ. ಅದರಲ್ಲಿ ಅವರು ಹೇಳಿದ ಮಾತುಗಳಿವು. "ಯಾವುದಾದರೊಂದು ಕೃತಿ ಇಲ್ಲವೇ ಲೇಖಕನ ವಿಚಾರ ಈ ಗ್ರಂಥದಲ್ಲಿ ಬಂದಿಲ್ಲವೆಂದು ಯಾರಿಗಾದರೂ ಅನಿಸಿದರೆ ಅದು ೧೯೦೦ಕ್ಕೆ ಮುಂಚಿನ ಅವಧಿಯದಿರಲಿಕ್ಕಿಲ್ಲ ಎಂಬ ಅಂಶವನ್ನು ಗಮನಿಸಬೇಕಾಗಿ ಬಿನ್ನಹ" ಎಂದಿದ್ದಾರೆ. ಆದರೆ ಹೊಸಕೆರೆ ಚಿದಂಬರಯ್ಯನವರು ೧೮೭೦ರಲ್ಲಿ ಜನಿಸಿದ್ದು ೩೦ನೇ ವಯಸ್ಸಿನೊಳಗೆ ಸಾಕಷ್ಟು ಕವಿತೆ, ಲೇಖನಗಳನ್ನು ಬರೆದಿದ್ದರು. ಉದಾಹರಣೆಗೆ ಅವರ ಕನ್ನಡ ಸುಶೀಲಾ ಪರಿಣಯ ನಾಟಕ ೧೮೯೯ರ ಜೂನಿನಲ್ಲಿ ಪ್ರಕಟವಾಗಿದೆ. ಹಾವನೂರರ ಕಣ್ಣಿಗೆ ಬಿದ್ದಿಲ್ಲ. ಇನ್ನು ಮೂಲ ಸಂಶೋಧನೆ ಇಲ್ಲದೆ ವ್ಯಕ್ತಿಗಳು ಬರೆದ ಸಾಹಿತ್ಯ ಚರಿತ್ರೆ ಗ್ರಂಥಗಳಲ್ಲಿ ಹೊಸಕೆರೆ ಚಿದಂಬರಯ್ಯನವರು ಕಾಣಿಸಿಕೊಳ್ಳದಿದ್ದರೆ ಆಶ್ಚರ್ಯವೇನಲ್ಲ. ಆದರೆ ಸಾಹಿತಿಗಳ ಸಮಗ್ರಾವಲೋಕನದ ಕೃತಿಗಳಲ್ಲೂ ಹೊಸಕೆರೆ ಚಿದಂಬರಯ್ಯನವರು ಕಾಣಿಸಿಕೊಂಡಿಲ್ಲ. ಉದಾಹರಣೆಗೆ ಮೂಡಬಿದಿರೆಯಲ್ಲಿ ನಡೆದ ೭೧ನೇ ಸಾಹಿತ್ಯ ಸಮ್ಮೇಳನದಲ್ಲಿ ಪ್ರಕಟವಾದ ಹೊಸಗನ್ನಡ ಸಾಹಿತಿಗಳ ಪರಿಚಯದ 'ಹೊಂಬಿದಿರು' ಬೃಹತ್ ಗ್ರಂಥದಲ್ಲಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ 'ಸಾಲು ದೀಪಗಳು' ಗ್ರಂಥದಲ್ಲಿ ೧೮೫೦ ರಿಂದ ೧೯೨೦ರವರೆಗಿನ ಸಾಹಿತ್ಯವನ್ನು ಕುರಿತ ಬೆಂಗಳೂರು ವಿಶ್ವವಿದ್ಯಾನಿಲಯದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ (೬ನೇಯ ಸಂಪುಟದಲ್ಲಿ) ಹೊಸಕೆರೆ ಚಿದಂಬರಯ್ಯನವರ ಪ್ರಸ್ತಾಪವಿಲ್ಲ. ಡಿವಿಜಿ ಅವರು ತಮ್ಮ ಜ್ಞಾಪಕ ಚಿತ್ರಶಾಲೆಯಲ್ಲೂ ನೆನಪಿಸಿಕೊಂಡಿಲ್ಲ. ಆದರೆ ಅವರಿಗೆ

ಚಿದಂಬರಯ್ಯನವರ ಪರಿಚಯವಿತ್ತು. ಆದರೆ ಡಿವಿಜಿ ಅವರೂ ಆರ್. ನರಸಿಂಹಾಚಾರ್ಯರ ಪಂಥದವರಾಗಿದ್ದು ಸ್ವತ್ತವರ ಕಥೆಗಳನ್ನಷ್ಟೇ ನೆನಪಿಸಿಕೊಂಡಿದ್ದಾರೆ.

ಇಷ್ಟಾದರೂ ಈ ಮಧ್ಯೆ ಕೆಲವರಾದರೂ ಅವರನ್ನು ಪ್ರಸ್ತಾಪಿಸಿರುವುದನ್ನು ನೆನಯಬೇಕಾಗಿದೆ.

ಕರ್ನಾಟಕ ವಿಷಯಕೋಶ ಮೈ.ವಿ.ವಿ. ಪ್ರಕಟಣೆಯಲ್ಲಿ ಚಿದಂಬರಯ್ಯನವರನ್ನು ಕುರಿತು ಲೇಖನ-ಚಿತ್ರವಿದೆ. ತುಮಕೂರು ಸಾಹಿತ್ಯ ಸಮ್ಮೇಳನದ ಸಂಚಿಕೆಯಲ್ಲಿ ಇದನ್ನೇ ಪುನರುದ್ರಿಸಿದ್ದಾರೆ. ವೆಂಕಟೇಶ ಸಾಂಗ್ಲಿ ಅವರು ೧೮೫೦ ರಿಂದ ೧೯೨೦ರವರೆಗಿನ ಗ್ರಂಥಕರ್ತರನ್ನು ಕುರಿತ ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ (ಭಾಗ ೧)ದಲ್ಲಿ ಲೇಖಕರ ಅತಿ ಸಂಕ್ಷಿಪ್ತ ಪರಿಚಯ, ಸುಮಾರು ೪೦ ಗ್ರಂಥಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಮೈ. ವಿ.ವಿ. ಕನ್ನಡ ಗ್ರಂಥಸೂಚಿಯಲ್ಲಿ ಸುಮಾರು ಗ್ರಂಥಗಳ ಉಲ್ಲೇಖಗಳಿವೆ. ಡಿ.ಕೆ. ಭಾರದ್ವಾಜರು ಮೊದಲಬಾರಿಗೆ ೧೯೩೯ ನವೆಂಬರ್ ೧೭ರ ಕನ್ನಡನುಡಿ ವಾರಪತ್ರಿಕೆಯಲ್ಲಿ ಚಿದಂಬರಯ್ಯನವರ ಬಗ್ಗೆ. ಉಪಯುಕ್ತ ಲೇಖನ ಬರೆದಿದ್ದಾರೆ.

ಎಲ್ಲದಕ್ಕಿಂತ ಹೆಚ್ಚಾಗಿ ಚಿದಂಬರಯ್ಯನವರ ಜತೆ ದೀರ್ಘಕಾಲ ಒಡನಾಡಿಗಳಾದ ವೈ. ಸುಬ್ಬರಾಯರು ಬರೆದ ಆತ್ಮಕಥೆಯಲ್ಲಿ ಬೇರೆಲ್ಲೂ ಸಿಗದಷ್ಟು ಮಾಹಿತಿಗಳನ್ನು ಚಿದಂಬರಯ್ಯನವರ ಬಗ್ಗೆ ನೀಡಿದ್ದಾರೆ. ಚಿದಂಬರಯ್ಯನವರು ನಿಧನರಾದಾಗ ಕನ್ನಡ ನಾಡಿನ ಪತ್ರಿಕೆಗಳೆಲ್ಲಾ ಸಂತಾಪದ ನುಡಿಗಳನ್ನು ಆಡಿದಾಗ ಸುಬ್ಬರಾಯರು ದೀರ್ಘ ಲೇಖನವನ್ನೇ ಬರೆದಿದ್ದಾರೆ. ಚಿದಂಬರಯ್ಯನವರ ಜೀವನ ಕುರಿತು ಬರೆಯುವವರಿಗೆಲ್ಲಾ ವೈ. ಸುಬ್ಬರಾಯರು ಬರೆದ ಗ್ರಂಥ (ಅನಂತರ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳಾದರು) ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ (ಸ್ವಹಸ್ತ) ಆತ್ಮಚರಿತ್ರೆ ಮತ್ತು ಕಾರ್ಯಾಲಯ ಇತಿಹಾಸ (ಭಾಗ-೧, ೨) ೨೦೦೬ ಪ್ರಕಟಣೆ ಬಹುಮುಖ್ಯ ಆಕರ ಆಗಿದೆ. ಪ್ರಸ್ತುತ ಗ್ರಂಥ ರಚನೆಗೂ ಮುಖ್ಯ ಆಕರಗಳಲ್ಲಿ ಒಂದಾಗಿದೆ.

ನಾಡಿನಾದ್ಯಂತ ವಿವಿಧ ಪತ್ರಿಕೆಗಳಲ್ಲಿ ಚಿದುರಿರುವ ಅವರ ಲೇಖನಗಳನ್ನು, ಅವರು ರಚಿಸಿರುವ ಸುಮಾರು ೮೦ ಗ್ರಂಥಗಳಲ್ಲಿ ಸಾಕಷ್ಟು ಗ್ರಂಥಗಳು ನೋಡಲೂ ಸಿಗುವುದಿಲ್ಲ. ಅವೆಲ್ಲವನ್ನು ಸಂಗ್ರಹಿಸಿ ಅಧ್ಯಯನ ಮಾಡಿ ಮತ್ತೆ ಜನಮಾನಸಕ್ಕೆ ಅವರನ್ನು ತಂದು ನಿಲ್ಲಿಸಬೇಕಾಗಿದೆ. ಆ ದಿಸೆಯಲ್ಲಿ ಕಿರುಪ್ರಯತ್ನ ಈ ಗ್ರಂಥ.

ಉಲುಚುಕಮ್ಮೆ ಪಂಗಡದ ಇತಿಹಾಸ

ಭಾರತದ ಬ್ರಾಹ್ಮಣವರ್ಗಗಳನ್ನು ಉತ್ತರ ಭಾರತದ ಬ್ರಾಹ್ಮಣ ಪಂಗಡಗಳು, ದಕ್ಷಿಣ ಭಾರತದ ಬ್ರಾಹ್ಮಣ ಪಂಗಡಗಳು ಎಂದು ಎರಡು ವರ್ಗಗಳಾಗಿ ವರ್ಗೀಕರಿಸುವುದುಂಟು. ಈ

ಪೈಕಿ ದಕ್ಷಿಣ ಭಾರತದ ಬ್ರಾಹ್ಮಣ ಪಂಗಡಗಳಲ್ಲಿ ಮುಖ್ಯವಾಗಿ (ಆದಿ) ತೆಲುಗು ಬ್ರಾಹ್ಮಣರು, (ದ್ರಾವಿಡ) ತಮಿಳು ಬ್ರಾಹ್ಮಣರು, (ಕರ್ನಾಟಕ) ಕನ್ನಡ ಬ್ರಾಹ್ಮಣರು ಎಂದು ಮೂರು ವರ್ಗಗಳನ್ನು ಕಾಣುತ್ತೇವೆ. ಈ ಪೈಕಿ ಕನ್ನಡ ಬ್ರಾಹ್ಮಣರಲ್ಲಿ ಇತರ ಬ್ರಾಹ್ಮಣ ವರ್ಗಗಳಲ್ಲಿ ಇರುವಂತೆಯೇ ಅನೇಕ ಒಳಪಂಗಡಗಳಿವೆ. ಅರವತ್ತೊಕ್ಕಲು, ಉಲುಚುಕಮ್ಮೆ, ಕಂದಾವರ, ಕನ್ನಡಕಮ್ಮೆ, ಕೋಟಾ, ಬಡಗನಾಡು, ಬಬ್ಬೂರುಕಮ್ಮೆ, ಹೊಯ್ಸಳ ಕರ್ನಾಟಕ, ಶಿವಳ್ಳಿ, ಸೀರನಾಡು, ಹವ್ಯಕ ಇತ್ಯಾದಿ ಒಳಪಂಗಡಗಳನ್ನು ಡಾ. ವೆಂಕಟಾಚಲಶಾಸ್ತ್ರಿಗಳು ತಮ್ಮ ಮುಲಕನಾಡು ಬ್ರಾಹ್ಮಣರು ಗ್ರಂಥದಲ್ಲಿ (ಪು.೭) ಗುರುತಿಸಿದ್ದಾರೆ. ಈ ಪೈಕಿ ಉಲುಚುಕಮ್ಮೆ ಅವರನ್ನು ಕುರಿತು ಶಾಸ್ತ್ರಿಗಳು ಹೇಳಿರುವ ಮಾತುಗಳಿವು - "ಕರ್ನೂಲಿನ ವಾಯುವ್ಯ ದಿಕ್ಕಿಗೆ ಹತ್ತು ಮೈಲಿ ದೂರದಲ್ಲಿರುವ ಉಲಚಾಲ ಗ್ರಾಮದಿಂದ ವಲಸೆ ಬಂದವರು ಉಲಿಚಿಕಮ್ಮೆ ಪಂಗಡದ ಬ್ರಾಹ್ಮಣರು. ಈಗ ಈ ಪ್ರದೇಶ ಆಂಧ್ರದಲ್ಲಿದ್ದರೂ ಕೆಲವು ಶತಮಾನಗಳ ಹಿಂದೆ ಕರ್ನಾಟಕದಲ್ಲಿಯೇ ಇತ್ತು. ಇದರಲ್ಲಿ ಸ್ಮಾರ್ತರೂ ದ್ವೈತಿಗಳೂ ಇದ್ದಾರೆ. ಕನ್ನಡ ಮನೆಮಾತು ಆದರೂ ವಿರಳವಾಗಿ ತೆಲುಗು ಮಾತಾಡುವವರೂ ಇದ್ದಾರೆ. ಇವರು ಬೆಂಗಳೂರು ಕೋಲಾರ ಮೊದಲಾದ ಜಿಲ್ಲೆಗಳಲ್ಲಿ ಹರಡಿದ್ದಾರೆ." ('ಮುಲಕನಾಡುಬ್ರಾಹ್ಮಣರು' ಪುಟ ೭, ಟಿ.ವಿ.ವೆಂ.ಶಾಸ್ತ್ರಿ)

ಈ ರೀತಿ ನಾಡುಗಳ ಮತ್ತು ಊರುಗಳ ಹೆಸರಿನಿಂದ ವಿದಿತವಾದ ಅನೇಕ ಪಂಗಡಗಳ ಹಾಗೆ ಉಲಿಚಿಕಮ್ಮೆ ಎಂಬ ಪಂಗಡವೂ ಒಂದು ಊರಿನ ಹೆಸರಿನಿಂದಲೇ ಹುಟ್ಟಿದೆ. ಉಲಿಚಿಕಮ್ಮೆ ಪದವನ್ನು ಹೀಗೆ ವಿಶ್ಲೇಷಿಸಿದ್ದಾರೆ:

'ಉಲ್ಚಕಮ್ಮಿ ಎಂಬ ಪದದಲ್ಲಿ ಪೂರ್ವಪದ ಉಲ್ಚ ಪದವು - ಉಲ್ಚಾಳ್ ಎಂಬ ಊರಿನ ಹೆಸರಿನ ರೂಪಾಂತರವಾಗಿದೆ. ಎಂದರೆ ಆ ಪದದ ಸಂಕ್ಷಿಪ್ತ ರೂಪ ಉಲ್ಚ. ಈ ಗ್ರಾಮವು ರಾಯಚೂರು ಜಿಲ್ಲೆಯ ಅಂಚಿನ ಗ್ರಾಮ. ಒಂದು ಕಾಲಕ್ಕೆ ಕರ್ನಾಟಕಕ್ಕೆ ಸೇರಿತ್ತು. ಆದ್ದರಿಂದ ಉಲ್ಚಕಮ್ಮಿಗಳು ಕನ್ನಡ ನಾಡಿನ ಭಾಗದವರು. ಕನ್ನಡವೇ ಮಾತೃಭಾಷೆಯಾಗಿ ಉಳ್ಳವರು'.

'ಇನ್ನು ಕಮ್ಮೆ ಎಂಬ ಬ್ರಾಹ್ಮಣ ಕುಲದ ಪದದ ಮೂಲರೂಪ ಕಮ್ಮಿ. ಕಮ್ಮಿ ಎಂಬ ಪದ ಕರ್ಮಿನ್ ಎಂಬ ಸಂಸ್ಕೃತ ಪದದ ಕನ್ನಡ ರೂಪ. ಕರ್ಮಿನ್ ಎಂದರೆ 'ವೈದಿಕ ಕರ್ಮಗಳನ್ನು ಶ್ರದ್ಧೆಯಿಂದ ಅನುಷ್ಠಾನ ಮಾಡುತ್ತಿರುವ ಬ್ರಾಹ್ಮಣ' ಎಂದರ್ಥ.'

(ಉಲ್ಚಕಮ್ಮಿ ಲೇ. ಎನ್. ಲಕ್ಷ್ಮೀನಾರಾಯಣರಾವ್, ಶಾಸನ ತಜ್ಞರು. ಉಪಾಯನ ಗ್ರಂಥ (೧೯೬೭) ಪು. ೩೦೦-೩೦೩)

ಈ ಪಂಗಡದ ಅನೇಕ ಮನೆತನಗಳ ಬಹು ಜನರು ಬೆಂಗಳೂರು, ಕೋಲಾರ, ತುಮಕೂರು, ಬಳ್ಳಾರಿ ಜಿಲ್ಲೆಗಳಲ್ಲಿ ವಾಸವಾಗಿದ್ದಾರೆ. ಸ್ವಲ್ಪ ಮಂದಿ ಇತರ ಕಡೆಗಳಲ್ಲಿ ಇದ್ದಾರೆ.

" 'ಉಲ್ಚುಕಮ್ಮಿ' ಪದದ ಬಗ್ಗೆ ಇನ್ನು ಹಲವರು ಜಿಜ್ಞಾಸೆ ನಡೆಸಿದ್ದಾರೆ. ಉಲ್ಚಳ್ ಗ್ರಾಮದ ಕಮ್ಮೆ ಜನರು ಉಲ್ಚಕಮ್ಮೆಗಳಾದರು. ಕರ್ಮನ್ ಶಬ್ದದಲ್ಲಿರುವ ಕರ್ಮ ಶಬ್ದ ದ್ರಾವಿಡ ಭಾಷೆಯಲ್ಲಿ ಅದರಲ್ಲೂ ತಮಿಳಿನಲ್ಲಿ 'ಶರ್ಮ' ಎಂದಾಗುತ್ತದೆ. ಶರ್ಮನ್ ಎಂಬ ರೂಪ ಸಿಗುತ್ತದೆ. ಹಾಗೆಯೇ ವರ್ಮ ಎಂಬ ರೂಪವೂ ಇದೆ. ಆದಿಯ 'ಕ' ಕಾರ ತಮಿಳಿನಲ್ಲಿ 'ಶ'ಕಾರ ವಾಗುತ್ತದೆ. ಆದರೆ ಪದದ ಆದಿಯಲ್ಲಿ 'ಕ'ವನ್ನು ಕನ್ನಡ ಉಳಿಸಿಕೊಂಡಿರುವುದನ್ನು ಕಾಣುತ್ತದೆ. ಆದ್ದರಿಂದ ಕರ್ಮನ್ ಕಮ್ಮೆ ಆಗಿದೆ. ಕಮ್ಮೆ ಎಂಬುದು ಪ್ರಾಚೀನ ರೂಪವಾಗಿದ್ದು ಕಮ್ಮಿ ಎಂದು ಈಚೆಗೆ ಆಗಿರಬೇಕು" (ಎಂ.ವಿ. ಶ್ರೀನಿವಾಸ ಮೂರ್ತಿ). ಜನ ಸಾಮಾನ್ಯರ ಬಾಯಲ್ಲಿ ಕಮ್ಮಿ ಕಮ್ಮೆ ಆಗಿದೆ. ಉನ್ನು ಉಳ್ಚಲ್ - ಉಲ್ಚಲ್ ಆಗಿ ಉಲ್ಚು - ಉಲುಚು ಆಗಿದೆ. ಹಾಗಾಗಿ ಉಲುಚುಕಮ್ಮೆ, ಉಲ್ಚುಕಮ್ಮೆ ರೂಪಗಳು ಬಳಕೆಯಲ್ಲಿವೆ. ಉಚ್ಚಾರಣಾ ವ್ಯತ್ಯಾಸದಿಂದ ಉಲ್ಚಕಂಮಿ ಎಂದೂ ಕರೆಯುವುದುಂಟು.

ಇನ್ನು ಬೆಂಗಳೂರು ಜಯನಗರದಲ್ಲಿದ್ದ ಹಾಗೂ ಪ್ರಸಿದ್ಧರಾಗಿದ್ದ ಶ್ರೀಜಿತಬಿಂದು ಮಹರ್ಷಿಗಳ ವಿಶ್ಲೇಷಣೆ ಹೀಗಿದೆ. ಇವರು ಆಧ್ಯಾತ್ಮಿಕ ಅರ್ಥವನ್ನು ಕೊಡಲು ಯತ್ನಿಸಿದ್ದಾರೆ.

'ಕಮ್ಮೆ ಪದದ ಅರ್ಥ ಬಹಳ ದೊಡ್ಡದು. ಕ = ಬ್ರಹ್ಮ , ಮ = ಶಿರ, ಏ = ಸಂಬೋಧನೆಯೇ ಕಮ್ಮೆ. ಉಳಿಚು ಎಂಬುದು ಉಳಿಸು ಎಂಬ ಪದದ ತತ್ಸಮ ಮತ್ತು ತದ್ಭವವನ್ನು ಸೂಚಿಸುತ್ತದೆ. ಬ್ರಹ್ಮವಿದ್ಯಾ ಸಾಧನೆಯನ್ನು ಉಳಿಸಿಕೊಂಡು ಬಂದ ವಿಶ್ವದ ಶ್ರೇಷ್ಠ ಗುಂಪಿಗೆ 'ಉಳಿಚುಕಮ್ಮೆ' ಎಂದು ಹೆಸರು" (ಸುರೇಶ ಮೂನಾ ಅವರ ಲೇಖನ 'ಉಲುಚುಕಮ್ಮೆ', ಪುಟ ೭೧) ಇಲ್ಲಿ ಕಲ್ಪನಾಂಶದಿಂದ ವಿವರಣೆ ನೀಡಿದಂತೆ ಭಾಸವಾಗುತ್ತದೆ.

ಹೊಸಕೆರೆ ಚಿದಂಬರಯ್ಯನವರು ಉಲುಚುಕಮ್ಮೆ ಪಂಗಡಕ್ಕೆ ಸೇರಿದವರು. ಭಾರದ್ವಾಜಗೋತ್ರದವರೆಂದು ಅವರೇ ಬರೆದ ವಿದ್ಯಾರಣ್ಯಕಾವ್ಯದ ಪದ್ಯವೊಂದರ ಟಿಪ್ಪಣಿಯಿಂದ ತಿಳಿದುಬರುತ್ತದೆ.

ಮೆರೆದಿರೆ ವಿದ್ಯೆಯಾತನೊಳರಣ್ಯದವೊಲ್ಬಹು ದೊಡ್ಡದಾಗಿ ತಾಂ
ಮೆರೆವುದು ವಿದ್ಯೆಯೆನ್ನೊಳುಮರಣ್ಯದವೊಲ್ಸಲೆ ಮುಂದುಗಾಣದೆ
ಪರಿಕಿಸಲಿಂತು ನಾಮಮಿರಲೆನ್ನೊಳಗನ್ವಯಿಸುತ್ತಮಿನ್ನುಮ
ಚ್ಚರಿ 'ಬೆಡಗೊಂದೆ' ಗೋತ್ರಮುಮದೊಂದೆನಗಾರಯೆ ಕಾವ್ಯನಾಥನೊಳ್

(ಶ್ರೀ ವಿದ್ಯಾರಣ್ಯ ಕಾವ್ಯ, ಮೊದಲನೆ ಪದ್ಯ-೧೧, ಮುನ್ನುಡಿ)

ಇದಕ್ಕೆ ಚಿದಂಬರಯ್ಯನವರ ಟಿಪ್ಪಣಿ ಹೀಗಿದೆ:

"೧. ಬೆಡಗೆಂದರೆ ಜಾತಿಯ ಒಳಭೇದ. ಶ್ರೀ ವಿದ್ಯಾರಣ್ಯರು 'ಉಲಚುಕಮ್ಮಿ' ಎಂಬ ಬೆಡಗಿನವರೆಂದು ಈ ಕಾವ್ಯಕರ್ತನ ಅಭಿಪ್ರಾಯ. ಹೀಗೆ ಪ್ರತೀತಿಯೂ ಉಂಟು.

೨. ಭಾರದ್ವಾಜಸಗೋತ್ರದ 'ವಿದ್ಯೆಯೆನ್ನೊಳುಮರಣ್ಯದವೋಲ್ಲಲ' (ಪುಟ ೩, ವಿದ್ಯಾರಣ್ಯ ಕಾವ್ಯ) ಎಂಬ ಮಾತಿನಲ್ಲಿ ಸೂಚ್ಯವಾಗಿ ವಿದ್ಯಾರಣ್ಯರ ಹೆಸರನ್ನು ಹೇಳಲಾಗಿದೆ."

ಜನನ, ಕುಟುಂಬ ಜೀವನ ಮತ್ತು ವ್ಯಕ್ತಿತ್ವ

ಹೊಸಕೆರೆ ಚಿದಂಬರಯ್ಯನವರು ಗುಬ್ಬಿ ತಾಲ್ಲೂಕಿನ ಹೊಸಕೆರೆಯಲ್ಲಿ ೨೮.೧೨.೧೮೭೦ ಪ್ರಮೋದ ಸಂವತ್ಸರ ಪುಷ್ಯಮಾಸ ಶುಕ್ಲಪಕ್ಷ ಷಷ್ಠಿ ಮಂಗಳವಾರ ಶೇಷಗಿರಿಯಪ್ಪ - ಪುಟ್ಟನರಸಮ್ಮ ದಂಪತಿಗಳಿಗೆ ಹಿರಿಯ ಮಗನಾಗಿ ಜನಿಸಿದರು. ಹೊಸಕೆರೆಯಲ್ಲಿ ಅವರು ಜನಿಸಿದ್ದ ಮನೆಯಿದ್ದ ರಸ್ತೆಗೆ ಈಗ ಹೊಸಕೆರೆ ಚಿದಂಬರಯ್ಯನವರ ರಸ್ತೆ ಎಂದು ಹೆಸರಿಟ್ಟಿದ್ದಾರೆ. ಆ ರಸ್ತೆಯಲ್ಲಿ ಇದ್ದ ಅವರ ಮನೆ ಹಾಳುಬಿದ್ದಿದೆ ಎನ್ನುತ್ತಾರೆ ಸ್ಥಳೀಯರು. ಇವರಿಗೆ ನಾರಾಯಣರಾವ್, ಶ್ರೀನಿವಾಸರಾವ್ ಎಂಬ ಇಬ್ಬರು ಸೋದರರೂ, ತಿಪ್ಪಮ್ಮ, ನರಸಮ್ಮ ಎಂಬ ಇಬ್ಬರು ಸೋದರಿಯರೂ ಇದ್ದರು. ಹೊಸಕೆರೆ ಚಿದಂಬರಯ್ಯನವರಿಗೆ ಲಕ್ಷ್ಮೀದೇವಮ್ಮ ಎಂಬುವರೊಡನೆ ಮದುವೆ ಆದಮೇಲೆ ವೆಂಕಟರಮಣಯ್ಯ, ಶ್ರೀನಿವಾಸಮೂರ್ತಿ, ಅನಂತಮೂರ್ತಿಶಾಸ್ತ್ರಿಗಳೆಂಬ ಮೂವರು ಗಂಡುಮಕ್ಕಳು, ನರಸಮ್ಮ ಎಂಬ ಹೆಣ್ಣುಮಗಳು ಜನಿಸಿದರು.

ವೆಂಕಟರಮಣಯ್ಯ ಅವರು ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ೧೯೧೫ರಲ್ಲಿ ಹೊಸಕೋಟೆಯ ಸ್ಕೂಲಿನ ಹೆಡ್‌ಮಾಸ್ಟರ್‌ರಾದರು. ಶ್ರೀನಿವಾಸಮೂರ್ತಿ ಅವರು ವೇದಾಂತ ಶಿರೋಮಣಿ ಪದವಿ ಪಡೆದು ಸಂಸ್ಕೃತ ಅಧ್ಯಾಪಕರಾಗಿದ್ದರು. ಅನಂತಮೂರ್ತಿಶಾಸ್ತ್ರಿಗಳು ತರ್ಕವಿದ್ವಾನ್ ಆಗಿದ್ದರು. ಸಂಸ್ಕೃತದಲ್ಲಿ ಪ್ರಗಲ್ಭ ಪಾಂಡಿತ್ಯ ಹೊಂದಿದ್ದರು. ತಂದೆಯವರಿಗೆ ಸಂಸ್ಕೃತ ಗ್ರಂಥಗಳ ಅನುವಾದದಲ್ಲಿ ಪರಿಶೀಲನೆಯಲ್ಲಿ ನೆರವಾಗುತ್ತಿದ್ದರು. ಹೊಸಕೆರೆ ಚಿದಂಬರಯ್ಯನವರು ಅನುವಾದಿಸಿರುವ ಪಂಚದಶಿ ತತ್ತ್ವಾರ್ಥ(೧೯೩೨) ಗ್ರಂಥದ ಮೊದಲಮಾತಿನಲ್ಲಿ "ಮೂಲ ಗ್ರಂಥದಿಂದ ಇದಕ್ಕೆ ತತ್ತ್ವಾರ್ಥದ ಭಟ್ಟಿಯನ್ನು ಇಳಿಸುವ ಕೆಲಸದಲ್ಲಿ ತರ್ಕ ವಿದ್ವಾನನೂ ಶ್ರೀ ಶಂಕರಮಠದ ಮಹಾ ವಿದ್ವಾನ್ ಪರೀಕ್ಷಾ ಕಕ್ಷೆಯಲ್ಲಿ ಇರುವವನೂ ಆದ ಚಿ|| ಅನಂತಮೂರ್ತಿ ಶಾಸ್ತ್ರಿಯು ನೆರವಾಗಿರುವನೆಂದು ಇಲ್ಲಿ ಸೂಚಿಸಲು ಸಂತೋಷಗೊಳ್ಳುವೆನು" ಎಂದಿದ್ದಾರೆ. ಮಗಳು ನರಸಮ್ಮ ಹೆಸರಾಂತ ಸಂಗೀತ ಮನೆತನದ ಹನುಮಂತರಾಯಪ್ಪನವರ ಧರ್ಮಪತ್ನಿ ಆಗಿದ್ದರು. (ಅನಂತಮೂರ್ತಿಶಾಸ್ತ್ರಿಯವರ ಮಗ ಎಚ್. ಚಿದಂಬರ ಅವರು ಒದಗಿಸಿದ ಮಾಹಿತಿ).

ಹೊಸಕೆರೆ ಚಿದಂಬರಯ್ಯನವರು ಸಾಮಾನ್ಯವಾಗಿ ಪ್ರತಿದಿನ ಬೆಳಿಗ್ಗೆ ೫ಕ್ಕೆ ಏಳುತ್ತಿದ್ದರು. ಸ್ನಾನ ಸಂಧ್ಯಾವಂದನೆಗಳನ್ನು ಮಾಡಿದನಂತರ ಜಪ-ಧ್ಯಾನ ಮಾಡುತ್ತಿದ್ದರು. ಧ್ಯಾನ ಮಾಡುತ್ತಿದ್ದಾಗ ಅವರು ನೆಲಬಿಟ್ಟು ಸುಮಾರು ಎರಡಡಿ ಎತ್ತರಕ್ಕೆ ಮೇಲಕ್ಕೆ ಹಾಗೇ ಏಳುತ್ತಿದ್ದರು. ಇದು ಅವರಿಗೆ ತಿಳಿಯದು. ನಾನು ಕಣ್ಣಾರೆ ಕಂಡಿದ್ದೇನೆ. (ಸೊಸೆ ಗುಂಡಮ್ಮನವರ ಹೇಳಿಕೆ).

"ದಿನಾ ಮನೆಯಲ್ಲಿ ಮಧ್ಯಾಹ್ನ ೩ ರಿಂದ ೫ ಗಂಟೆವರೆಗೆ ರಾಮಾಯಣ, ಗೀತೆ, ಜೈಮಿನಿಭಾರತ, ಪುರಾಣ ಪ್ರವಚನ ಮಾಡುತ್ತಿದ್ದರು. ಸುಮಾರು ೧೫ - ೨೦ ಮಂದಿ ಇರುತ್ತಿದ್ದರು. ಶಂಕರ ಸಪ್ತಾಹ, ರಾಮೋತ್ಸವ ಮೊದಲಾದ ಸಂದರ್ಭಗಳಲ್ಲಿ ಹೊನ್ನವಳ್ಳಿ, ತಿಪಟೂರು ಮೊದಲಾದ ಕಡೆ ಉಪನ್ಯಾಸಗಳಿಗೆ ಹೋಗುತ್ತಿದ್ದರು.

ಮನೆಯಲ್ಲಿ ವ್ಯಾಸಂಗ ಮಾಡುವಾಗ, ಪ್ರವಚನ ಮಾಡುವಾಗ ಮಕ್ಕಳು, ಜನ ಗಲಾಟೆ ಮಾಡಬಾರದು. ಪ್ರಶಾಂತವಾಗಿರಬೇಕು ಎಂದು ಬಯಸುತ್ತಿದ್ದರು. ಇದು ಅವರ ಸ್ವಭಾವವಾಗಿತ್ತು. ಮಧ್ಯಾಹ್ನ ೧೧.೩೦ ಸುಮಾರಿಗೆ ಅವರಿಗೆ ಭೋಜನವಾಗಬೇಕಿತ್ತು. ನಿಧನರಾದ ದಿನವೂ ಈ ಪದ್ಧತಿ ತಪ್ಪಲಿಲ್ಲ.

೧೯೦೬ರಲ್ಲಿ ೩೬ನೇ ವರ್ಷದಲ್ಲಿ ಅವರ ಹೆಂಡತಿ ನಮ್ಮತ್ತೆ ತೀರಿಕೊಂಡಮೇಲೆ ಪ್ರತಿದಿನ ಒಪ್ಪತ್ತು ಊಟ ಮಾಡುತ್ತಿದ್ದರು. ಏಕೆಂದು ಕೇಳಿದ್ದಕ್ಕೆ, 'ಗಂಡ ಸತ್ತರೆ ಹೇಗೆ ಹೆಂಡತಿಗೆ ಒಪ್ಪತ್ತು ಊಟವೋ ಹಾಗೇ ಹೆಂಡತಿ ಸತ್ತರೆ ಗಂಡನಿಗೂ ಒಪ್ಪತ್ತು ಊಟ' ಎನ್ನುತ್ತಿದ್ದರು. ಹೀಗೆ ಪತ್ನಿ ನಿಷ್ಠರಾದ ಅವರು ಇನ್ನೊಂದು ಮದುವೆಗೆ ಒತ್ತಾಯಸಿದರೂ ಮಾಡಿಕೊಳ್ಳಲಿಲ್ಲ. ಹಗಲು ಮಾತ್ರ ಭೋಜನ ಮಾಡುತ್ತಿದ್ದರು. ಅಡಿಗೆ ಖಾರ ಆಗಿರಕೂಡದು, ಸಪ್ಪೆ ಆಗಿರುತ್ತಿತ್ತು. ಕರಿದ ತಿಂಡಿ ಚಪಲವಿತ್ತು. ಸಂಡಿಗೆ ಹಪ್ಪಳ ಇಷ್ಟವಾಗಿತ್ತು. ಬರವಣಿಗೆ ಮಾಡುವಾಗ ಹುರಿಗಾಳು ಕೊಬ್ಬರಿಚೂರು ಅಂಥ ಕುರುಕಲು ಇಷ್ಟಪಡುತ್ತಿದ್ದರು. ಹೆಂಡತಿ ಲಕ್ಷ್ಮೀದೇವಮ್ಮ ಸತ್ತಮೇಲೆ ಪ್ರತಿದಿನ ೧೧ ೧/೨ ಗಂಟೆಗೆ ಊಟ ಮಾಡುತ್ತಿದ್ದರು. ಅವರು ಸಾಯುವ ದಿನವೂ ಸಹ ಒಪ್ಪತ್ತು ಮಾತ್ರ ಭೋಜನ ಮಾಡಿದರು."

ಶನಿವಾರ ರಾತ್ರಿ ಭಜನೆ ಮಾಡುತ್ತಿದ್ದರು. ಬ್ರಹ್ಮ ಚೈತನ್ಯರ ಜಯಂತಿ ಸಂದರ್ಭದಲ್ಲಿ ೩ ದಿನಗಳ ಕಾಲ ಅಖಂಡಭಜನೆ ಮಾಡುತ್ತಿದ್ದರು. ದಾಸನವಮಿ ಸಮರ್ಥರಾಮದಾಸರ ಪುಣ್ಯತಿಥಿ, ಶಂಕರಜಯಂತಿ ಮೊದಲಾದವನ್ನು ಮನೆಯಲ್ಲಿ ವಿಶೇಷವಾಗಿ ಆಚರಿಸುತ್ತಿದ್ದರು.

ಮನೆಯಲ್ಲಿ ಯಾರಾದರೂ ಹೊರಗೆ ಹೋದರೆ ಹೇಳಿ ಹೋಗಬೇಕಾಗಿತ್ತು. ಹೇಳಿದ ವೇಳೆಗೆ ಹಿಂದಿರುಗಿ ಬರಬೇಕಾಗಿತ್ತು. ಹಾಗೇನಾದರೂ ಹೋದವರು ಬರುವುದು ತಡವಾದರೆ ಚಡಪಡಿಸುತ್ತಾ ಮನೆಯ ಮುಂಭಾಗದಲ್ಲಿ ಶತಪಥ ಹಾಕುತ್ತಿದ್ದರು.

ಸಾಮಾನ್ಯವಾಗಿ ಸಂಜೆ ಲಾಲ್‌ಬಾಗಿಗೆ ಒಬ್ಬರೇ ಗಾಳಿಸಂಚಾರ ಹೋಗಿಬರುತ್ತಿದ್ದರು.

ಮನೆಯಲ್ಲಿ ಶ್ರೀ ಚಕ್ರಾರಾಧನೆ ಕುಂಕುಮಾರ್ಚನೆ ಮೊದಲಾದುವನ್ನು ಇಟ್ಟುಕೊಂಡಿದ್ದರು. ಗುರುಪೂರ್ಣಿಮೆ, ಬ್ರಹ್ಮಚೈತನ್ಯದ ಆರಾಧನೆ, ಸಮರ್ಥ ರಾಮದಾಸರ ಆರಾಧನೆ ಮುಂತಾದ ವಿಶೇಷ ಸಂದರ್ಭಗಳಲ್ಲಿ ಅಭಿಷೇಕ, ಭಜನೆ ಕಾರ್ಯಕ್ರಮಗಳು ಇರುತ್ತಿದ್ದವು. ಏಕಾದಶಿ ದಿನ ತಪ್ಪದೆ ಉಪವಾಸ ಮಾಡುತ್ತಿದ್ದರು. ಪೂಜಾ ವೇಳೆಯಲ್ಲಿ ಆರತಿ ಎತ್ತುವಾಗ ಇತರ ಪೂಜಾ

ಸಂದರ್ಭಗಳಲ್ಲಿ ಸಂಪ್ರದಾಯದ ಹಾಡುಗಳನ್ನು ಸೊಸೆ ಗುಂಡಮ್ಮ ಹಾಡುತ್ತಿದ್ದರು. ನಾನು ಮತ್ತು ಮಿತ್ರರಾದ ನರಸಿಂಹಮೂರ್ತಿ, ಸೂರ್ಯಪ್ರಕಾಶ್ ಪಂಡಿತ್ ಅವರೊಂದಿಗೆ ಸಂದರ್ಶಿಸಿದಾಗ (ಅವರು ತೀರಿಕೊಳ್ಳಲು ಒಂದು ವಾರದ ಮುನ್ನ) 'ಮುಕ್ತಿಮಾರ್ಗವ ತೋರೆ ಪಾರ್ವತಿ' ಮತ್ತು 'ಬಂದು ನೆಲಸು ಇಂದಿರೆ ಎನ್ನಯ ಮಂದಿರದೊಳಗೆ' ಎಂಬ ಹಾಡುಗಳನ್ನು ಹಾಡಿದರು. ಇಳಿ ವಯಸ್ಸಿನಲ್ಲೂ ಗುಂಡಮ್ಮನವರಿಗೆ ನೆನಪಿನ ಶಕ್ತಿ ಶ್ರವಣಶಕ್ತಿ ಚೆನ್ನಾಗಿತ್ತು. ಅವರು ಹೇಳಿದಂತೆ ಮಕ್ಕಳ ಮೇಲೆ ತುಂಬಾ ಪ್ರೀತಿ ಚಿದಂಬರಯ್ಯನವರಿಗೆ. ಮಕ್ಕಳಿಗೆ ಯಾರಾದರೂ ಯಾವುದಾದರೂ ಪದಾರ್ಥ ತರಲು ಅಂಗಡಿಗೆ ಹೇಳಿಕಳಿಸಿದರೆ ಅವನಿಗೇಕೆ ಹೇಳುತ್ತೀರಿ ನಾನೇ ತರುತ್ತೀನಿ ಎನ್ನುತ್ತಿದ್ದರು.

ಗ್ರಂಥ ಪ್ರಕಟಣೆ

ಯಾರಾದರೂ ಗ್ರಂಥ ಪ್ರಕಟಿಸಲು ಕೇಳಿದರೆ, ಪತ್ರಿಕೆಗೆ ಲೇಖನ ಕೇಳಿದರೆ ಬರೆದುಕೊಡುತ್ತಿದ್ದರು. ಹಣ ಕೇಳುತ್ತಿರಲಿಲ್ಲ. 'ಅಚ್ಚಾದ ಮೇಲೆ ಕೆಲವು ಪ್ರತಿಗಳನ್ನು ಕಳಿಸಿಕೊಡಿರಪ್ಪಾ' ಎನ್ನುತ್ತಿದ್ದರು. ಎಷ್ಟೋ ಮಂದಿ ಅವರಿಂದ ಪುಸ್ತಕ ಬರೆಸಿಕೊಂಡವರು ಸಾಕಷ್ಟು ಹಣ ಮಾಡಿಕೊಂಡರೂ ಇವರಿಗೇನೂ ಕೊಡಲಿಲ್ಲ. ಆದರೆ ಅದನ್ನು ಇವರು ಎಂದೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಇವರ ಸೋದರಮಾವ ಮಂಚಲದೊರೆ ರಾಮರಾಯರು ಅವರ ಬಹುತೇಕ ಗ್ರಂಥಗಳನ್ನು ಪ್ರಕಟ ಮಾಡಿದರು. ಪುನರ್ಮುದ್ರಣ ಮಾಡಿದರು. ಬೆಂಗಳೂರಿನಲ್ಲಿ ಸಿಟಿಮಾರ್ಕೆಟ್‌ನಲ್ಲಿ ಎಸ್.ಎಸ್.ಎನ್. ಬುಕ್ ಡಿಪೋ ಎಂಬ ಪುಸ್ತಕದಂಗಡಿ ಇಟ್ಟಿದ್ದರು. ಕೆಲವು ಗ್ರಂಥಗಳನ್ನು ಮಗ ಅನಂತಮೂರ್ತಿ ಅವರು ಪುನರ್ ಮುದ್ರಿಸಿದರು. ಭರತಖಂಡದ ಜೀವಜ್ಯೋತಿಗಳು ಒಂದು ಬೆಂಗಳೂರು RVAM ಕಾಲೇಜಿನಿಂದ ಈಚೆಗೆ ಮತ್ತೆ ಪುನರ್ ಮುದ್ರಣ ಆಗಿದೆ. ಅಧ್ಯಾತ್ಮ ಪ್ರಕಾಶನಾಲಯದವರು ಮತ್ತು ಸಿ. ರಾಮರಾವ್ ಅವರು ಐಬಿಎಚ್ ಪ್ರಕಾಶಕರು ಕೆಲವು ಗ್ರಂಥಗಳನ್ನು ಪುನರ್ ಮದ್ರಿಸಿದ್ದಾರೆ.

ಅಪೂರ್ವಜೋಡಿ ತಂದೆ-ಮಗ

ಕನ್ನಡ ಸಾಹಿತ್ಯರಂಗದಲ್ಲಿ ತಂದೆ ಮಕ್ಕಳು, ಇಬ್ಬರೂ ಸಾಹಿತಿಗಳಾಗಿ ಮೆರೆದಿರುವ ಅಪೂರ್ವ ಜೋಡಿಗಳು ಕೆಲವರು ಇದ್ದಾರೆ. ೨೦ನೇ ಶತಮಾನದಲ್ಲಿ ಡಿವಿಜಿ - ಬಿಜಿಎಲ್ ಸ್ವಾಮಿ, ಕುವೆಂಪು - ತೇಜಸ್ವಿ, ಬಿ. ಪುಟ್ಟಯ್ಯ - ಬಿ.ಪಿ. ರಾಧಾಕೃಷ್ಣ ಮೊದಲಾದವರನ್ನು ಉದಾಹರಿಸಬಹುದು. ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಆಧುನಿಕ ಸಾಹಿತ್ಯದ ರಂಗದಲ್ಲಿ ಕಾಣುವ ಇನ್ನೊಂದು ಜೋಡಿ ಎಂದರೆ ಹೊಸಕೆರೆ ಚಿದಂಬರಯ್ಯ ಮತ್ತು ಹೊಸಕೆರೆ ಅನಂತಮೂರ್ತಿಶಾಸ್ತ್ರಿಗಳು. ಇಬ್ಬರು ವಿದ್ವಾಂಸರು. ಇಬ್ಬರೂ ಕೃತಿಕಾರರು, ತಂದೆಯವರಿಗಿಂತ ಪಾಂಡಿತ್ಯದಲ್ಲಿ ಅನಂತಮೂರ್ತಿಶಾಸ್ತ್ರಿಗಳು ಒಂದು ಕೈ ಹೆಚ್ಚು ಎಂದರೆ ತಪ್ಪಾಗಲಾರದು. ಶೃಂಗೇರಿ ಜಗದ್ಗುರುಗಳಿಂದ 'ಪಂಡಿತ ಪ್ರವರ' ಎಂಬ ಪ್ರಶಸ್ತಿ ಗಳಿಸಿದವರು. ಶ್ರೀ ಸಚ್ಚಿದಾನಂದೇಂದ್ರ

ಸರಸ್ವತಿ ಅವರ ಸಂಸ್ಕೃತ ಕೃತಿಗಳನ್ನೆಲ್ಲ ಯಾವ ಪಂಡಿತರೂ ಏನೂ ದೋಷವನ್ನು ಕಂಡುಹಿಡಿಯದ ಮಟ್ಟಿಗೆ ಪರಿಷ್ಕರಿಸಿಕೊಟ್ಟವರು. ಅದ್ವೈತಿಗಳಾದರೂ ಮಾಧ್ವ, ವೈಷ್ಣವ ಪಂಡಿತರೂ ವಿದ್ವತ್ ಸಭೆಗಳಿಗೆ ಆಹ್ವಾನಿತರಾಗುತ್ತಿದ್ದವರು. ಮತತ್ರಯಗಳಲ್ಲಿ ಹೆಚ್ಚಿನ ಪರಿಶ್ರಮ ಪಡೆದವರು. ಶಾಲಾ ಕಾಲೇಜುಗಳಲ್ಲಿ ಸಂಸ್ಕೃತ ಬೋಧನೆ ಮಾಡಿದ ಇವರು ನೂರಾರು ವಿದ್ಯಾರ್ಥಿಗಳಿಗೆ ಸ್ವಗೃಹವನ್ನೇ ಸಂಸ್ಕೃತ ಪಾಠಶಾಲೆಯನ್ನಾಗಿ ಮಾಡಿಕೊಂಡು ಸಂಸ್ಕೃತ ಭಾಷೆಯನ್ನು ಶಾಸ್ತ್ರ ಪಾಠವನ್ನೂ ಹೇಳಿಕೊಟ್ಟು ವಿದ್ಯಾದಾನ ಮಾಡಿದವರು.

ಚಿದಂಬರಯ್ಯನವರ ಕುಟುಂಬವೇ ವಿದ್ವತ್ ಕುಟುಂಬ. ಇವರ ತಂದೆ ವೈದಿಕ ವಿದ್ವಾಂಸರಾಗಿದ್ದರು. ಚಿದಂಬರಯ್ಯನವರ ಪುತ್ರ ಶಿಕ್ಷಕರು ಆಗಿದ್ದು ಸಾಹಿತ್ಯ ರಚನೆ ಮಾಡಿದವರೂ ಆಗಿದ್ದರು. ಪುತ್ರ ಶ್ರೀನಿವಾಸ ಮೂರ್ತಿಗಳು ರಚಿಸಿರುವ 'ಭಾರತದ ಸವಿಕಟ್ಟು' (೧೯೨೯), ಮಗ ಅನಂತಮೂರ್ತಿಶಾಸ್ತ್ರಿ ರಚಿಸಿದ 'ತರ್ಕದೀಪಿಕೆ' ಇತ್ಯಾದಿ ಕೆಲವು ನಿದರ್ಶನಗಳಷ್ಟೆ. ಇನ್ನು ಇವರಿಬ್ಬರೂ ಪತ್ರಿಕೆಗಳಿಗೆ ಲೇಖನಗಳನ್ನು ಬರೆದಿದ್ದಾರೆ.

ಅನಂತಮೂರ್ತಿಶಾಸ್ತ್ರಿ

ವಿದ್ವಾನ್ ಎಚ್. ಅನಂತಮೂರ್ತಿಶಾಸ್ತ್ರಿ ಚಿದಂಬರಯ್ಯನವರ ಮೂರನೆಯ ಮಗ. ಬಾಲ್ಯದಲ್ಲಿಯೇ ಕುರ್ತುಕೋಟಿ ಭಾಗವತರ ಸಾನ್ನಿಧ್ಯ ದೊರಕಿತ್ತು. ಭಾಗವತರ ಜೊತೆ ಎರಡು ವರ್ಷ ಮಹಾರಾಷ್ಟ್ರದಲ್ಲಿ ಸಂಚರಿಸಿದರು. ಬೆಂಗಳೂರಿಗೆ ಚಿದಂಬರಯ್ಯನವರು ಬಂದಾಗ ನ್ಯಾಷನಲ್ ಹೈಸ್ಕೂಲಿನಲ್ಲಿ ೫ನೇ ಫಾರಂವರೆಗೆ ಓದಿ ತಂದೆಯವರಿದ್ದ ಧಾರವಾಡದ ರಾಷ್ಟ್ರೀಯ ವಿದ್ಯಾಶಾಲೆಗೆ ಸೇರಿ ಓದಿದರು. ಬೆಟಗೇರಿ ಕೃಷ್ಣಶಾಸ್ತ್ರಿಗಳ ಮಕ್ಕಳು ನಾಗೇಶ್ ಶಾಸ್ತ್ರಿಗಳಲ್ಲಿ ತರ್ಕ ಕಲಿತರು. ೧೯೨೩ರಲ್ಲಿ ಮದ್ರಾಸಿನ ಮೈಲಾಪುರದ ಸಂಸ್ಕೃತ ಕಾಲೇಜಿನಲ್ಲಿ ಎಂಟ್ರೆನ್ಸ್ ತರಗತಿಯಲ್ಲಿ ತೇರ್ಗಡೆ ಹೊಂದಿ ಬೆಂಗಳೂರಿನ ಸಂಸ್ಕೃತ ಕಾಲೇಜಿನಲ್ಲಿ ತರ್ಕ, ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ (೧೯೩೬) ಶಂಕರಮಠದಲ್ಲಿ ವೇದಾಂತ ವ್ಯಾಸಂಗಕ್ಕೆ ಸೇರಿದರು.

ಹೊಳೆನರಸೀಪುರದ ಸ್ವಾಮಿಗಳು ನಡೆಸುತ್ತಿದ್ದ ಶಂಕರ ಸಪ್ತಾಹಗಳಲ್ಲಿ ನಿರಂತರ ಭಾಗವಹಿಸಿದರು. ೧೯೩೯ರಲ್ಲಿ ಸಂಸ್ಕೃತ ಕಾಲೇಜಿಗೆ ಕೆಲಸಕ್ಕೆ ಸೇರಿದರು. ಚೆನ್ನಪಟ್ಟಣ, ಕಾನಕಾನಹಳ್ಳಿ, ತೀರ್ಥಹಳ್ಳಿ ಹೈಸ್ಕೂಲಿನಲ್ಲಿ ಕೆಲಸ ಮಾಡಿದರು.

೧೯೨೮ರಲ್ಲಿ ನವೀನ ತರ್ಕ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ವಿಶೇಷ ಬಹುಮಾನ ಪಡೆದಿದ್ದರು. ೧೯೩೩ರಲ್ಲಿ ಪ್ರಾಚೀನ ತರ್ಕ ವಿದ್ವತ್ ಪರೀಕ್ಷೆಯಲ್ಲಿ ೧ನೇ ತರಗತಿಯಲ್ಲಿ ಅಗ್ರಸ್ಥಾನ ಗಳಿಸಿ ವಿಶೇಷ ಬಹುಮಾನ ಗಳಿಸಿದ್ದರು. ೧೯೩೬ರಲ್ಲಿ ವೇದಾಂತ ವಿದ್ವತ್ ಪರೀಕ್ಷೆಯಲ್ಲಿ ೧ನೇ ತರಗತಿಯಲ್ಲಿ ಅಗ್ರಸ್ಥಾನ ಗಳಿಸಿ ೩ ಚಿನ್ನದ ಪದಕಗಳನ್ನು ಚಿನ್ನದ ವೀರಶೃಂಖಲೆಯನ್ನು ಪಡೆದಿದ್ದರು. ಕಾಲೇಜಿನಲ್ಲಿ ಪರೀಕ್ಷೆಗಳಲ್ಲಿಯೂ ಮತತ್ರಯ

ಪರೀಕ್ಷೆಗಳಲ್ಲಿಯೂ ನಿರತಿಶಯವಾದ ಗುಣಸಂಖ್ಯೆಯನ್ನು ಪಡೆದವರೆಂಬ ಕಾರಣದಿಂದ ವಿಶೇಷ ಪ್ರಾವೀಣ್ಯ ಪಾರಿತೋಷಕವನ್ನು ವೀರಶೃಂಖಲೆಯನ್ನು ಗಳಿಸಿದ್ದರು.

ಶಂಕರ ಮಠದ ಪ್ರೌಢ ವಿದ್ಯಾಭಿನವ ವೇದಾಂತ ಶಾಲೆಯಲ್ಲಿ ವೇದಾಂತದಲ್ಲಿ ಪ್ರಥಮ ತರಗತಿಯಲ್ಲಿ ತೇರ್ಗಡೆ ಹೊಂದಿ ಶೃಂಗೇರಿಯ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳಿಂದ 'ಪಂಡಿತ ಪ್ರವರ' ಬಿರುದನ್ನು ಪಡೆದರು. ೧೯೩೮ರಲ್ಲಿ ಮೈಸೂರಿನ ಸಾಹಿತ್ಯ ವಿದ್ವತ್ ಪರೀಕ್ಷೆಯಲ್ಲಿ ಅಗ್ರಸ್ಥಾನಹೊಂದಿ ಬಂಗಾರದ ಪದಕ ಬಹುಮಾನ ಗಳಿಸಿದರು. ಇವರಲ್ಲಿ ಅನೇಕರು ಉನ್ನತ ಸಂಸ್ಕೃತ ಶಿಕ್ಷಣ ಪಡೆದರು.

ಚಿದಂಬರಯ್ಯನವರ ಬಾಲ್ಯ ಮತ್ತು ವಿದ್ಯಾಭ್ಯಾಸ

ಹೊಸಕೆರೆ ಚಿದಂಬರಯ್ಯನವರ ಬಾಲ್ಯದ ಹೆಸರು ಚಿದಂಬರ ಎಂದಿರಬೇಕು. ಅನಂತರ ಅವರು ಶಾಲೆಗೆ ಸೇರಿದಾಗಲೂ ಶಿಕ್ಷಕರಾದಾಗಲೂ ಎಚ್. ಚಿದಂಬರ ಎಂದಿತ್ತು. ಆಮೇಲಿನ ಗ್ರಂಥಗಳಲ್ಲಿ ಹೊಸಕೆರೆ ಚಿದಂಬರಯ್ಯ ಆದರು. ಅನಂತರ ಕರ್ಣಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯನವರಾದರು. ಮೊದಲು 'ಚಿದಂಬರ' ಅವರ ಕಾವ್ಯನಾಮವಾಗಿತ್ತು. ೧೯೧೨ರ ಸುಮಾರಿನಲ್ಲಿ ಬರೆದ ಸುಧರ್ಮ ಪ್ರಭಾವ ನಾಟಕದಲ್ಲಿಯ ಈ ಕಂದವನ್ನು ಗಮನಿಸಬಹುದು.

ಭರದಿಂ ಶಾಂತಿರಸಂ ಮುಂ
ಬರಿಯೆ ಮಹಾಭಾಗವತಪದಾಂಬುಜಭೃಂಗಂ
ಬರೆದಿರ್ಪಂ ಭಾವಿಕರಾ
ದರಿಪರಿಂತೆ ಚಿದಂಬರಾಭಿದಂ ಕವಿರತ್ನಂ

(ಸುಧರ್ಮ ಪ್ರಭಾವ, ಪುಟ ೩)

ಕೀರ್ತನ ಕಂಠಾಭರಣದಲ್ಲಿ ಅವರು ರಚಿಸಿರುವ ಕೀರ್ತನೆಗಳಲ್ಲಿ ಚಿದ್ರೂಪ, ಚಿನ್ಮಯ ಚಿದಾಕಾಶ ಮೊದಲಾದ ಚಿತ್ ರೂಪದ ಪದಗಳನ್ನು ಅಂಕಿತವಾಗಿ ಬಳಸಿದ್ದಾರೆ.

ಹೊಸಕೆರೆ ಚಿದಂಬರಯ್ಯನವರು ನಿಧನರಾಗಿ (೧೯೩೮) ೭೨ ವರ್ಷಗಳಾಗಿವೆ. ಅವರನ್ನು ಕಂಡವರು ಅಲ್ಲೊಬ್ಬರು ಇಲ್ಲೊಬ್ಬರು ಇದ್ದಾರೆ. ಶೇಷಾಚಲಶರ್ಮ, ರಂಗನಾಥಶರ್ಮ, ಬೆಳಗೆರೆ ಕೃಷ್ಣಶಾಸ್ತ್ರಿ ಅಂಥವರು ಅವರನ್ನು ಕಂಡವರಾದರೂ ಹೆಚ್ಚಿನ ಮಾಹಿತಿ ಅವರಿಂದ ದೊರಕುತ್ತಿಲ್ಲ. ಚಿದಂಬರಯ್ಯನವರ ಮನೆತನಕ್ಕೆ ಸೇರಿದ ಹಿರಿಯರು ಅನೇಕರು ಈಗಿಲ್ಲ. ಹೀಗಾಗಿ ಅವರ ಬಾಲ್ಯ, ವಿದ್ಯಾಭ್ಯಾಸ ವಿವರಗಳು ಖಚಿತವಾಗಿ ವಿವರವಾಗಿ ಲಭ್ಯವಾಗಿಲ್ಲ. ತಿಳಿದ ಕೆಲವೇ ಆಧಾರಗಳಿಂದ ಕೆಲವು ಸಂಗತಿಗಳನ್ನಷ್ಟೇ ಹೇಳಿದೆ.

ತುಮಕೂರು ಇತಿಹಾಸ ಪ್ರಸಿದ್ಧವಾದ ಜಿಲ್ಲೆ. ಅದರಲ್ಲಿ ಗುಬ್ಬಿ ಸಾಹಿತ್ಯ ಕಲೆಗಳಿಗೆ ಹೆಸರಾದ ತಾಲ್ಲೂಕಾಗಿದೆ. ನಾಟಕ ರಂಗದಲ್ಲಿ ಗುಬ್ಬಿ ಕಂಪನಿ ಹೆಸರನ್ನು ಕೇಳದವರು ಯಾರಿದ್ದಾರೆ?

ಗುಬ್ಬಿ ತಾಲ್ಲೂಕಿನ ಹೊಸಕೆರೆ, ಚಿದಂಬರಯ್ಯನವರಿಂದ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನಗಳಿಸಿದೆ. ೧೯ನೇ ಶತಮಾನದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಸಿದ್ಧರಾದ ಅನೇಕ ಸಾಹಿತಿಗಳು ತುಮಕೂರಿನವರಾಗಿದ್ದರು. ತುಮಕೂರು ನಂಜುಂಡ ಶಿವಯೋಗಿ (೧೮೨೭-೧೯೭೫), ರಂಗದಾಸರು (೧೮೩೦-೧೯೧೦), ಬೆಳ್ಳಾವೆ ಸೋಮನಾಥಯ್ಯ (೧೮೫೪-೧೯೧೪), ದೇವರಾಯನದುರ್ಗದ ಸುಬ್ಬರಾಯದಾಸರು (೧೮೫೮-೧೯೪೦), ತುರುವೇಕೆರೆ ಬೇಟೆರಾಯದೀಕ್ಷಿತರು (೧೮೬೬-೧೯೩೭), ಗುಬ್ಬಿ ಸೋಮನಾಥ ಮುಂಗಾರಾಧ್ಯ (೧೮೭೧-೧೯೬೮), ಬೆಳ್ಳಾವೆ ವೆಂಕಟನಾರಾಯಣಪ್ಪ (೧೮೭೧-೧೯೪೩), ರಾಯಣ್ಣವಾಗ್ಮಿ (೧೮೮೨), ಹನುಮಾನ್ ವೆಂಕಟರಾಯ ಕವಿ (೧೮೮೦-೧೯೭೫), ಬೆಳ್ಳಾವೆ ನರಹರಿಶಾಸ್ತ್ರಿ (೧೮೮೨-೧೯೬೧) ಮುಂತಾದ ತುಮಕೂರಿನ ಸಾಹಿತಿಗಳು ವಿದ್ವಾಂಸರು ಹೊಸಕೆರೆ ಚಿದಂಬರಯ್ಯನವರ ಸಮಕಾಲೀನರಾಗಿದ್ದರು. ಚಿದಂಬರಯ್ಯನವರಿಗೆ ಪರಿಚಿತರಾಗಿದ್ದರು.

ಬಾಲ್ಯದಲ್ಲೇ ಓದಿನಲ್ಲಿ ವಿಶೇಷ ಆಸಕ್ತಿ ತಳೆದಿದ್ದ ಇವರು ಹುಟ್ಟುಕವಿಗಳಾದ್ದರಿಂದ ಚಿಕ್ಕಂದಿನಲ್ಲೇ ಅನೇಕ ಪದ ಪದ್ಯಗಳನ್ನು ರಚಿಸಿದ್ದರು. ಬಹುಶಃ ಹಿರಿಯೂರಿನಲ್ಲಿ ಇವರ ಬಾಲ್ಯದ ವಿದ್ಯಾಭ್ಯಾಸ ಆಗಿರಬೇಕು. ಮೈಸೂರು ಅಪ್ಪರ್ ಲೋಯರ್ ಸೆಕಂಡರಿ ಪರೀಕ್ಷೆಯನ್ನು ಪಾಸುಮಾಡಿದ ಇವರು, ಕೌಟುಂಬಿಕ ಕಾರಣಗಳಿಂದ ಉಪಾಧ್ಯಾಯ ವೃತ್ತಿಗೆ ಸೇರಿದರು. ಕಡೂರಿನಲ್ಲಿ ಉಪಾಧ್ಯಾಯ ವೃತ್ತಿಯಲ್ಲಿದ್ದಾಗ ವೈ. ಸುಬ್ಬರಾವ್ ಮೊದಲ ಬಾರಿಗೆ ಇವರನ್ನು ಭೇಟಿ ಆದರು. ಅನಂತರ ದಾವಣಗೆರೆಯಲ್ಲಿ ಇವರೊಂದಿಗೆ ಕಾರ್ಯನಿರ್ವಹಿಸಿದರು. ಹೊಸಕೆರೆ ಚಿದಂಬರಯ್ಯನವರು ಈ ಮೊದಲು ಕೆಲಕಾಲ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದರೆಂದು ಪರಿಷತ್ಪತ್ರಿಕೆ ಸಂಪಾದಕರು (೧೯೩೮) ಸಂಚಿಕೆಯಲ್ಲಿ ತಿಳಿಸಿದ್ದಾರೆ. "ಬಾಲ್ಯದಲ್ಲಿ ಸರಿಯಾದ ವಿದ್ಯಾಭ್ಯಾಸಕ್ಕೆ ಅನುಕೂಲಗಳು ಇಲ್ಲದಿದ್ದರೂ ಇವರು ಕೇವಲ ಸ್ವಪ್ರಯತ್ನದಿಂದಲೇ ಕನ್ನಡ, ಸಂಸ್ಕೃತ, ಮರಾಠಿ ಭಾಷೆಗಳಲ್ಲಿ ಪಾಂಡಿತ್ಯವನ್ನೂ, ಇಂಗ್ಲಿಷ್ ಭಾಷೆಯ ಪರಿಚಯವನ್ನೂ ಸಂಪಾದಿಸಿಕೊಂಡರು".

ವಿದ್ಯಾರ್ಥಿ ಆಗಿದ್ದಾಗಲೂ ದೇಶಾಭಿಮಾನಿ ಆದವರು ಹೊಸಕೆರೆ ಚಿದಂಬರಯ್ಯನವರು (೧೯೦೬ಕ್ಕೆ ಮುಂಚೆ). ಕನ್ನಡದ ಪ್ರಸಿದ್ಧ ಪಂಡಿತ ತಾರಾನಾಥರು ಒಂದು ಸಲ ಗೀತೆಯ ಮೇಲೆ ಹತ್ತು ಭಾಷಣಗಳನ್ನು ಗಾಂಧೀಮೈದಾನದಲ್ಲಿ (ಈಗಿನ ಬೆಂಗಳೂರಿನ ಕನ್ನಡಸಾಹಿತ್ಯ ಪರಿಷತ್ತಿನ ಸ್ಥಳದಲ್ಲಿ) ನೀಡಿದರು. ಬ್ರಿಟಿಷರ ವಿರುದ್ಧ ರಾಜಕೀಯ ಭಾಷಣಗಳನ್ನು ತಪ್ಪಿಸುವ ಸಲುವಾಗಿಯೇ ಈ ಜಾಗವನ್ನು ಆಮೇಲೆ ದಿವಾನರು ಸಾಹಿತ್ಯ ಪರಿಷತ್ತಿನ ಕಟ್ಟಡ ನಿರ್ಮಾಣಕ್ಕೆ ಕೊಟ್ಟರು ಎಂಬುದು ಹಿರಿಯರ ಹೇಳಿಕೆ. 'ಪಂಡಿತ ತಾರಾನಾಥರ ವಾಗ್ಮಿಯತೆ ಬಹುಶ್ರುತಪಾಂಡಿತ್ಯ ಆಕರ್ಷಕ ವ್ಯಕ್ತಿತ್ವ, ಬೆಂಗಳೂರು ಜನಗಳನ್ನು ದಂಗುಬಡಿಸಿತು. 'ಕನ್ನಡದಲ್ಲಿ ಹೀಗೆ ಮಾತಾಡಲು ಸಾಧ್ಯವೇ? ಕನ್ನಡದಲ್ಲಿ ಇಷ್ಟು ಶಕ್ತಿಯಿದೆಯೆ' ಎಂದು ಜನ ಉದ್ಗಾರವೆಳೆದರು. ತಾರಾನಾಥರು ಗೀತೆಗೆ ಕೊಡುತ್ತಿದ್ದ ರಾಜಕೀಯವ್ಯಾಖ್ಯಾನ ನವೀನವೂ ಮಾರ್ಮಿಕವೂ ಆಗಿರುತ್ತಿತ್ತು.

ಅನಕೃ ಅವರು ತಮ್ಮ ಆತ್ಮಕಥೆ ಬರಹಗಾರನ ಬದುಕು (ಪುಟ ೩೨-೩೩) ಗ್ರಂಥದಲ್ಲಿ ತಾರಾನಾಥರ ಬಗ್ಗೆ ಉಲ್ಲೇಖಿಸುತ್ತಾ ಚಿದಂಬರಯ್ಯನವರ ದೇಶಾಭಿಮಾನದ ಬಗ್ಗೆ ಹೀಗೆ ಹೇಳಿದ್ದಾರೆ "ಗಾಂಧೀ ಮೈದಾನದ ಭಾಷಣಗಳನ್ನು ಕೇಳಲು ಸಮಾಜದ ಪ್ರತಿಷ್ಠಿತ ವ್ಯಕ್ತಿಗಳು, ವಿದ್ವಜ್ಜನರು ಸಾಮಾನ್ಯವಾಗಿ ಬರುತ್ತಿರಲಿಲ್ಲ. ಅವರಿಗೆ ಸಿ.ಐ.ಡಿ.ಗಳ ಭಯ. ತಾರಾನಾಥರ ಭಾಷಣಗಳಿಗೆ ತಪ್ಪದೆ ಹೊಸಕೆರೆ ಚಿದಂಬರಯ್ಯನವರು, ವೈ. ಸುಬ್ಬರಾಯರು (ಹೊಳೆನರಸೀಪುರದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರು), ಕೆ.ಎ. ಕೃಷ್ಣಸ್ವಾಮಿ ಅಯ್ಯರ್ ಅವರು ಬರುತ್ತಿದ್ದರು. ಮೂವರೂ ಘನ ವಿದ್ವಾಂಸರು, ದಾರ್ಶನಿಕರು, ಒಂದು ದಿನ ಗೀತೆಯ ವಿಭೂತಿಯೋಗದ ಮೇಲೆ ತಾರಾನಾಥರ ಭಾಷಣ ಕೇಳಿದ ಚಿದಂಬರಯ್ಯನವರು ಸುಬ್ಬರಾಯರಿಗೆ ಹೇಳಿದರು. 'ಸುಬ್ಬರಾಯರೇ, ಈತ ಸಾಮಾನ್ಯ ಮನುಷ್ಯನಲ್ಲ, ಮಹರ್ಷಿ' ಎಂದರು. ಬಹುಕಾಲದ ನಂತರ ಇಂಥ ಮಹಾನ್ ವ್ಯಕ್ತಿ ತಾರಾನಾಥರ ಬಳಿ ೧೯೩೬ರ ಸುಮಾರಿನಲ್ಲಿ ಚಿದಂಬರಯ್ಯನವರು ವೈದ್ಯಕೀಯ ಪರೀಕ್ಷೆಗೆ ಹೋಗಿದ್ದಾಗ, ತಾರಾನಾಥರು ಡಿ.ಕೆ. ಭಾರದ್ವಾಜರ ಬಳಿ 'ಕರ್ನಾಟಕದಲ್ಲಿ ನಾನು ಕಂಡ ಪವಿತ್ರ ಜೀವಿಗಳಲ್ಲಿ ಇವರೊಬ್ಬರು' ಎಂದು ಹೊಗಳಿದ್ದರು. ಇದೊಂದು ಯೋಗಾಯೋಗ ಸಂಗತಿ ಆಗಿದೆ. ದೇಶಾಭಿಮಾನ, ಗೀತಾಭಿಮಾನ ಚಿದಂಬರಯ್ಯನವರಲ್ಲಿ ಮೂಡಲು ಬಾಲ್ಯದಲ್ಲಿ ತಾರಾನಾಥರು ಪ್ರೇರಕಶಕ್ತಿ ಆದರು ಎಂದರೆ ತಪ್ಪಿಲ್ಲ. ಧಾರವಾಡದಲ್ಲಿ ರಾಷ್ಟ್ರೀಯ ಶಾಲೆಗೆ ಅಧ್ಯಾಪಕರಾಗಿ ಸೇವೆ ಸಲ್ಲಿಸಲು ಚಿದಂಬರಯ್ಯನವರ ದೇಶಾಭಿಮಾನವೇ ಕಾರಣವಾಯಿತು. ಏಕೆಂದರೆ ಆ ವೇಳೆಗೆ ಅಧ್ಯಾತ್ಮ ಜೀವಿಗಳಾಗಿಬಿಟ್ಟಿದ್ದರು ಚಿದಂಬರಯ್ಯನವರು.

ಬಾಲ್ಯದಲ್ಲಿ ವಿದ್ಯಾಭ್ಯಾಸ ಸರಿಯಾಗಿ ಆಗಿರದಿದ್ದರೂ ಸ್ವಶ್ರಮದಿಂದ ಸಾಧನೆ ಮಾಡಿದ ಅವರು ಕ್ರಿಶ್ಚಿಯನ್ ಕಾಲೇಜಿನ ಗ್ರಾಜ್ಯುಯೇಟ್ ಆಗಿದ್ದ ಲಕ್ಷ್ಮೀನರಸಿಂಹಯ್ಯನವರ ಸಹವಾಸದಿಂದ ಹಳಗನ್ನಡದ ಕಾವ್ಯಗಳನ್ನು ಓದಿದ್ದರು. 'ಮೊದಮೊದಲು ಹಳಗನ್ನಡದ ಪ್ರೌಢಶೈಲಿಯಲ್ಲಿ ಕವಿತೆಗಳನ್ನು ಮಾಡುತ್ತಿದ್ದರು.' (ಪುಟ ೧೮೮ ಶ್ರೀಶ್ರೀ) ಬಹುಶಃ ಅವರ ಮೊದಲ ಅಚ್ಚಾದ ಗ್ರಂಥ 'ಸುಶೀಲಾ ಪರಿಣಯ' ನಾಟಕದ ಪದ್ಯಗಳನ್ನು ಅಲ್ಲಿ ಕೊಟ್ಟಿರುವ ಚಿತ್ರಕವಿತ್ವವನ್ನು ಕಂಡರೆ ಚಿದಂಬರಯ್ಯನವರ ಪಾಂಡಿತ್ಯದ ಅರಿವಾಗುತ್ತದೆ. ಆದರೆ ಆನಂತರ ಅವರು ಪಾಂಡಿತ್ಯ ಪ್ರದರ್ಶನವನ್ನು ಮರೆಮಾಡಿ ಈಚೆಗೆ ಬರೆದ ಗದ್ಯ ಪದ್ಯಗಳೆಲ್ಲ ಸುಲಭ ಶೈಲಿಯಲ್ಲಿಯೂ, ಭಾವಗರ್ಭಿತವಾಗಿಯೂ ಓದುವವರಿಗೆ ವಿಚಾರ ಪ್ರಭಾವ ಪ್ರಚೋದಕವಾಗಿಯೂ ಇದೆ (ಪುಟ ೧೮೮ ಶ್ರೀಶ್ರೀ). ಹೊಸಕೆರೆ ಚಿದಂಬರಯ್ಯನವರು ಕೇವಲ ಅಪ್ಪರ್ ಲೋಯರ್ ಸೆಕೆಂಡರಿ ಪರೀಕ್ಷೆ ಪಾಸುಮಾಡಿದವರಾದರೂ ಎಲ್ಲಾ ಬಗೆಯ ಛಂದಸ್ಸಿನಲ್ಲಿ ಪದ್ಯ ರಚನೆ ಮಾಡುವ ಶಕ್ತಿ ಬಾಲ್ಯದಲ್ಲಿಯೇ ಬಂದಿತ್ತು. ಕೀರ್ತನಕಂಠಾಭರಣ, ವಿದ್ಯಾರಣ್ಯ ಕಾವ್ಯಮ್ ಗ್ರಂಥದಲ್ಲಿ ೪೬ಕ್ಕಿಂತ ಹೆಚ್ಚು ಬಗೆ ಬಗೆಯ ಛಂದಸ್ಸಿನಲ್ಲಿ ರಚಿಸಿರುವ ಕವಿತೆಗಳನ್ನು ಕೀರ್ತನೆ ಹಾಡುಗಳನ್ನು ಕಂಡಾಗ, ಮೈಲಾರನ ಮಹಾತ್ಮೆ ಕಾವ್ಯದ ಟಿಪ್ಪಣಿಯಲ್ಲಿ ವಿವಿಧ ಅಲಂಕಾರಗಳ ಪ್ರಸ್ತಾಪ ಕಂಡಾಗ, ಅವರಿಗೆ ಕಾವ್ಯಪಾಂಡಿತ್ಯ ಬಾಲ್ಯದಲ್ಲೇ ಬಂದಿತ್ತು ಎಂದು ತಿಳಿಯುತ್ತದೆ.

ಬಾಲ್ಯದಲ್ಲಿ ಇವರಿಗೆ ಮೊದಲಿಗೆ ಸಂಸ್ಕೃತ ವಿದ್ಯಾಭ್ಯಾಸವನ್ನು ನೀಡಿ ಮತ್ತು ಕನ್ನಡದಲ್ಲಿ ಆಸಕ್ತಿ ಬೆಳೆಸಿದ ಪುಣ್ಯಾತ್ಮರು ಯಾರೋ ತಿಳಿಯದು. ಕಾವ್ಯಾಸಕ್ತಿ ಇದ್ದಂತೆ ನಾಟಕಾಸಕ್ತಿಯೂ ಇವರಿಗಿತ್ತು. ಆಗಿನ ಕಂಪೆನಿ ನಾಟಕಗಳನ್ನು ನೋಡಿರಬೇಕು. ಸಂಸ್ಕೃತದ ಕಾಳಿದಾಸನ ನಾಟಕಗಳನ್ನು ಮತ್ತು ಬಸವಪ್ಪ ಶಾಸ್ತ್ರಿಗಳ ಕೃತಿಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು ಎಂದು ಊಹಿಸಬಹುದು. ಏಕೆಂದರೆ ಇವರ ಸುಶೀಲಾ ಪರಿಣಯ ನಾಟಕ, ಸುಧರ್ಮ ಪ್ರಭಾವ, ಕೃಷ್ಣಮಹೇಶ್ವರಿ ನಾಟಕಗಳಲ್ಲಿ ನಾಂದೀಪದ್ಯ, ಋತುವರ್ಣನೆ, ಸೂತ್ರಧಾರ-ನಟಿ ಸಂಭಾಷಣೆ ಇತ್ಯಾದಿಗಳನ್ನು ನೋಡಬಹುದು. ಇನ್ನು ಸುಶೀಲಾ ಪರಿಣಯ ನಾಟಕದಲ್ಲಿ ಬಸವಪ್ಪಶಾಸ್ತ್ರಿಗಳು ಶಾಕುಂತಲಕ್ಕೆ ರಚಿಸಿದಂತೆ ಕಂಪನಿ ನಾಟಕಕ್ಕಾಗಿ ಬೇರೆ ಬೇರೆ ಮಟ್ಟುಗಳಲ್ಲಿ ಹಾಡುಗಳನ್ನು ರಚಿಸಿದ್ದಾರೆ. ಪದ್ಯಭಾಗದಲ್ಲಿ ಕಂದ ವೃತ್ತಗಳಲ್ಲಿ ಪದ್ಯರಚನೆ ಮಾಡಿದ್ದಾರೆ.

ಆ ಕಾಲದ ಪ್ರತಿಭಾವಂತ ವಿದ್ವಾಂಸರ ಪರಿಚಯವಿದ್ದ ಇವರು ಒಟ್ಟಿನಲ್ಲಿ ಬಾಲ್ಯದಲ್ಲಿ ಶಾಲೆಯಲ್ಲಿ ಕಲಿತಿದ್ದಕ್ಕಿಂತ ಶಾಲೆಯಾಚೆ ಕಲಿತಿರುವುದೇ ಹೆಚ್ಚು.

ಹೊಸಕೆರೆ ಚಿದಂಬರಯ್ಯನವರು ಬಾಲ್ಯದಿಂದಲೂ ವಿದ್ಯಾದಾಹಿಗಳಾಗಿದ್ದರು. ಶಿಕ್ಷಕರಾಗಿ ಕಾರ್ಯಪ್ರವೃತ್ತರಾದ ಮೇಲೆ ಇವರ ಓದು ಅಗಾಧವಾಯಿತು. ಜೀವನದುದ್ದಕ್ಕೂ ಸದಾ ಗ್ರಂಥಾಧ್ಯಯನದಲ್ಲಿ, ಗ್ರಂಥರಚನೆಯಲ್ಲಿ ತೊಡಗಿದ್ದರು. ಅವರ ಜ್ಞಾನದಾಹ ಇಂದಿಗೂ ಅನುಕರಣೀಯವಾದುದು. ಅವರಿಗೆ ಧಾರ್ಮಿಕಾಸಕ್ತಿ, ವಿಶೇಷವಾಗಿದ್ದರೂ ಅದ್ವೈತ ಸಿದ್ಧಾಂತ ಅವರ ಅಧ್ಯಯನ ಕ್ಷೇತ್ರವಾಗಿದ್ದರೂ ಎಲ್ಲಾ ಧರ್ಮಗಳ ಗ್ರಂಥಾಭ್ಯಾಸ ಮಾಡಿದ ವಿಶೇಷತೆ ಅವರದಾಗಿತ್ತು. ಭರತಖಂಡದ ಜೀವಜ್ಯೋತಿಗಳು, ಆರ್ಯಧರ್ಮಪ್ರದೀಪ, ಕೀರ್ತನ ಕಂಠಾಭರಣ ಗ್ರಂಥಗಳನ್ನು ಓದಿದವರಿಗೆ ಅವರ ಜ್ಞಾನವಿಸ್ತಾರ ಅರಿವಾಗುತ್ತದೆ.

ಕೀರ್ತನಕಂಠಾಭರಣ ೪ಲ ಹರಿಕಥೆಗಳನ್ನು ಬರೆಯುವ ಕಾಲಕ್ಕೆ ಅದರಲ್ಲಿ ಬಳಸಿದ ಉದಾಹರಣೆಗಳ ಕೀರ್ತನೆಗಳ ಆಕರಸೂಚಿಯ ಗ್ರಂಥಗಳನ್ನು ಗಮನಿಸಬೇಕು. ಆದಿಪುರಾಣ, ಜೀವಂಧರಸಾಂಗತ್ಯ, ರತ್ನಾಕರಶತಕ, ರಾಮಚಂದ್ರ ಚರಿತಪುರಾಣ, ಜಯನೃಪಕಾವ್ಯ, ಭರತೇಶವೈಭವ, ರಾಮಾಯಣ, ಗೋಮಟೇಶ್ವರ ಚರಿತೆ ಮೊದಲಾದ ಜೈನ ಗ್ರಂಥಗಳನ್ನು ವೀರಶೈವ ಧರ್ಮ ವಚನಶಾಸ್ತ್ರ, ರಾಜಶೇಖರ ವಿಳಾಸ, ಮಲ ಬಸವರಾಜ ಚರಿತ್ರೆ, ಸರ್ವಜ್ಞ ವಚನ, ಪ್ರಭುಲಿಂಗಲೀಲೆ, ವಿರೂಪಾಕ್ಷ ಶತಕ, ಶಿವಭಕ್ತಿಸಾರ, ಸದಾಶಿವಶತಕ, ಬಸವಣ್ಣ ವಚನ ಮುಂತಾದ ವೀರಶೈವ ಹಾಗೂ ವಚನ ಸಾಹಿತ್ಯ ಗ್ರಂಥಗಳನ್ನು ಗೀತಗೋಪಾಲ, ಕನ್ನಡ ಭಾಗವತ, ಚೆಲ್ವನಾರಾಯಣ ಶತಕ, ಹರಿಭಕ್ತಿಸಾರ ಮುಂತಾದ ವೈಷ್ಣವಧರ್ಮದ ಗ್ರಂಥಗಳನ್ನು ಪುರಂದರದಾಸ, ಕನಕದಾಸ ಮೊದಲಾದ ದಾಸರ ಪದಗಳನ್ನು ಸಂಸ್ಕೃತದ ರಾಮಾಯಣ ಭಾರತ ಭಾಗವತ ಮೂಲ ಗ್ರಂಥಗಳನ್ನೂ ಅನುವಾದಗಳನ್ನೂ ಸುಮಾರು ೪೦೦ಕ್ಕೂ ಹೆಚ್ಚು ಗ್ರಂಥಗಳಿಂದ ಸೂಕ್ತಿಗಳನ್ನು ಆಯ್ದುಕೊಂಡಿದ್ದಾರೆ. ಮುನ್ನುಡಿಯಲ್ಲಿ ಚಿದಂಬರಯ್ಯನವರು ಹೇಳಿರುವ ಮಾತಿನಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆ ಇಲ್ಲ. "ಈ ಗ್ರಂಥವು (ಕೀರ್ತನಕಂಠಾಭರಣ) ಕೇವಲ

ಕೀರ್ತನಕಾರರು ಮಾತ್ರ ಹಿಡಿಯತಕ್ಕದೆಂದೂ ತಿಳಿಯಬಾರದೆಂದೂ ಮನೋರಂಜಕವಾದ ಈ ರಚನಾ ವಿಶೇಷದ ರುಚಿಯನ್ನು ಕನ್ನಡಿಗರೆಲ್ಲರೂ ಓದಬೇಕೆಂದೂ, ಅನೇಕ ಗ್ರಂಥಗಳನ್ನು ಒಂದೇ ಕಡೆ ಉಪಯೋಗಿಸುತ್ತ ಕರ್ನಾಟಕ ಭಾಷಾ ಪ್ರಪಂಚಕ್ಕೇ ಒಂದು ಹೊಸಬಗೆಯ ಸಾಹಿತ್ಯವಾಗಿದ್ದು ಇದೊಂದನ್ನು ಓದಿದರೆ ಕನ್ನಡದ ವಾಙ್ಮಯವನ್ನೆಲ್ಲ ಓದಿದಂತಾಗಿ ಹೃದಯವು ಅರಳುವುದು".

ಆದರ್ಶ ಶಿಕ್ಷಕ ಚಿದಂಬರಯ್ಯನವರು

ಚಿದಂಬರಯ್ಯನವರು ಉನ್ನತ ವಿದ್ಯಾಭ್ಯಾಸವನ್ನು ಮುಂದುವರೆಸಲು ಆಗದೆ ಶಾಲಾ ಉಪಾಧ್ಯಾಯರಾಗಿ ಕೆಲಸಕ್ಕೆ ಸೇರಿದರು. ಅವರಿಗೆ ಶಿಕ್ಷಕ ವೃತ್ತಿ ಕೊಡಿಸಿದ್ದು ಯಾರು? ಪ್ರಾರಂಭದಲ್ಲಿ ಶಿಕ್ಷಕರಾಗಿ ಎಲ್ಲಿ ಸೇರಿದರು? ಇವೇ ಮೊದಲಾದ ವಿವರಗಳು ತಿಳಿದುಬಂದಿಲ್ಲ. ೧೮೯೯ರ ವೇಳೆಗೆ ಕಡೂರಿನಲ್ಲಿ ಅಧ್ಯಾಪಕರಾಗಿ ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಕನ್ನಡ 'ಸುಶೀಲಾ ಪರಿಣಯ' ಎಂಬ ನಾಟಕ ಕೃತಿಯಲ್ಲಿ ಎಚ್. ಚಿದಂಬರಯ್ಯ ಮಾಸ್ತರ ಎ.ವ್ಹ. ಸ್ಕೂಲ್ ಕಡೂರ ಎಂದಿದೆ. ೨೯ನೇ ವಯಸ್ಸಿನಲ್ಲಿ ಅಧ್ಯಾಪಕರಾಗಿದ್ದರು. ೧೯೦೩ರಿಂದ ೧೯೦೮ರವರೆಗೆ ಹೆಡ್‌ಮಾಸ್ಟರ್ ಆಗಿ ಅಲ್ಲಿದ್ದರು.

೧೯೦೩ರಲ್ಲಿ ಹೆಡ್‌ಮಾಸ್ಟರ್ ಆಗಿ ಕೆಲಸಕ್ಕೆ ಚಿದಂಬರಯ್ಯನವರು ಕಡೂರಿಗೆ ಬಂದರು. ಅದೇ ವೇಳೆಗೆ ಯಲ್ಲಂಬಳಸೆ ಸುಬ್ಬರಾಯರು (ಆಮೇಲೆ ಸಂನ್ಯಾಸ ಸ್ವೀಕರಿಸಿ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳಾದರು) ಓವರ್ಸಿಯರ್ ಆಗಿ ಕಡೂರಿಗೆ ಕೆಲಸಕ್ಕೆ ಬಂದರು. ಚಿದಂಬರಯ್ಯನವರ ಶಾಲೆ ಬಳಿ ಸುಂಕಕೊಡಲು ತಪ್ಪಿಸಿಕೊಳ್ಳುವವರನ್ನು ಹುಡುಕುತ್ತಾ ಬಂದ ಸುಬ್ಬರಾಯರು ಚಿದಂಬರಯ್ಯನವರ ಆಂಗ್ಲೋ ವರ್ನ್ಯಾಕ್ಯುಲರ್ ಶಾಲೆಯನ್ನು ಹೊಕ್ಕರು. ಆಗ ಚಿದಂಬರಯ್ಯನವರು ಪಂಡಿತ ಪರೀಕ್ಷೆಗಾಗಿ ಓದುತ್ತಿದ್ದರು. ಅದಕ್ಕಾಗಿ ಶಬ್ದಾನುಶಾಸನ ಗ್ರಂಥವನ್ನು ಅಭ್ಯಾಸ ಮಾಡುತ್ತಿದ್ದರು. ಸುಬ್ಬರಾಯರು ಕುತೂಹಲದಿಂದ ಇದೇನು ಪುಸ್ತಕ ಎಂದು ಕೇಳಿದಾಗ ಇದು ಶಬ್ದಾನುಶಾಸನವಂತೆ, ಏನೂ ಅರ್ಥವಾಗುವುದಿಲ್ಲ ಎಂದಾಗ ಇದು ವ್ಯಾಕರಣದಂತೆ ಕಾಣುತ್ತದೆ ಸಂಸ್ಕೃತದ ಲಘುಕೌಮುದಿ ಓದಿದರೆ ತಿಳಿಯಬಹುದು ಎಂದಾಗ ಶಬ್ದಾನುಶಾಸನವನ್ನು ಸುಬ್ಬರಾಯರು ಓದಿದ್ದು ನೋಡಿ ಚಿದಂಬರಯ್ಯನವರಿಗೆ ಸಂತೋಷವುಂಟಾಯಿತು. ಅಲ್ಲಿಂದಾಚೆಗೆ ಇಬ್ಬರೂ ಒಟ್ಟಿಗೆ ಕುವಲಯಾನಂದ ಪ್ರತಾಪರುದ್ರೀಯ ಶಬ್ದಾನುಶಾಸನಗಳನ್ನು ಅಧ್ಯಯನ ಮಾಡತೊಡಗಿದರು. ಹೀಗಾಗಿ ಮೊದಲ ಭೇಟಿಯಲ್ಲಿಯೇ ಅವರಿಬ್ಬರೂ ಮಿತ್ರರಾದರು.

ಒಂದು ದಿನ ಆ ಊರಿನ ಪುರಾಣಿಕ ಸುಬ್ಬಾಭಟ್ಟರು ಇವರಿಬ್ಬರ ಅಭ್ಯಾಸಕಂಡು ಸಂತೋಷಿಸಿ ಸತ್ಕಾಲಕ್ಷೇಪ ಮಾಡುತ್ತೀದ್ದೀರಿ ಎಂದು ಹೊಗಳಿದರು. ಆಗ ಚಿದಂಬರಯ್ಯನವರು ಮುಖದಲ್ಲಿ ನಗೆ ಮೂಡಿತು. ಏಕೆಂದರೆ ಅವರು ಓದುತ್ತಿದ್ದ ಸಂಸ್ಕೃತ ಗ್ರಂಥದಲ್ಲಿ ಶೃಂಗಾರ ರಸವೇ ಅಧಿಕವಾಗಿತ್ತು. ಆಗ ಚಿದಂಬರಯ್ಯನವರು ಸುಬ್ಬರಾಯರಿಗೆ ಹೇಳಿದರು 'ನಾವು

ಓದುತ್ತಿರುವ ಗ್ರಂಥಗಳು ಸಂಸ್ಕೃತದಲ್ಲಿರುವುದರಿಂದ ನಾವು ಮಾಡುತ್ತಿರುವುದು ಸತ್ಕಾಲಕ್ಷೇಪ ಅನ್ನಿಸಿದೆ, ಇದರ ಗುಟ್ಟು ತಿಳಿದರೆ ಇದೆಂಥ ಕಾಲಕ್ಷೇಪ ಎಂದು ಅವರಿಗೆ ತಿಳಿಯುತ್ತದೆ' ಎಂದು ಅಪರೂಪಕ್ಕೆ ನಕ್ಕರು. ಏಕೆಂದರೆ ಚಿದಂಬರಯ್ಯನವರಲ್ಲಿ ನಗುಮುಖ ಕಾಣುತ್ತಿದ್ದುದು ಅಪರೂಪವಾಗಿತ್ತು. ಸದಾ ಗಂಭೀರರಾಗಿರುತ್ತಿದ್ದರು. ಸಂಸ್ಕೃತದ ಅಲಂಕಾರ ಗ್ರಂಥಗಳ ಜತೆಗೆ ಚಿಕ್ಕದೇವರಾಜ ವಂಶಾವಳಿ ಮುಂತಾದ ಹಳಗನ್ನಡ ಗ್ರಂಥಗಳ ಅಭ್ಯಾಸವು ಮುಂದುವರಿಯಿತು. ಆ ವರ್ಷ ಪಂಡಿತ ಪರೀಕ್ಷೆಗೆ ಗೊತ್ತಾದ ಪಠ್ಯಗಳು ಬದಲಾಗಿಬಿಟ್ಟಿದ್ದರಿಂದ ಚಿದಂಬರಯ್ಯನವರು ಪಂಡಿತ ಪರೀಕ್ಷೆಗೆ ಕೂಡಲು ಸಾಧ್ಯವಾಗಲಿಲ್ಲ. ಪಂಡಿತ ಪರೀಕ್ಷೆಗೆ ವಿದ್ಯಾರ್ಥಿಗಳ ಹಾಗೆ ಚಿದಂಬರಯ್ಯನವರು "ಬೆಳಗಿನ ಜಾವದಲ್ಲಿ ಎದ್ದು ಸೂತ್ರಾದಿಗಳನ್ನು ಗಟ್ಟುಮಾಡುತ್ತಿದ್ದರು". ಚಿದಂಬರಯ್ಯನವರ ಜೊತೆ ಅಭ್ಯಾಸ ಮಾಡಿದ್ದರ ಫಲವಾಗಿ ಅವರ ಸಹವಾಸದ ನಿಮಿತ್ತವಾಗಿ ಸುಬ್ಬರಾಯರು ಅನೇಕರಿಗೆ ಸಂಸ್ಕೃತ ಕಲಿಸುವ ಮೇಷ್ಟ್ರಾಗಿದ್ದರು. ಚಿದಂಬರಯ್ಯನವರು ಶಿಕ್ಷಣ ಇಲಾಖೆಯಲ್ಲಿ ಸಾಕಷ್ಟು ಪ್ರಭಾವಶಾಲಿಗಳಾಗಿದ್ದರು. ಡೆಪ್ಯುಟಿ ಇನ್ಸ್‌ಪೆಕ್ಟರರಿಗೆ ಹೇಳಿ ಜಗಳೂರಿನಲ್ಲಿ ಸುಬ್ಬರಾಯರಿಗೆ ಅಧ್ಯಾಪಕರ ಕೆಲಸ ಕೊಡಿಸಿದರು. ಇದೇ ಸಮಯದಲ್ಲಿ ಚಿದಂಬರಯ್ಯನವರು ತಮ್ಮ ಅಧ್ಯಾಪಕ ವೃತ್ತಿ ಜತೆಗೆ ಸುಬ್ರಹ್ಮಣ್ಯ ಅಯ್ಯರ್ ಎಂಬುವವರ ಲೈಫ್ ಇನ್ಶೂರೆನ್ಸ್ ಆಫೀಸಿನಲ್ಲಿ ಲೆಕ್ಕಪತ್ರಗಳನ್ನು ನೋಡಿಕೊಳ್ಳಲು ನೆರವಾಗುತ್ತಿದ್ದರು. ಚಿದಂಬರಯ್ಯನವರು ಕಡೂರಿನಲ್ಲಿದ್ದಾಗಲೇ ಸುಬ್ಬರಾಯರು ಹೊಸದುರ್ಗದ ಸ್ಕೂಲಿನಲ್ಲಿ ಹೆಡ್ಮಾಸ್ಟರ್ ಆದರು. ಆಗ ಚಿದಂಬರಯ್ಯನವರು ಸುಬ್ಬರಾಯರಿಗೆ ಅಭಿನಂದನೆ ಸೂಚಿಸಿ ಹೆಡ್ಮಾಸ್ಟರ್ ಆಗಿ ಸ್ಕೂಲಿನ ಕೆಲಸ ಹೇಗೆ ಮಾಡಬೇಕೆಂದು ಮಾರ್ಗದರ್ಶನ ಮಾಡಿದರು. ಸುಬ್ಬರಾಯರು ೧೯೦೭ರಲ್ಲಿ ಹೊಸದುರ್ಗದಿಂದ ಹೊಳಲ್ಕೆರೆಗೆ ವರ್ಗವಾಗಿ ಬಂದರು. ಆಗ ಕಡೂರಿನಲ್ಲಿದ್ದ ಚಿದಂಬರಯ್ಯನವರೂ ಸುಬ್ಬರಾಯರೂ ಅದ್ವೈತ ವೇದಾಂತದ ಪಂಚದಶಿ ಗ್ರಂಥವನ್ನು ವಿಶೇಷವಾಗಿ ಅಧ್ಯಯನ ಮಾಡುತ್ತಾ ಶಾಲೆಗೆ ಸಂಬಂಧಿಸಿದ ಪರೀಕ್ಷೆ ವ್ಯವಸ್ಥೆ , ಪ್ರಶ್ನೆಪತ್ರಿಕೆ ರಚನೆ ಮೊದಲಾದ ವಿಚಾರಗಳಲ್ಲಿ ಪರಸ್ಪರ ಸಹಾಯಕರಾಗಿರುತ್ತಿದ್ದರು.

ಸುಬ್ಬರಾಯರಿಗೆ ಹೇಗೆ ಚಿದಂಬರಯ್ಯನ ಸಹವಾಸದಿಂದ ಕನ್ನಡ ಅಭ್ಯಾಸದಲ್ಲಿ ಆಸಕ್ತಿ ಹುಟ್ಟಿ ಪಂಡಿತ ಪರೀಕ್ಷೆಗೆ ಕೂಡಲು ಪ್ರೇರಣೆ ದೊರಕಿತೋ ಹಾಗೆಯೇ ಚಿದಂಬರಯ್ಯನವರಿಗೆ ಸಂಸ್ಕೃತ ಗ್ರಂಥಗಳ ಅಭ್ಯಾಸದಿಂದ ಸುಬ್ಬರಾಯರ ಸಹವಾಸದಿಂದ ವೇದಾಂತದ ಗೀಳು ಹೆಚ್ಚಾಯಿತು (ಪು.೧೦೬ ಶ್ರೀಶ್ರೀ).

ಕಡೂರು ಉಪಾಧ್ಯಾಯರ ಸಂಘದ ಚಟುವಟಿಕೆಗಳು

ಚಿದಂಬರಯ್ಯನವರು ಕಡೂರಿನಲ್ಲಿದ್ದಾಗ ವೇದಾಂತದ ಅಭ್ಯಾಸವನ್ನು ಬಲವಾಗಿ ನಡೆಯಿಸಿದ್ದರೂ ಸ್ಕೂಲು ಕೆಲಸವನ್ನೇನೂ ಅನಾದರದಿಂದ ಕಾಣುತ್ತಿರಲಿಲ್ಲ. ಶಾಲಾ ಕರ್ತವ್ಯಗಳ ಜತೆಗೆ ಒಂದು ಉಪಾಧ್ಯಾಯರ ಸಂಘ ಕಟ್ಟಿದರು. ಪಾಠ ಹೇಳುವ ಕ್ರಮ, ಉಪನ್ಯಾಸಗಳ ವ್ಯವಸ್ಥೆ ಮುಂತಾದ ಚಟುವಟಿಕೆಗಳನ್ನು ನಡೆಸಿದರು. ಅಲ್ಲಿ ತಾವು ಮಾಡಿದ ಉಪನ್ಯಾಸಗಳನ್ನು

ಪುಸ್ತಕರೂಪದಲ್ಲಿ ಪ್ರಕಟಿಸಿದರು. ಉಪಾಧ್ಯಾಯರ ಯೋಗ್ಯತೆಗಳು, ಮನಶ್ಶಿಕ್ಷಣ, ಬೋಧನ ಕ್ರಮ, ಬೋಧನೆಯ ಸ್ವಭಾವ ಮುಂತಾದ ಗ್ರಂಥಗಳು ಈ ಸಂಘದಿಂದ ಪ್ರಕಟವಾದವು. ಸು. ೧೯೦೮ರಲ್ಲಿ ಕಡೂರಿನಲ್ಲಿ ವಿದ್ಯಾಭ್ಯಾಸದ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ಕಡೂರು ಜಿಲ್ಲೆಯ ಎಲ್ಲಾ ಶಾಲಾ ವಿದ್ಯಾರ್ಥಿಗಳೂ ಆ ಪ್ರದರ್ಶನವನ್ನು ನೋಡಲು ಶಿಕ್ಷಣ ಇಲಾಖೆಯವರು ಸುತ್ತಮುತ್ತಲ ಶಾಲೆಗಳಿಗೆ ರಜೆ ಘೋಷಿಸಿದ್ದರು.

ಈ ಪ್ರದರ್ಶನ ವ್ಯವಸ್ಥೆಗೆ ಸುಬ್ಬರಾಯರು ಜಂಟಿ ಕಾರ್ಯದರ್ಶಿ ಆಗಿದ್ದರು. ಅದೇ ವರ್ಷ ಮೈಸೂರಿನಲ್ಲಿ ನಡೆದ ವಿದ್ಯಾಭ್ಯಾಸದ ಪ್ರದರ್ಶನಕ್ಕೆ ಚಿದಂಬರಯ್ಯನವರು ತಮ್ಮ ಸಹೋದ್ಯೋಗಿಗಳನ್ನೆಲ್ಲಾ ಕರೆದುಕೊಂಡು ಹೋಗಿದ್ದರು.

ಕಡೂರಿನಲ್ಲಿ ಚಿದಂಬರಯ್ಯನವರು ಶಾಲಾ ಅಧ್ಯಾಪಕರಾಗಿ, ಹೆಡ್ಮಾಸ್ಟರ್ ಆಗಿ ಪಾಠ-ಪ್ರವಚನ ಆಡಳಿತ ನಡೆಸುವುದರ ಜೊತೆಗೆ ಸಂಘಸ್ಥಾಪನೆ, ವಸ್ತುಪ್ರದರ್ಶನ ಇತ್ಯಾದಿ ಉಪಾಧ್ಯಾಯರ ಚಟುವಟಿಕೆಗಳನ್ನು ನಡೆಸುವುದರ ಜೊತೆಗೆ ಅನೇಕ ಗ್ರಂಥರಚನೆಗಳನ್ನು ಮಾಡಿದರು. ಈ ಅವಧಿಯಲ್ಲಿ ಅವರು ರಚಿಸಿದ ಗ್ರಂಥಗಳೆಂದರೆ ೧) ನೀತಿಸಾರ (ನೀತಿ ಗ್ರಂಥ), ೨) ಕಾಲಾಂತರ, ೩) ಗುಣನಿರೂಪಣೆ ೧೯೦೮ (ನೀತಿಗ್ರಂಥ), ೪) ಮಾಧವರಾವ್ ಸಿಂಧೆ (ಜೀವನ ಚರಿತ್ರೆ), ಸ್ತ್ರೀಧರ್ಮ ಸಂಗ್ರಹ, ಕೃಷ್ಣಮಹೇಶ್ವರಿ (ಐತಿಹಾಸಿಕ ನಾಟಕ, ೧೯೧೦). (ಪುಟ ೧೮೮ ಶ್ರೀಗಳ ಸ್ವಹಸ್ತ ಚರಿತ್ರೆ)

ಚಿದಂಬರಯ್ಯನವರ ಅಭ್ಯಾಸಕ್ರಮದ ಅನುಸರಣೆ

ಚಿದಂಬರಯ್ಯನವರ ಅಭ್ಯಾಸಕ್ರಮ ಮತ್ತು ಟಿಪ್ಪಣಿ ಮಾಡಿಕೊಳ್ಳುವ ಪದ್ಧತಿ ಸುಬ್ಬರಾಯರ ಮೇಲೆ ಅಪಾರ ಪ್ರಭಾವ ಬೀರಿತ್ತು. ಹೊಳಲ್ಕೆರೆಯಲ್ಲಿ ಅಧ್ಯಾಪಕರಾಗಿದ್ದಾಗ ಶಾಲೆಯ ಲೈಬ್ರರಿಯಲ್ಲಿ ಶಬ್ದಾನುಶಾಸನದ ಸೂತ್ರಗಳು, ವೃತ್ತಿ, ವ್ಯಾಖ್ಯಾನುಸಾರ ಇವುಗಳನ್ನು ನಕಲು ಮಾಡಿ ಬರೆದುಕೊಳ್ಳುವುದು, ತಮ್ಮಲ್ಲಿದ್ದ ಲಘುಕೌಮುದಿಯ ಸೂತ್ರಗಳ ಅಭಿಪ್ರಾಯವನ್ನು ತಿಳಿದುಕೊಂಡು ಶಬ್ದರೂಪಗಳ ರೂಪನಿಷ್ಪತ್ತಿ ಹೇಗಾಗುವುದೆಂಬುದನ್ನು ಗೊತ್ತುಪಡಿಸಿಕೊಂಡು ಚಿದಂಬರಯ್ಯನವರ ಅನುಕರಣೆಯಂತೆ ಶಬ್ದಗಳನ್ನು ಕ್ರಿಯಾಪದದ ರೂಪಗಳನ್ನು ಬರೆದುಕೊಳ್ಳುವುದರಲ್ಲಿ ನಿರತರಾದರು.

ಅಷ್ಟೇ ಅಲ್ಲದೆ ಚಿದಂಬರಯ್ಯನವರ ಸಹವಾಸದ ಫಲವಾಗಿ ಪಂಡಿತಪರೀಕ್ಷೆಗೆ ಓದಬೇಕೆಂಬ ತವಕವು ಸುಬ್ಬರಾಯರಿಗೆ ಉಂಟಾಯಿತು. ಆಗ ಚಿದಂಬರಯ್ಯನವರಿಂದ ಪಂಡಿತ ಪರೀಕ್ಷೆಗೆ ಇಟ್ಟಿದ್ದ ಹಳಗನ್ನಡ ಗ್ರಂಥಗಳನ್ನು ಇತರ ಗ್ರಂಥಗಳ ಪಟ್ಟಿ ತರಿಸಿಕೊಂಡು ಅದರಲ್ಲಿದ್ದ ಗ್ರಂಥಗಳನ್ನು ಅಭ್ಯಾಸಮಾಡಿದರು.

ಹೊಸದುರ್ಗಕ್ಕೆ ಹೆಡ್ಮಾಸ್ಟರ್ ಆಗಿ ಸುಬ್ಬರಾಯರು ವರ್ಗವಾದಾಗ ಕಡೂರಿನಲ್ಲಿದ್ದ ಚಿದಂಬರಯ್ಯನವರು ಕೇವಲ ಅಭಿನಂದನೆಪತ್ರ ಕಳಿಸಲಿಲ್ಲ, ಸ್ಕೂಲಿನ ಕೆಲಸವನ್ನು ಹೇಗೆ ನಿರ್ವಹಿಸಬೇಕೆಂಬುದರ ಬಗ್ಗೆ ಬುದ್ಧಿವಾದ ತಿಳಿಸಿ ವಿವರವಾಗಿ ಪತ್ರವನ್ನು ಕಳಿಸಿದ್ದರು. ಹೀಗೆ ಚಿದಂಬರಯ್ಯನವರಿಗೂ ಸುಬ್ಬರಾಯರಿಗೂ ಪರಸ್ಪರ ಪ್ರೀತಿವಿಶ್ವಾಸಗಳು ಅನ್ಯೋನ್ಯವಾಗಿದ್ದವು.

೧೯೦೬ರ ವೇಳೆಗೆ ಹೊಸದುರ್ಗದಿಂದ ಹೊಳಲ್ಕೆರೆ ಎ.ವಿ.ಸ್ಕೂಲಿಗೆ ಹೆಡ್‌ಮಾಸ್ಟರ್‌ರಾಗಿ ಸುಬ್ಬರಾಯರು ವರ್ಗವಾದ ಮೇಲೆ ಕಡೂರಿನಲ್ಲಿದ್ದ ಚಿದಂಬರಯ್ಯನವರೊಡನೆ ಹೆಚ್ಚಿನ ಒಡನಾಟ ಉಂಟಾಯಿತು. ೧೯೦೬-೦೭ ಸುಮಾರಿನಲ್ಲಿ ನಿರ್ಣಯಸಾಗರದ ಮುದ್ರಣಾಲಯದ ವೇದಾಂತ ಪಂಚದಶಿಯನ್ನು ತರಿಸಿಕೊಂಡು ವ್ಯಾಖ್ಯಾನ ಸಮೇತ ಜಂಟಿ ಅಧ್ಯಯನ ಮಾಡಿದರು. ಇಂದರ ಫಲವಾಗಿ ಚಿದಂಬರಯ್ಯನವರು ೧೯೩೨ರಲ್ಲಿ ಪಂಚದಶಿ ತತ್ವಾರ್ಥವೆಂಬ ಗ್ರಂಥದ ಗದ್ಯಾನುವಾದವನ್ನು ಪ್ರಕಟಿಸಿದರು.

ದಾವಣಗೆರೆಯಲ್ಲಿ ಚಿದಂಬರಯ್ಯನವರು ಮತ್ತು ಸುಬ್ಬರಾಯರು

೧೯೦೯-೧೯೧೧, ಕಡೂರಿನಲ್ಲಿದ್ದಾಗ ಚಿದಂಬರಯ್ಯನವರು ೧೯೦೬ನಲ್ಲಿ ಪತ್ನಿವಿಯೋಗವಾದ ಮೇಲೆ ಅಲ್ಲಿರಲು ಇಷ್ಟಪಡದೆ ವರ್ಗವನ್ನು ಕೇಳಿದ್ದರು. ಆಗ ಸ್ಥಳಾಂತರವಾಗಲು ಸಾಧ್ಯವಾಗದೆ ಅಲ್ಲಿ ಇದ್ದ ಟ್ರೈನಿಂಗ್ ಕಾಲೇಜಿಗೆ ಚಿದಂಬರಯ್ಯನವರನ್ನು ಹಾಕಿದ್ದರು. "ಟ್ರೈನಿಂಗ್ ಕಾಲೇಜಿಗೆ ತರಬೇತಿಗೆ ಹಾಜರಾದಾಗ ಅಲ್ಲಿಯ ಮುಖ್ಯಸ್ಥರು ಶಿಕ್ಷಣತಜ್ಞ ವಿದ್ವಾಂಸರೂ, ಸಾಹಿತಿಗಳೂ ಆದ ಹೊಸಕೆರೆ ಚಿದಂಬರಯ್ಯನವರನ್ನು ಬಲ್ಲಿರಾ? ಶಿಕ್ಷಣ ಮತ್ತು ಇತರ ವಿಷಯಗಳ ಮೇಲೆ ಹತ್ತಾರು ಗ್ರಂಥಗಳನ್ನು ಬರೆದಿದ್ದಾರೆ ಎಂದಾಗ 'ಇವರು ನಾನೇ ಹೊಸಕೆರೆ ಚಿದಂಬರಯ್ಯ' ಎಂದಾಗ ಅವರು ಚಿದಂಬರಯ್ಯನವರಿಗೆ ನಮಸ್ಕರಿಸಿ ನಿಮ್ಮಂಥವರಿಗೆ ತರಬೇತಿ ಅಗತ್ಯವಿಲ್ಲ "ನಿಮ್ಮಿಂದ ನಮಗೆ ತರಬೇತಿ ದೊರಕಬೇಕು" ಎಂದು ಹೇಳಿ ಅವರ ಬಗ್ಗೆ ಮುಖ್ಯಸ್ಥರು ಮೆಚ್ಚುಗೆಯನ್ನು ಸರ್ಕಾರಕ್ಕೆ ತಿಳಿಸಿದರು. ಆಗ ದಾವಣಗೆರೆ ಮಿಡ್ಲಸ್ಕೂಲ್ ಹೆಡ್‌ಮಾಸ್ಟರರನ್ನಾಗಿ ವರ್ಗ ಮಾಡಿದರು (೧೯೧೦) ಆಗ ಮಿಡ್ಲ್‌ಸ್ಕೂಲ್ ಹೆಡ್ಮಾಸ್ಟರ್ ಆಗಲು ಉಪಾಧ್ಯಾಯ ತರಬೇತಿ ಆಗಿರಬೇಕಿತ್ತು. ಚಿದಂಬರಯ್ಯನವರಿಗೆ ಆಗ ೨೦ ರೂ. ಸಂಬಳ ಬರುತ್ತಿತ್ತು. ಸುಬ್ಬರಾಯರ ಸಂಬಳವೂ ೨೦ ರೂ. ಆಗಿತ್ತು. ಅವರು ಅಸಿಸ್ಟೆಂಟ್ ಮಾಸ್ಟರ್ ಆಗಿರಬೇಕಿತ್ತು. ಆದರೆ, ಸುಬ್ಬರಾಯರು ಸ್ವಲ್ಪವೂ ಮುಜುಗರ ಹೊಂದಲಿಲ್ಲ. ಅವರೇ ಹೇಳುವಂತೆ 'ನನಗೆ ಮೊದಲಿನಿಂದಲೂ ಉಪಕಾರಿಗಳಾಗಿದ್ದ ಚಿದಂಬರಯ್ಯನವರಲ್ಲಿ ಸಹೋಪಾಧ್ಯಾಯರಾಗುವುದು ನನಗೆ ಗೌರವವೆಂದೇ ನಾನು ಬಗೆದೆನು' (ಪು ೧೯೫) ಎಂದಿದ್ದಾರೆ. ಚಿದಂಬರಯ್ಯನವರು ಸುಬ್ಬರಾಯರ ಸಹವಾಸದಿಂದ ವೇದಾಂತದ ಪ್ರಯೋಜನವಿದ್ದುದರಿಂದ ಅವರೇ ದಾವಣಗೆರೆಗೆ ವರ್ಗ ಕೇಳಲು ಸುಬ್ಬರಾಯರಿಗೆ ಹೇಳಿದ್ದರು. ಹೀಗೆ ಪರಸ್ಪರ ಪ್ರೀತಿ-ಗೌರವಗಳ ಬಾಂಧವ್ಯ ಅವರಿಬ್ಬರದಾಗಿತ್ತು.

ಚಿದಂಬರಯ್ಯನವರು ದಾವಣಗೆರೆಯಲ್ಲಿ ಶಾಲೆಯಲ್ಲಿ ಉಪಾಧ್ಯಾಯ ರಾಗಿದ್ದವರೊಬ್ಬರ ಅಕ್ಕ ಲಕ್ಷ್ಮೀಬಾಯಿ ಎಂಬುವರ ಮನೆಯಲ್ಲಿ ಊಟ ಮಾಡುತ್ತಿದ್ದರು. ದಾವಣಗೆರೆಗೆ ವರ್ಗವಾಗಿ ಬಂದಮೇಲೆ ಸುಬ್ಬರಾಯರು ಅವರ ಮನೆಗೆ ಊಟಕ್ಕೆ ಸೇರಿಕೊಂಡರು (ಪುಟ ೧೯೭ ಸ್ವಹಸ್ತಚರಿತ್ರೆ). ಇಬ್ಬರೂ ಒಟ್ಟಿಗೆ ವಾಸಿಸುತ್ತಿದ್ದರು.

ದಾವಣಗೆರೆಯಲ್ಲಿ ಚಿದಂಬರಯ್ಯನವರ ಹೆಡ್ಮಾಸ್ಟರ್ ಕೆಲಸ

ಚಿದಂಬರಯ್ಯನವರು ಶಾಲಾಶಿಕ್ಷಣ ಪದ್ಧತಿಯಲ್ಲಿ ತಮ್ಮದೇ ಆದ ಕಲ್ಪನೆಗಳನ್ನು ಆದರ್ಶಗಳನ್ನು ಹೊಂದಿದ್ದರು. ಹೀಗಾಗಿ ಅವರು ತಾವು ದಾವಣಗೆರೆ ಶಾಲೆಗೆ ಬಂದಾಗ ಅಲ್ಲಿ ಹಿಂದೆ ಇದ್ದ ಗುರುಶಾಂತಪ್ಪನವರು ಅನುಸರಿಸುತ್ತಿದ್ದ ಪದ್ಧತಿಗಳನ್ನು ಕೈಬಿಟ್ಟು ವೇಳಾಪತ್ರಿಕೆ ಪ್ರಕಾರ ಶಾಲೆಯನ್ನು ನಡೆಸಿದರು.

ಸುಬ್ಬರಾಯರು ಚಿದಂಬರಯ್ಯನವರ ಜೊತೆಯಲ್ಲಿಯೇ ಇದ್ದು ಅನೇಕ ವಿಷಯಗಳಲ್ಲಿ ಅವರನ್ನೇ ಶಾಲೆಯ ವಿಚಾರದಲ್ಲಿ ಅನುಸರಿಸಿದರು. ಅವರ ಜೊತೆಯಲ್ಲಿಯೇ ಊಟಕ್ಕೆ ಶಾಲೆಗೆ ಹೋಗುತ್ತಿದ್ದರು.

ಹೊಸಕೆರೆ ಚಿದಂಬರಯ್ಯನವರು ಕೈಯಲ್ಲಿ ಒಂದು ಬಗನೆಯ ಮರದ ಕೋಲನ್ನು ಹಿಡಿದುಕೊಂಡು ಹೋಗುತ್ತಿದ್ದರು. ಅವರಂತೆಯೇ ಸುಬ್ಬರಾಯರೂ ಒಂದು ಬಗನೆಯ ಕೋಲನ್ನು ಹಿಡಿದು ಹೋಗುತ್ತಿದ್ದರು. (ಬಗನೆಯ ಕೋಲು ಹಿಡಿದರೆ ವ್ಯವಹಾರದಲ್ಲಿ ಎಲ್ಲೆಲ್ಲಿಯೂ ಜಯ ಎಂದು ಯಾರೋ ಹೇಳಿದ್ದನ್ನು ಸುಬ್ಬರಾಯರು ಕೇಳಿದ್ದರು. ಅದಕ್ಕಾಗಿ ಚಿದಂಬರಯ್ಯನವರು ಹಿಡಿದಿದ್ದಾರೆ ಎಂದು ಸುಬ್ಬರಾಯರು ಭಾವಿಸಿದ್ದರಿಂದ ಅವರು ಬಗನೆಯ ಕೋಲು ಹಿಡಿದು ಶಾಲೆಗೆ ಹೋಗುತ್ತಿದ್ದರು).

ಕೇವಲ ಶಾಲೆಯಲ್ಲಿ ಜೊತೆಯಲ್ಲಿಯೇ ಆಫೀಸು ರೂಮಿನಲ್ಲಿ ಕೂಡುತ್ತಿದ್ದುದು ಅಷ್ಟೇ ಅಲ್ಲದೆ, ಒಟ್ಟಿಗೆ ಒಂದೇ ಕಡೆಯಲ್ಲಿ ಮಲಗುತ್ತಿದ್ದರು. ಒಟ್ಟಿಗೆ ವೇದಾಂತ ಚಿಂತನೆ ಮಾಡುತ್ತಿದ್ದರು. ಆಗಾಗ್ಗೆ ಸಮೀಪದಲ್ಲಿ ಹರಿಹರಕ್ಕೆ ನದೀಸ್ನಾನಕ್ಕೆ ಜೊತೆಯಲ್ಲಿಯೇ ಹೋಗುತ್ತಿದ್ದರು. (ಪು. ೧೯೮ ಸ್ವಹಸ್ತಾಕ್ಷರ ಚರಿತ್ರೆ).

ಚಿದಂಬರಯ್ಯನವರಿಗೆ ಭಾಗವತರ ಮೊದಲದರ್ಶನ

ದಾವಣಗೆರೆಯಲ್ಲಿದ್ದಾಗ ಮೊದಲ ಬಾರಿಗೆ ಹೊಸಕೆರೆ ಚಿದಂಬರಯ್ಯನವರು ಕುರ್ತುಕೋಟಿ ಭಾಗವತರನ್ನು ಕಂಡರು. ಕಂಡ ಸಂದರ್ಭವೆಂದರೆ, ಹರಿಹರದಲ್ಲಿ ಸುಬ್ಬರಾಯರು ನದೀಸ್ನಾನಕ್ಕೆ ಹೋದಾಗ ಅವರಿಗೆ ಪರಿಚಯವಿದ್ದ ಮಂಗಳದ ರಂಗರಾಯರು ಭೇಟಿ ಆದರು. ಅವರು ಕುರ್ತುಕೋಟಿ ಭಾಗವತರು, ಬೆಳಧಡಿಯ ಬ್ರಹ್ಮಾನಂದರು, ಅವರ ಗುರುಗಳಾದ ಗೋಂದಾವಳಿ ಬ್ರಹ್ಮಚೈತನ್ಯರು ಇವರೆಲ್ಲ ರಾಮನಾಮದ ಜಪ ಭಜನೆಗಳನ್ನು ಪ್ರಚಾರ ಮಾಡುತ್ತಿರುವ ವಿಷಯ

ತಿಳಿಸಿದರು. ಅನಂತರ ಕುರ್ತುಕೋಟಿ ಭಾಗವತರು ಯಜ್ಞದ ಬಗ್ಗೆ ಹೇಳಿದ ವಿಚಾರವನ್ನು ತಿಳಿಸಿದರು. ಆ ಸಂಗತಿ ಕುತೂಹಲಕಾರಿ ಆಗಿತ್ತು. ಕುರ್ತುಕೋಟಿ ಭಾಗವತರು ಅವರ ಗುರುಗಳಾದ ಮಹಾರಾಜರು ಹೇಳಿದ್ದು ಎಂದರೆ "ಯಜ್ಞ ಮಾಡಲು ಅರ್ಹತೆಯುಳ್ಳವರು ಎಂದರೆ - ಯಜ್ಞಪಶುವಿನ ಮೈಮೇಲಿರುವಷ್ಟು ಕೂದಲುಗಳ ಸಂಖ್ಯೆಯ ಬ್ರಾಹ್ಮಣರಿಗೆ ಅನ್ನಸಂತರ್ಪಣೆ ಮಾಡಬೇಕು. ಮಂತ್ರ ಮಹಿಮೆಯಿಂದ ಯಜ್ಞ ಪಶುವನ್ನು ಸಂಜೀವನಗೊಳಿಸಬೇಕು" (ಪು. ೧೯೯) ಎಂದಾಗ ಆ ಬಗ್ಗೆ ಸುಬ್ಬರಾಯರು ಆಕ್ಷೇಪವೆತ್ತಿದಾಗ ಅವರು ಬಂದಾಗ ಈ ಬಗ್ಗೆ ಅವರನ್ನೇ ಕೇಳಿ ಎಂದರು. ಇದಾದ ಕೆಲವು ದಿನಗಳ ನಂತರ ಕುರ್ತುಕೋಟಿ ಭಾಗವತರು ಮಂಗಳದ ರಂಗರಾಯರ ಮನೆಗೆ ಬಂದಾಗ ಅವರು ಸುಬ್ಬರಾಯರಿಗೆ ಹೇಳಿ ಕಳಿಸಿದರು. ಆಗ ಕುತೂಹಲದಿಂದ ಚಿದಂಬರಯ್ಯನವರು ಸುಬ್ಬರಾಯರೊಡನೆ ಹೊರಟು ಭಾಗವತರನ್ನು ಭೇಟಿಮಾಡಿದರು.

ಆಗ ಚಿದಂಬರಯ್ಯನವರು, ಗೋಂದಾವಳಿಯ ಮಹಾರಾಜರನ್ನು ಪ್ರಸ್ತಾಪಿಸಿ 'ಅವರು ಮುಖ್ಯವಾಗಿ ನಾಮಸ್ಮರಣೆಯನ್ನೇ ಹೇಳುತ್ತಾರೆ ಎಂದು ಕೇಳಿದ್ದೇನೆ' ಎಂದರು. ಆಗ ಮಹಾಭಾಗವತರು, 'ಹಾಗೇನಿಲ್ಲ, ನಾಮಸ್ಮರಣೆಯನ್ನು ಎಲ್ಲರಿಗೂ ಹೇಳುತ್ತಾರೆ. ಅಧಿಕಾರಿಗಳಿಗೆ ತಕ್ಕಂತೆ ಪ್ರಾಣಾಯಾಮ ಯೋಗಾದಿಗಳನ್ನು ಹೇಳುತ್ತಾರೆ' ಎಂದರು. ಈ ಮಾತಿನಿಂದ ಯೋಗವನ್ನು ಕುರ್ತುಕೋಟಿ ಅವರು ಗೋಂದಾವಳಿ ಅವರಲ್ಲಿ ಶಿಷ್ಯವೃತ್ತಿಯಿಂದ ಕಲಿತಿರಬೇಕೆಂದು ಭಾವಿಸಿದರು. ಮತ್ತು ಅವರಲ್ಲಿ ಅತಿಶಯಗುಣ ಕಂಡರು. ಗೋಂದಾವಳಿ ಮಹಾರಾಜರು ಗಗನಾಚಾರ್ಯರೆಂಬ ಪ್ರಸಿದ್ಧಯೋಗಾಭ್ಯಾಸ ಕಲಿತಿದ್ದರು.

ಸರ್ಕಾರಿ ಶಿಕ್ಷಕ ವೃತ್ತಿಯಿಂದ ನಿವೃತ್ತಿ

ಮಹಾಭಾಗವತರು ಗೋಂದಾವಳಿ ಮಹಾರಾಜರ ಪ್ರಶಂಸೆಯನ್ನು ಮಾಡುತ್ತಿದ್ದುದು ಚಿದಂಬರಯ್ಯನವರ ಚಿತ್ತವನ್ನು ಆ ಕಡೆ ಸೆಳೆಯಿತು. ಭಾಗವತರ ಅಪ್ಪಣೆಯಂತೆ ಚಿದಂಬರಯ್ಯನವರು ಗೋಂದಾವಳಿಗೆ ಹೋಗಿ ಮಹಾರಾಜರ ದರ್ಶನ ಪಡೆದುಕೊಂಡರು. ಅಲ್ಲಿ ಏಕಾಂತವಾಗಿ ಅವರಲ್ಲಿ ಸೇವೆಗೆ ನಿಲ್ಲುವುದಕ್ಕೆ ಅನುಜ್ಞೆ ಕೊಡಬೇಕೆಂದು ಬೇಡಿಕೊಂಡರಂತೆ. ಚಿದಂಬರಯ್ಯನವರ ಕುಟುಂಬ ಸ್ಥಿತಿಯನ್ನು ವಿಚಾರಿಸಿಕೊಂಡ ಬಳಿಕ ಮಹಾರಾಜರು "ಆರು ತಿಂಗಳವರೆಗೆ ಸಂಧ್ಯಾವಂದನೆ, ಜಪ, ಬ್ರಹ್ಮಯಜ್ಞ, ವೈಶ್ವದೇವ, ಪಾರಾಯಣ ಪೂಜೆ ಮುಂತಾದವುಗಳನ್ನು ನಿಯಮದಿಂದ ಮಾಡುತ್ತಿದ್ದು ಅನಂತರ ಮತ್ತೊಂದು ಪತ್ರವನ್ನು ಹಾಕಿದರೆ ಹೇಳುವೆನು" ಎಂದರಂತೆ. ಅವರು ಹೇಳಿದ ಹಾಗೆ ನಡೆದುಕೊಂಡು ಪತ್ರ ಬರೆದು ಅನುಜ್ಞೆ ಪಡೆದು ದಾವಣಗೆರೆ ವ್ಯವಹಾರವನ್ನೆಲ್ಲಾ ಮುಗಿಸಿ ಸರಕಾರದಿಂದ ರಜಾ ಪಡೆದು ಗೋಂದಾವಳಿಗೆ ಹೊರಟುಬಿಟ್ಟರು. ದಾವಣಗೆರೆ ಬಿಡುವಾಗ ತಮ್ಮ ಲೈಫ್ ಇನ್ಶೂರೆನ್ಸ್ ಪಾಲಿಸಿಯನ್ನು ಪೇಡ್‌ಅಪ್ ಪಾಲಿಸಿ ಮಾಡಿಸಿದರು. ತಮ್ಮಲ್ಲಿದ್ದ ಅನವಶ್ಯವಾದ ಗ್ರಂಥಗಳನ್ನೆಲ್ಲ ಅತ್ತ ಒಗೆದುಬಿಟ್ಟರು. ಈ ಸಂಗತಿ ಅವರ ಧಾರ್ಮಿಕ ಶ್ರದ್ಧಾಭಕ್ತಿ ಆವೇಶಗಳಿಗೆ ನಿದರ್ಶನವಾಗಿದೆ (ಪು. ೨೨೬ ಶ್ರೀಶ್ರೀ)

ಕುರ್ತುಕೋಟಿಗೆ ವೈ. ಸುಬ್ಬರಾಯರು ಆಗಾಗ ಹೋಗಿ ಬರುತ್ತಿದ್ದರು. ಚಿದಂಬರಯ್ಯನವರನ್ನು ಭೇಟಿ ಆಗುತ್ತಿದ್ದರು. ಒಮ್ಮೆ ಹಾಗೆ ಹೋದಾಗ ಅಲ್ಲಿ ಮಹಾಭಾಗವತರು ಇದ್ದರು. ಅವರು ಸುಬ್ಬರಾಯರಿಗೂ ಚಿದಂಬರಯ್ಯನವರಿಗೂ ಪ್ರಾಣಾಯಾಮವನ್ನು, ಲಯಚಿಂತನೆಯ ಪ್ರಕಾರವನ್ನು ತಿಳಿಸಿಕೊಟ್ಟರು. ಆ ಪ್ರಕಾರ ಚಿದಂಬರಯ್ಯನವರು ಪ್ರತಿದಿನ ಬೆಳಿಗ್ಗೆ ಪ್ರಾಣಾಯಾಮ ಆದ್ಯಾನುಷ್ಠಾನ ಮಾಡುತ್ತಿದ್ದರು.

ಚಿದಂಬರಯ್ಯನವರು ಮಧ್ಯಾಹ್ನದ ಮೇಲೆ ಪರಮಾರ್ಥ ಎಂಬ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಗ್ರಂಥಗಳನ್ನು ಓದುತ್ತಿದ್ದರು. ಒಂದು ದಿನ ಕುರ್ತುಕೋಟಿಗೆ ವೈ. ಸುಬ್ಬರಾಯರು ಭೇಟಿಕೊಟ್ಟಾಗ, ಚಿದಂಬರಯ್ಯನವರು ಕುಳಿತು ಬರೆಯುತ್ತಿರುವಾಗ ಅವರ ಕೈಮೇಜಿನ ಬಳಿ ಒಂದು ಲಕ್ಕೋಟೆ ಬಿದ್ದಿದ್ದನ್ನು ವೈ. ಸುಬ್ಬರಾಯರು ಕಂಡರು. ಅದನ್ನು ಕಂಡು ಸುಬ್ಬರಾಯರು ಕುತೂಹಲದಿಂದ ಇದೇನು? ಎಂದು ಕೇಳಿದರು. ಆಗ ಚಿದಂಬರಯ್ಯನವರು ಉದಾಸೀನವಾಗಿ ಅದೇ! ರಜ ಮಂಜೂರು ಮಾಡಿದ್ದಿರಬೇಕು ಎಂದರು. ಅವರು ಲಕ್ಕೋಟೆಯನ್ನು ಒಡೆದು ಕೂಡ ಇರಲಿಲ್ಲ. ಆದ್ದರಿಂದ ಸುಬ್ಬರಾಯರೇ ಅದನ್ನು ಒಡೆದು ನೋಡಿದರು. ಅದರಲ್ಲಿ "ನೀವು ಪದೇ ಪದೇ ರಜಕ್ಕೆ ಬರೆದುಕೊಳ್ಳುತ್ತಲೇ ಇರುವುದರಿಂದ ಸರ್ಕಾರಿ ಕೆಲಸಕ್ಕೆ ಬಹಳ ತೊಂದರೆಯಾಗಿದೆ. ನಿಮಗೆ ರಜ ಕೊಡಲು ಆಗುವುದಿಲ್ಲವೆಂದು ಹೇಳಿದಮೇಲೂ ನೀವು ಗೈರುಹಾಜರಿ ಆಗಿರುವುದರಿಂದ ನಿಮ್ಮನ್ನು ಕೆಲಸದಿಂದ ನಿವೃತ್ತಿ ಮಾಡಿದೆ" ಎಂದು ಪತ್ರದಲ್ಲಿತ್ತು. ಅನಂತರ ವೈ. ಸುಬ್ಬರಾಯರು ತಾವೇ ಆಸಕ್ತಿವಹಿಸಿ ಮೇಲಧಿಕಾರಿಗಳಿಗೆ ಪತ್ರ ಬರೆದುಕೊಟ್ಟರು. ಆಗ ವಿದ್ಯಾಧಿಕಾರಿಗಳಾದ ಶಾಮರಾಯರಿಂದ ಚಿದಂಬರಯ್ಯನವರಿಗೆ ಪೆನ್ಷನ್ ಮಂಜೂರಾತಿ ಆಯಿತು. ಈ ಘಟನೆಯಿಂದ ಅವರ ಉತ್ಕಟ ವೈರಾಗ್ಯವನ್ನು ಅಧ್ಯಾತ್ಮ ಸಾಧನೆಯ ಮುಗ್ಧತೆಯನ್ನು ತಿಳಿಯಬಹುದಾಗಿದೆ.

ಧಾರವಾಡದ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ಸೇವೆ

ಹೊಸಕೆರೆ ಚಿದಂಬರಯ್ಯನವರು ದೇಶಾಭಿಮಾನಿಗಳಾಗಿದ್ದು ಕರ್ನಾಟಕ ಏಕೀಕರಣ ಚಳುವಳಿ ಮತ್ತು ಸ್ವಾತಂತ್ರ್ಯ ಹೋರಾಟಗಳಲ್ಲಿ ನೇರವಾಗಿ ಧುಮಿಕ್ಕದಿದ್ದರೂ ತಮ್ಮ ಬರಹಗಳಲ್ಲಿ ಪ್ರವಚನಗಳಲ್ಲಿ ದೇಶಾಭಿಮಾನ ತೋರಿದವರು. ಅವರ ಸುಧರ್ಮ ನಾಟಕ ಪ್ರದರ್ಶನ ದೇಶಾಭಿಮಾನದ ಕೃತಿಯೆಂಬ ಕಾರಣಕ್ಕೆ ರದ್ದಾಯಿತು. ಧಾರವಾಡದ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ಧಾರ್ಮಿಕ ಶಿಕ್ಷಣದ ಅಧ್ಯಾಪಕರಾಗಿ ಸೇವೆ ಸಲ್ಲಿಸಲು ಕಾರಣ ದೇಶಾಭಿಮಾನವೇ ಆಗಿದೆ. ರಾಷ್ಟ್ರೀಯ ಚಳುವಳಿ ಅಂಗವಾಗಿ ದೇಶೀಯ ವಿದ್ಯಾಶಾಲೆ (ನ್ಯಾಷನಲ್ ಸ್ಕೂಲ್‌ಗಳು) ಅನಿಬೆಸೆಂಟ್ ಅವರಿಂದ ಬೆಂಗಳೂರು, ಧಾರವಾಡ ಮುಂತಾದೆಡೆ ಪ್ರಾರಂಭವಾಯಿತು. ಈ ಬಗ್ಗೆ ಅನಕೃ ಎಂಬ ಗ್ರಂಥದಲ್ಲಿ ತರಾಸು ಹೇಳುವ ಮಾತುಗಳಿವು (ಪು.೧೨). "ಸರ್ಕಾರಿ ವಿದ್ಯಾಶಾಲೆ ವಿದೇಶೀ ದಬ್ಬಾಳಿಕೆ ಯಂತ್ರವನ್ನು ನಡೆಸಲು ಯೋಗ್ಯತೆ ಪಡೆದ ಗುಲಾಮರನ್ನು ತಯಾರಿಸುವ ಕಾರ್ಖಾನೆ. ಅಲ್ಲಿ ಹೋಗಿ ದೇಶದ ಯುವಜನಾಂಗ ಪೌರುಷಹೀನವಾಗುತ್ತದೆ. ದೇಶದಲ್ಲಿ

ಕಿದರಿದ ವಿಪ್ಲವಕ್ಕೆ ಸೈನಿಕರನ್ನು ಒದಗಿಸುವುದೇ ಶಾಲೆಯ ಗುರಿಯಾಗಬೇಕು" ಈ ಉದ್ದೇಶದಿಂದ ಆರಂಭವಾದದ್ದು ದೇಶೀಯ ವಿದ್ಯಾಶಾಲೆ. ಇಂಥ ಶಾಲೆ ಬೆಂಗಳೂರಿನಲ್ಲೊಂದು, ಹುಬ್ಬಳ್ಳಿಯಲ್ಲೊಂದು ಪ್ರಾರಂಭವಾಯಿತು.

ಈ ಸಂದರ್ಭದಲ್ಲಿ ದೇಶೀಯ ಶಾಲೆಗಳ ಆರಂಭಕ್ಕೆ ಇನ್ನೊಂದು ಕಾರಣವನ್ನು ಶ್ರೀನಿವಾಸ ಹಾವನೂರು ಹೇಳುತ್ತಾರೆ. (ಶ್ರೇಷ್ಠ ಪತ್ರಿಕೋದ್ಯಮಿ, ಗೋವಿಂದರಾವ್-ಲೇಖಕರು ಶ್ರೀಹಾ) "ಸ್ವಾತಂತ್ರ್ಯ ಪಡೆಯಲು ಎಲ್ಲ ಕೋರ್ಟು, ಕಚೇರಿ ಹಾಗೂ ಶಾಲೆಗಳನ್ನು ಮುಚ್ಚಬೇಕು ಎಂದು ಗಾಂಧೀಜಿ ಅವರು ಕರೆಕೊಟ್ಟಿದ್ದರು. ಖಾದಿ ಉಡುಗೆಯನ್ನೇ ತೊಡಬೇಕು ವಿದೇಶೀ ಬಟ್ಟೆಗಳನ್ನು ಬಹಿಷ್ಕರಿಸಬೇಕು ಎಂದೂ ಹೇಳಿದ್ದರು. ಗಾಂಧೀಜಿ ಶಾಲೆಗಳನ್ನು ಬಹಿಷ್ಕರಿಸಲು ಕೊಟ್ಟ ಕರೆಗೆ ಮುಕ್ಕಾಲು ಪಾಲು ಜನ ಒಪ್ಪದೇ ಹೋದದ್ದು, ಬ್ರಿಟಿಷರ ಹಿಡಿತವಿಲ್ಲದ ರಾಷ್ಟ್ರೀಯ ಶಾಲೆಗಳು ಆರಂಭಗೊಳ್ಳಲು ಕಾರಣವಾಗಿತ್ತು. ಹಲವು ನಗರಗಳಲ್ಲಿ ಆರಂಭವಾದ ರಾಷ್ಟ್ರೀಯ ಶಾಲೆಗಳಂತೆ ಧಾರವಾಡದಲ್ಲಿಯೂ ಇಂಥ ಒಂದು ಶಾಲೆ ಪ್ರಾರಂಭವಾಯಿತು." ೧೯೦೯ರಲ್ಲಿ ಧಾರವಾಡದಲ್ಲಿ ಆಲೂರು ವೆಂಕಟರಾಯರು ರಾಷ್ಟ್ರೀಯ ಶಾಲೆಯನ್ನು ಆರಂಭಿಸಿದರು. ಈ ಶಾಲೆಯಲ್ಲಿ ಇದ್ದ ಅನೇಕ ವಿದ್ಯಾರ್ಥಿಗಳು ಪ್ರತಿಭಾನ್ವಿತರಾಗಿದ್ದರು. ಆಯುರ್ವೇದ ವಿದ್ವಾಂಸರಾದ ಡಾ. ಗೋಪಾಲಕೃಷ್ಣರಾಯರು, ಸಾಹಿತ್ಯ ಭಂಡಾರದ ಮ. ಗೋವಿಂದರಾಯರು ಇಲ್ಲಿ ವಿದ್ಯಾರ್ಥಿಗಳಾಗಿದ್ದರು. ಸು.ಶಿ. ದೇಸಾಯಿ ಅವರು ರಾಷ್ಟ್ರೀಯ ವಿದ್ಯಾಶಾಲೆ ಪ್ರಿನ್ಸಿಪಲ್ ಆಗಿದ್ದರು. ಬೇಂದ್ರೆ ಅವರು ಇಲ್ಲಿ ಉಪಾಧ್ಯಾಯರಾಗಿದ್ದರು. ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಗಾಂಧೀಜಿ ಅಧ್ಯಕ್ಷರಾಗಿ ಆಯ್ಕೆ ಆಗಿದ್ದರು. ಆ ಸಮ್ಮೇಳನಕ್ಕೆ ಕಾರ್ಯಕರ್ತರಾಗಿ ಸ್ವಯಂಸೇವಕರಾಗಿ ಹಲವು ಭಾಗಗಳ ರಾಷ್ಟ್ರೀಯ ಶಾಲೆಗಳಿಂದ ಸ್ವಯಂಸೇವಕರು ಬಂದಿದ್ದರು.

ಈ ಶಾಲೆಯ ದಿನಚರಿ ಎಂದರೆ ಗೋವಿಂದರಾಯರು ಹೇಳುವಂತೆ "ಪ್ರಾರ್ಥನೆ ಸ್ನಾನಗಳಾದ ಮೇಲೆ ತುಸು ಓದಿನಲ್ಲಿ ಮುಳುಗಿ ಒಂಬತ್ತಕ್ಕೆ ತಿಂಡಿ ಮುಗಿಸಿ ಎರಡುಗಂಟೆಗಳ ಪಾಠಗಳನ್ನು ಪೂರೈಸಿಕೊಂಡು ಮಧುಕರಿಯನ್ನು ವಿದ್ಯಾರ್ಥಿಗಳ ಅರಿವಿಗೆ ತಂದುಕೊಡುವಂತಿದ್ದ ಆ ನಿಯಮವು ಶಿಸ್ತುಬದ್ಧ ಜೀವನಕ್ಕೆ ವಿದ್ಯಾರ್ಥಿಗಳನ್ನು ಒಳಪಡಿಸುವಂತಿತ್ತು". ೧೯೨೧ರಲ್ಲಿ ಪ್ರಾರಂಭವಾಗಿ ೧೯೨೬ರ ಮಾರ್ಚಿನಲ್ಲಿ ಈ ಶಾಲೆ ಮುಚ್ಚಿಕೊಂಡಿತು.

ಹೊಸಪೇಟೆಯ ಶ್ರೀ ಕಡಲಬಾಳು ಪ್ರಹ್ಲಾದಾಚಾರ್ಯ ಅವರು ಈ ರಾಷ್ಟ್ರೀಯ ಶಾಲೆಯ ವಿದ್ಯಾರ್ಥಿಗಳಾಗಿದ್ದರು. ಈ ಶಾಲೆಯ ಸಂಸ್ಥಾಪಕರು, ರಾ.ರಾ. ದಿವಾಕರರು, ಹುಕ್ಕೇರಿ ರಾಮರಾಯರು ಹಾಗೂ ವಿನಾಯಕರಾವ್ ಜೋಶಿ, ಸು.ಶಿ. ದೇಸಾಯಿ, ಬುರ್ಲಿಬಿಂದು ಮಾಧವರಾವ್ ಮುಂತಾದವರು ಎಂದಿದ್ದಾರೆ. ಈ ಶಾಲೆಯಲ್ಲಿ ಧಾರ್ಮಿಕ ಶಿಕ್ಷಣಕ್ಕೂ ಅತ್ಯಂತ ಮಹತ್ವ ಕೊಡುತ್ತಿದ್ದರು. ಹೀಗಾಗಿ ಪ್ರತಿನಿತ್ಯ ಧಾರ್ಮಿಕ ಶಿಕ್ಷಣದ ಒಂದು ಪೀರಿಯಡ್ ಇರುತ್ತಿತ್ತು.

ಆಗ ಆ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಹೊಸಕೆರೆ ಚಿದಂಬರಯ್ಯ ಎಂಬ ಘನವಿದ್ವಾಂಸರು; ತಾವು ಹೇಳುವ ಧಾರ್ಮಿಕ ಶಿಕ್ಷಣದಲ್ಲಿ ಭಾರತದಲ್ಲಿ ಹಿಂದೆ ಆಗಿಹೋದ ಧಾರ್ಮಿಕ ಸತ್ಪುರುಷರು ಹಾಗೂ ರಾಷ್ಟ್ರೀಯ ವೀರಶೂರರನ್ನು ಒಳಗೊಂಡಂತೆ ೨೦ನೇ ಶತಮಾನದ ವಿಭೂತಿ ಪುರುಷರ ಚರಿತ್ರೆಗಳಲ್ಲಿಯ ಮುಖ್ಯಾಂಶಗಳನ್ನು ಹೇಳುತ್ತಿದ್ದರು. ಇದರಿಂದ ನಾವೆಲ್ಲರೂ ಪ್ರಭಾವಿತರಾದವರೇ ಆಗಿದ್ದೆವು. (ಪು. ೯-೧೦, ಶ್ರೀ.ಪು. ಗೋವಿಂದರಾವ್ ಗ್ರಂಥ) ಈ ಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ತಾನೇ ಸಿದ್ಧಪಡಿಸಿದ ಪಾಠಗಳನ್ನು ಆಧರಿಸಿ ಆರ್ಯಧರ್ಮ ಪ್ರದೀಪ ಎಂಬ ಹಿಂದೂಧರ್ಮ ಪರಿಚಯದ ಗ್ರಂಥವನ್ನು ಚಿದಂಬರಯ್ಯನವರು ರಚಿಸಿದರು. ಅದನ್ನು ಶಿಷ್ಯರಾದ ಗೋವಿಂದರಾಯರೇ ಪ್ರಕಟಿಸಿದರು. ರಾಷ್ಟ್ರೀಯ ಶಾಲೆಯಲ್ಲಿ ಕವಿಭೂಷಣ ಬೆಟಗೇರಿ ಕೃಷ್ಣಶರ್ಮರು, ಶ್ರೀಧರ ಖಾನೋಳಕರ್ ಅವರು ಅಧ್ಯಾಪಕರಾಗಿದ್ದರು. (ಈ ರಾಷ್ಟ್ರೀಯ ಮಹಾಶಾಲೆ ೧೯೨೭ರಲ್ಲಿ ಮುಕ್ತಾಯವಾಯಿತು ಎನ್ನುತ್ತಾರೆ ಕಡಲಬಾಳು ಪ್ರಹ್ಲಾದಾಚಾರ್ಯರು. ಆದರೆ ಗೋವಿಂದರಾಯರು ೧೯೨೬ ಮಾರ್ಚ್ ಎನ್ನುತ್ತಾರೆ). ಸಮಾಜ ಪುಸ್ತಕಾಲಯದ ಸ್ಥಾಪಕರಾದ ಶ್ರೀಬಾಲಚಂದ್ರ ಘಾಣೇಕರರು ರಾಷ್ಟ್ರೀಯ ಶಾಲೆ ಧಾರವಾಡದ ಮಾಳಮರಡಿಯಲ್ಲಿತ್ತೆಂದು ಹೇಳುತ್ತಾರೆ. (೧೯೨೬ರ ಕೊನೆಗೆ ರಾಷ್ಟ್ರೀಯ ಶಾಲೆ ನಿಂತುಹೋಯಿತು ಎಂದು ಘಾಣೇಕರರು ಹೇಳುತ್ತಾರೆ).

ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ ಘಾಣೇಕರರ ಜತೆ ಇದ್ದ ವಿದ್ಯಾರ್ಥಿಗಳು ಎಂದರೆ ಶ್ರೀನಿವಾಸ ಕುಲಕರ್ಣಿ (S), ರಾಮಚಂದ್ರ ಹೇಜೀಬ (R), ಮೇವುಂಡಿಮಲ್ಲಾರಿ (M), ಮಂಗಳೂರು ಗೋವಿಂದರಾಯ (G), ಬಾಲಚಂದ್ರ ಘಾಣೇಕರ (B) ಈ ೫ ಜನ ವಿದ್ಯಾರ್ಥಿಗಳೂ ಒಟ್ಟಿಗೆ ಇದ್ದವರು G.B.S.R.M. ಎಂದು ೫ ಜನರ ಹೆಸರಿನ ಮೋನೋಗ್ರಾಂ ರಬ್ಬರ್‌ನಲ್ಲಿ ಕೆತ್ತಿ ಲೆಟರ್‌ಪ್ಯಾಡುಗಳ ಮೇಲೆ ಉಪಯೋಗಿಸುತ್ತಿದ್ದರು. ಬೇಂದ್ರೆ ಮಿತ್ರರು ಶ್ರೀಧರ ಖಾನೋಳ್ಕರ್, ಬೆಟಗೇರಿ ಕೃಷ್ಣಶರ್ಮ ಮೊದಲಾದವರು ಕವಿಗಳಾಗಿದ್ದ ಅಧ್ಯಾಪಕರು. ಇವರೆಲ್ಲ ಹೊಸಕೆರೆ ಚಿದಂಬರಯ್ಯನವರ ವಿದ್ಯಾರ್ಥಿಗಳು. ಶಾಲೆಯ ವಿದ್ಯಾರ್ಥಿಗಳ ಜೀವನ ಎಂದರೆ ಗುರುಕುಲದ ರೀತಿ ಇತ್ತೆಂದು ತಿಳಿಯುತ್ತದೆ. ಬಾಲಚಂದ್ರ ಘಾಣೇಕರರು ರಾಷ್ಟ್ರೀಯ ವಿದ್ಯಾಶಾಲೆಯಲ್ಲಿದ್ದಾಗ (೧೯೨೪) ತಮ್ಮ ಮತ್ತು ತಮ್ಮ ಗೆಳೆಯರ ದಿನಚರಿಯನ್ನು ಹೀಗೆ ಬಣ್ಣಿಸಿದ್ದಾರೆ "ನಸುಕಿನ ಐದುಗಂಟೆಯ ಪ್ರಾರ್ಥನೆ ಮುಗಿಯುತ್ತಲೆ ಜೊತೆಜೊತೆಯಾಗಿ ನೀರು ಸೇದುವುದು, ತಣ್ಣೀರು ಸ್ನಾನ ಮಾಡುವುದು, ಬಟ್ಟೆ ಒಗೆದು ಒಣಹಾಕಿ ಕೊಳ್ಳುವುದು, ನಮ್ಮ ನಿತ್ಯದ ಕಾಯಕವಾಗಿತ್ತು. ಮಧ್ಯಾಹ್ನ ಒಬ್ಬೊಬ್ಬರು ಎರಡೆರಡು ಓಣಿಗಳಿಗೆ ಹೋಗಿ 'ಭವತಿಭಿಕ್ಷಾಂದೇಹಿ' ಎಂದು ಮಧುಕರಿ ಬೇಡಿ ತರುತ್ತಿದ್ದೆವು. ಆಶ್ರಮದ ವಿದ್ಯಾರ್ಥಿಗಳೆಲ್ಲರೂ ತಮ್ಮ ತಮ್ಮ ಜೋಳಿಗೆಯಲ್ಲಿಯ ಅನ್ನ, ರೊಟ್ಟಿ, ಪಲ್ಲೆ ಮತ್ತು ತವಲಿಗಳಲ್ಲಿಯ ಸಾರು-ಹುಳಿ ಎಲ್ಲವನ್ನೂ ಬೇರೆ ಬೇರೆ ದೊಡ್ಡ ಪಾತ್ರೆಗಳಲ್ಲಿ ಒಟ್ಟುಗೂಡಿಸಿ ಜೊತೆಯಾಗಿ ಕುಳಿತು ಹಾಯಾಗಿ ಉಂಡು, ಮಿಕ್ಕದ್ದನ್ನೆಲ್ಲಾ ಸಾಯಂಕಾಲಕ್ಕಾಗಿ ಮುಚ್ಚಿಟ್ಟುಕೊಂಡು ನಮ್ಮ ನಮ್ಮ ಕ್ಲಾಸುಗಳಿಗೆ

ಹೋಗುತ್ತಿದ್ದೆವು. ಪ್ರತಿ ಶನಿವಾರ ನಸುಕಿನ ಸ್ನಾನ ಮುಗಿದೊಡನೆ ನುಗ್ಗೀಕೆರೆಗೆ ಹೋಗಿ ಹನುಮಂತನ ದರ್ಶನ ಪಡೆದು ಬರುತ್ತಿದ್ದೆವು. ೧೯೨೪ರ ಡಿಸೆಂಬರ್‌ನಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಸೇರಿದಂಥ ಬೆಳಗಾವಿಯ ಅ.ಭಾ. ಕಾಂಗ್ರೆಸ್ ಅಧಿವೇಶನಕ್ಕೆ ನಮ್ಮ ರಾಷ್ಟ್ರೀಯ ಶಾಲೆಯ ಹರ್ಡೀಕರರ ಸೇವಾದಳದ ಪರವಾಗಿ ಸೈನಿಕರಾಗಿ ಹೋಗಿ ಸೇವೆ ಸಲ್ಲಿಸಿದೆವು." ಈ ಮಾತುಗಳಿಂದ ಹೊಸಕೆರೆ ಚಿದಂಬರಯ್ಯನವರು ಇದ್ದ ರಾಷ್ಟ್ರೀಯ ಶಾಲೆಯ ವಾತಾವರಣ ವಿದ್ಯಾರ್ಥಿಗಳಿಗೆ ದೊರೆಯುತ್ತಿದ್ದ ಶಿಕ್ಷಣದ ಕಲ್ಪನೆ ಬರುತ್ತದೆ.

ಹೊಸಕೆರೆ ಚಿದಂಬರಯ್ಯನವರು ಧಾರವಾಡದ ನ್ಯಾಷನಲ್ ಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದ ಸಮಯದಲ್ಲಿ ಗೋಂದಾವಲಿಯಿಂದ ಬ್ರಹ್ಮಚೈತನ್ಯರ ಬಳಿಯಿದ್ದ ಕುರ್ತುಕೋಟಿ ಭಾಗವತರು ಕುರ್ತುಕೋಟಿಗೆ ಬಂದು ವಾಸ್ತವ್ಯ ಹೂಡಿದರು. ಧಾರವಾಡದ ಜನರ ವಿನಂತಿಯನ್ನು ಮನ್ನಿಸಿ ಮಹಾಭಾಗವತರು ಗೀತೆಯಲ್ಲಿ ಪ್ರತಿಪಾದಿಸಲ್ಪಟ್ಟ ಸಮತ್ವ ಎಂಬ ವಿಷಯದ ಮೇಲೆ (೬ ಉಪನ್ಯಾಸಗಳ) ಒಂದು ಉಪನ್ಯಾಸಮಾಲೆಯನ್ನು ನಡೆಸಿಕೊಟ್ಟರು. ಮಹಾಭಾಗವತರ ಭಾಷಣ ಶೈಲಿಯಲ್ಲಿ ವಿವೇಕಾನಂದರ ಪಾಶ್ಚಿಮಾತ್ಯ ಹಾಗೂ ಪ್ರಾಚ್ಯಜ್ಞಾನಗಳ ತುಲನಾತ್ಮಕ ವಿವೇಚನೆಯಿಂದ ಕೂಡಿತ್ತು. ಅವರ ಭಾಷಣದಿಂದ ಪ್ರಭಾವಿತರಾದ ಧಾರವಾಡದ ವಿದ್ವಜ್ಜನರು ಅವರನ್ನು "ಕರ್ನಾಟಕದ ಸ್ವಾಮಿ ವಿವೇಕಾನಂದ" ಎಂದು ಕರೆದು ಗೌರವಿಸಿದರು. ಆ ಭಾಷಣಗಳಿಗೆ ಧಾರವಾಡದಲ್ಲಿ ಇದ್ದ ಚಿದಂಬರಯ್ಯನವರು ತಪ್ಪದೇ ಹಾಜರಾಗಿ ಕೈಯಲ್ಲಿ ಬರೆದುಕೊಂಡು (ಆಗ ಕೂಡ ಶೀಘ್ರಲಿಪಿ ಇದ್ದರೂ ಅದು ಪ್ರಚಾರವಾಗಿ ಬಳಕೆಯಲ್ಲಿರಲಿಲ್ಲ) ಭಾಗವತರಿಗೆ ತೋರಿಸಿ ತಿದ್ದಿಸಿಕೊಂಡು ಮೊದಲು ಬಿಡಿಯಾಗಿ ಆಮೇಲೆ ಎಲ್ಲ ಭಾಷಣಗಳನ್ನು ಒಟ್ಟಾಗಿ ೧೯೧೭ರಲ್ಲಿ ಬೃಹದ್ಗ್ರಂಥವನ್ನಾಗಿ ಪ್ರಕಟಿಸಿದರು. ಅದರಲ್ಲಿ ಭಾಗವತರ ಬಗ್ಗೆ ೨೮ ಪುಟಗಳ ವಿಸ್ತಾರ ಜೀವನಚರಿತ್ರೆ ಬರೆದಿದ್ದಾರೆ. ಬೇರೆಲ್ಲಿಯೂ ಭಾಗವತರ ಬಗ್ಗೆ ಸಿಗದ ಮಾಹಿತಿ ಅದರಲ್ಲಿದೆ. ಚಿದಂಬರಯ್ಯನವರ ಈ ಗ್ರಂಥ ಆಗಿನ ಮುಂಬಯಿ ವಿಶ್ವವಿದ್ಯಾನಿಲಯವು ಅಲ್ಲಿನ ಎಂ.ಎ. ವರ್ಗದ ವಿದ್ಯಾರ್ಥಿಗಳಿಗೆ ಕನ್ನಡ ಪಠ್ಯ ಪುಸ್ತಕವೆಂದು ಮನ್ನಿಸಿತು. ಇತ್ತೀಚೆಗೆ (೨೦೧೦ರಲ್ಲಿ) ಜಾಲಿಹಾಳ ಎಂಬ ಹಿರಿಯರು ಕುರ್ತುಕೋಟಿ ಭಾಗವತರ ಜೀವನಚರಿತ್ರೆಯನ್ನು ಬರೆದಿದ್ದಾರೆ. ಅದರಲ್ಲಿ ಚಿದಂಬರಯ್ಯನವರ ಗ್ರಂಥವನ್ನು ನೋಡದೆ (ಅವರಿಗೆ ಸಿಕ್ಕಿರಲಾರದು) ತಪ್ಪು ಮಾಹಿತಿಯನ್ನು ಈ ಗ್ರಂಥದ ಬಗ್ಗೆ ನೀಡಿದ್ದಾರೆ. "ಆ ಭಾಷಣ ಮಾಲೆಯ ವರದಿಯನ್ನು ಬರೆದುಕೊಂಡಿದ್ದ ಒಬ್ಬ ನಿವೃತ್ತ ಶಾಲಾಶಿಕ್ಷಕರು ಅನಂತರ ಅದನ್ನು ಪುಸ್ತಕರೂಪದಲ್ಲಿ ಮುದ್ರಿಸಿ ಗೀತಾಸಾರವಿಚಾರ ಎಂಬ ಹೆಸರಿನಲ್ಲಿ ಪ್ರಕಟಿಸಿದರು" ಎಂದಿದ್ದಾರೆ. ಇಲ್ಲಿ ನಿವೃತ್ತ ಶಾಲಾ ಶಿಕ್ಷಕರು ಬೇರೆಯಾರೂ ಅಲ್ಲ ಹೊಸಕೆರೆ ಚಿದಂಬರಯ್ಯನವರು, ಪುಸ್ತಕದ ಹೆಸರು 'ಭಗವದ್ಗೀತಾ ಸಾರವಿಚಾರ', ಭಾಷಣಮಾಲೆಯ ವರದಿ ಅಲ್ಲ ಭಾಷಣಗಳ ಪೂರ್ಣಪಾಠ ಪ್ರಕಟಿಸಿದ್ದಾರೆ. ಚಿದಂಬರಯ್ಯನವರ ಕಾಲಾನಂತರ ಅವರ ಬಗ್ಗೆ ಅವರ ಕೃತಿಗಳ ಬಗ್ಗೆ ತಿಳಿವಳಿಕೆ ಸಾಹಿತಿಗಳಲ್ಲಿ ಜನರಲ್ಲಿ ಕಣ್ಮರೆ ಆಗುತ್ತಿರುವುದಕ್ಕೆ ಇದು ಸಾಕ್ಷಿಯಾಗಿದೆ.

ಕೀರ್ತನಕಾರರ ಸಮ್ಮೇಳನ

೧೯೧೯ರಲ್ಲಿ ಬೆಂಗಳೂರಿನ ಶಂಕರಮಠದಲ್ಲಿ ಕೀರ್ತನಕಾರರ ಸಮ್ಮೇಳನವನ್ನು ಜಯರಾಮಾಚಾರ್ಯರೆಂಬ ಪ್ರಸಿದ್ಧ ದೇಶಭಕ್ತಿ ಕೀರ್ತನಕಾರರು ಕೂಡಿಸಿದ್ದರು. ಈ ಸಮ್ಮೇಳನದ ಪ್ರಭಾವದಿಂದ ಚಿದಂಬರಯ್ಯನವರಲ್ಲಿ ಸುಪ್ತವಾಗಿದ್ದ ದೇಶಾಭಿಮಾನ ತೆರೆಯೆತ್ತಿಕೊಂಡಿತು. ಚಿದಂಬರಯ್ಯನವರು ಕೀರ್ತನ ಸಮ್ಮೇಳನದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಕೀರ್ತನಕಾರರ ಹರಿಕಥೆಗಳ ಬಗ್ಗೆ ಗ್ರಂಥವಾದ ಕೀರ್ತನಕಂಠಾಭರಣ(೫ ಭಾಗಗಳು)ವೆಂಬ ೪೮ ಹರಿಕಥೆಗಳ ಗ್ರಂಥ ರಚಿಸಲು ಅವರಿಗೆ ಈ ಸಮ್ಮೇಳನ ಸ್ಫೂರ್ತಿ ನೀಡಿತು ಎನ್ನಬಹುದು.

ಈ ಕೀರ್ತನ ಸಮ್ಮೇಳನ ನಡೆಯುವ ಕಾಲಕ್ಕೆ ಚಿದಂಬರಯ್ಯನವರು ಶಂಕರಮಠದ ಒಂದು ಮನೆಯಲ್ಲಿದ್ದರು. ಅವರ ಮೂವರು ಗಂಡು ಮಕ್ಕಳು ಜತೆಗಿದ್ದರು. ಹಿರಿಯರಾದ ವೆಂಕಟರಾಮಯ್ಯ ಹೊಸಕೋಟೆಯಿಂದ ವರ್ಗವಾಗಿ ಬಂದಿದ್ದರು: ಶ್ರೀನಿವಾಸಮೂರ್ತಿಗಳು ಕುರ್ತುಕೋಟಿ, ಧಾರವಾಡ, ಮದರಾಸ್ ಪ್ರಾಂತಗಳಲ್ಲಿ ವಿದ್ಯಾಭ್ಯಾಸ ಮಾಡಿ 'ವೇದಾಂತ ಶಿರೋಮಣಿ'ಯೆಂಬ ಬಿರುದನ್ನು ಸಂಪಾದಿಸಿಕೊಂಡು ಬಂದಿದ್ದರು. ಅನಂತಮೂರ್ತಿ ಮೂರನೇ ಮಗ ಜತೆಗಿದ್ದರು.

ಚಿದಂಬರಯ್ಯನವರು ೧೯೧೭ರಲ್ಲಿ ಅರಸೀಕೆರೆಯಲ್ಲಿ ರಾಮೋತ್ಸವ ಕಾರ್ಯಕ್ರಮದಲ್ಲಿ ಪ್ರತಿದಿನ ಅಧ್ಯಾತ್ಮ ರಾಮಯಣವನ್ನು ಪುರಾಣ ಹೇಳುತ್ತಿದ್ದರು. ಆಗ "ದೇಶೀಯ ಭಾವನೆಯ ನಿರೂಪಣೆಗಳು ಪುರಾಣ ಪ್ರವಚನದಲ್ಲಿ ಅಲ್ಲಲ್ಲಿ ಸೇರುತ್ತಿತ್ತು ಎನ್ನುತ್ತಾರೆ ಸುಬ್ಬರಾಯರು. ನವಮಿಯ ದಿನ ಜಯರಾಮಚಾರ್ಯರು ಕೀರ್ತನೆಗೆ ಬಂದಾಗ ಸರಕಾರದವರ ಅಡಚಣೆಯಿಂದ ಅಂದು ನವಮಿದಿನ ಶ್ರೀರಾಮ ಜನ್ಮದ ವಿಚಾರವನ್ನು ಹತ್ತೇ ನಿಮಿಷಗಳಲ್ಲಿ ಆಚಾರ್ರು ಕೀರ್ತನೆ ಮಾಡಿದರು. ಆ ಪುಟ್ಟಭಾಷಣವೇ ಜನರ ಮೇಲೆ ಗಾಢ ಪ್ರಭಾವ ಬೀರಿತು.

ಕುರ್ತುಕೋಟಿ ಭಾಗವತರ ಬಳಿ ಇದ್ದಾಗ ವೈ. ಸುಬ್ಬರಾಯರು ನಾರದ ಭಕ್ತಿಸೂತ್ರಗಳಿಗೆ ವಿವರಣೆ ಬರೆದರು. ಅದನ್ನು ಚಿದಂಬರಯ್ಯನವರು ಓದಿ ಶುದ್ಧ ಪ್ರತಿ ಸಿದ್ಧಪಡಿಸಿಕೊಟ್ಟರು. ಇದಾದಮೇಲೆ ಚಿದಂಬರಯ್ಯನವರು ವೆಂಕಟನಾಥ ಎಂಬುವರು ಸಂಸ್ಕೃತದಲ್ಲಿ ರಚಿಸಿದ ಬ್ರಹ್ಮಾನಂದಗಿರಿ ಎನ್ನುವ ಗೀತೆಯ ಮೇಲೆ ಬರೆದ ಸಂಸ್ಕೃತ ವ್ಯಾಖ್ಯಾನವನ್ನು ಆಧಾರ ಮಾಡಿಕೊಂಡು ಗೀತಾರ್ಥ ವಿವರಣೆ ಗ್ರಂಥ ಬರೆದರು. ೧೯೧೭ರಲ್ಲಿ ಪ್ರಕಟವಾಯಿತು. ೧೯೧೬ರಲ್ಲಿ ಅದು ರಚನೆ ಆಯಿತು ಎನ್ನಬಹುದು. ಕೊಲ್ಲಾಪುರದಲ್ಲಿ ಮಹಾಭಾಗವತರು ಕರವೀರ ಸಂಕೇಶ್ವರ ಪೀಠದ ಅಧಿಪತಿಗಳಾಗಿ ತುರೀಯಾಶ್ರಮ ಸ್ವೀಕಾರ ಮಾಡಿದ ಮೇಲೆ ೧೯೧೮-೧೯ರಲ್ಲಿ ಚಿದಂಬರಯ್ಯನವರು ಬೆಂಗಳೂರಿಗೆ ಬಂದರು. ಇಲ್ಲಿಗೆ ಬಂದ ಮೇಲೆ 'ವೇದಾಂತ ಪ್ರಕ್ರಿಯಾ ರಹಸ್ಯ'ವೆಂಬ ಸಂಸ್ಕೃತ ಗ್ರಂಥವನ್ನು ಕನ್ನಡದಲ್ಲಿ 'ವೇದಾಂತ ವಿಚಾರದ ಗುಟ್ಟು' ಎಂಬ ಹೆಸರಿನಿಂದ ಕನ್ನಡಿಸಿದರು (ಸ್ವಹಸ್ತ ಆತ್ಮಚರಿತ್ರೆ).

ಸಂನ್ಯಾಸ ಸ್ವೀಕರಿಸಲು ಪ್ರೇರಣೆ ಬಂದದ್ದು

'೧೯೦೬ರ ಸುಮಾರಿನಲ್ಲಿ ಚಿದಂಬರಯ್ಯನವರಿಗೆ ಕಡೂರಿನಲ್ಲಿದ್ದಾಗ ಪತ್ನೀ ವಿಯೋಗವಾಯಿತು. ಈ ಸಂದರ್ಭದಲ್ಲಿ ಶಂಕರಾನಂದರ ಗೀತಾತಾತ್ಪರ್ಯ ಎಂಬ ಬೋಧನೆ ಗ್ರಂಥವನ್ನು ನಿರ್ಣಯಸಾಗರ ಪ್ರೆಸ್ಸಿನಿಂದ ತರಿಸಿಕೊಂಡು ಅಭ್ಯಾಸ ಮಾಡುತ್ತಿದ್ದಾಗ ಜೀವಣದೀಕ್ಷಿತರೆಂಬುವರು ಹೊಳಲ್ಕೆರೆ ಬೃಹತ್ ಗಣಪತಿ ದೇವಸ್ಥಾನದಲ್ಲಿ ಪ್ರವಚನ ಮಾಡುತ್ತಾ ಶಂಕರಾನಂದರ ಗೀತಾ ತಾತ್ಪರ್ಯ ಬೋಧನೆಯಲ್ಲಿಯ 'ಯಾ ನಿಶಾ ಸರ್ವಭೂತಾನಾಂ' (ಗೀತೆ ೨-೬೯) ಮತ್ತು 'ಯಾವಾನರ್ಥ ಉದಪಾನೇ' (೨-೪೬) ಶ್ಲೋಕಗಳಿಗೆ ವ್ಯಾಖ್ಯಾನ ಮಾಡಿದಾಗ ಅದನ್ನು ಕೇಳಿ ಚಿದಂಬರಯ್ಯನವರು ಮತ್ತು ಸುಬ್ಬರಾಯರು ಆ ಗೀತಾ ಗ್ರಂಥದ ಬಗ್ಗೆ ವಿಶೇಷ ಆಸ್ಥೆ ತಳೆದರು. ಆ ಗ್ರಂಥದಲ್ಲಿ 'ಸಂನ್ಯಸ್ಯ ಶ್ರವಣಂ ಕುರ್ಯಾತ್' (ಸಂನ್ಯಾಸ ಮಾಡಿ ಶ್ರವಣ ಮಾಡಬೇಕು) ಎಂಬ ವಾಕ್ಯ ಮತ್ತೆ ಮತ್ತೆ ಉದಾಹೃತವಾಗಿತ್ತು. ಅದನ್ನು ಓದಿ ಚಿದಂಬರಯ್ಯನವರಿಗೆ ಸಂನ್ಯಾಸವನ್ನು ಸ್ವೀಕರಿಸಬೇಕೆಂಬ ಒಲವು ಮೂಡಿತ್ತು' ಎಂದು ಸುಬ್ಬರಾಯರು ಹೇಳುತ್ತಾರೆ.

ಹುಬ್ಬಳ್ಳಿಗೆ ೧೯೦೯ಕ್ಕೆ ಮುಂಚೆ ಸುಮಾರು ೧೯೦೭ ಇರಬಹುದು, ಶಂಕರಜಯಂತಿ ಉತ್ಸವ ನೋಡಲು ಹುಬ್ಬಳ್ಳಿಯಲ್ಲಿ ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳ ಮನೆಯಲ್ಲಿ ಇಳಿದುಕೊಂಡಿದ್ದರು. ಅಲ್ಲಿಗೆ ಇವರು ಹೋದ ದಿನ ಏಕಾದಶಿ ಆಗಿತ್ತು, ವಿರೂಪಾಕ್ಷಶಾಸ್ತ್ರಿಗಳು ಚಿದಂಬರಯ್ಯನವರನ್ನು 'ನಿಮಗೆ ದಶಮಿ ಆಗಬಹುದೆ?' ಎಂದು ಕೇಳಿದರು. ಅದಕ್ಕೆ ಚಿದಂಬರಯ್ಯನವರು 'ಇಲ್ಲ, ಏಕಾದಶಿ' ಎಂದರು ಮನೆಯವರು ನಕ್ಕರು. (ನೀವು ಊಟ ಮಾಡುವಿರಾ ಎಂದಾಗ ಮಾರ್ಮಿಕವಾಗಿ ಏಕಾದಶಿ ಊಟ ಮಾಡುವುದಿಲ್ಲ ಎಂದರ್ಥ) ಏಕಾದಶಿ ಆಚರಣೆ ನಿಮ್ಮಲ್ಲಿ ಇದೆಯೇ ಎಂಬುದನ್ನು ಮಾರ್ಮಿಕವಾಗಿ ವಿರೂಪಾಕ್ಷಶಾಸ್ತ್ರಿಗಳು ಕೇಳಿದ್ದರು.

ಕಡೂರಿನಲ್ಲಿ ಚಿದಂಬರಯ್ಯನವರ ಮನೆಯಲ್ಲಿ ಸುಬ್ಬರಾಯರು ಕೆಲವು ದಿನಗಳಿದ್ದಾಗ ಒಮ್ಮೆ ನಡೆದ ಪ್ರಸಂಗ ಇದು. ಇದನ್ನು ಸುಬ್ಬರಾಯರು ಹೀಗೆ ಬಣ್ಣಿಸಿದ್ದಾರೆ.

"ಕೂಡಲಿ ನದಿಯಿಂದ ಸ್ನಾನ ಮಾಡಿಕೊಂಡು ನಾವಿಬ್ಬರೂ ಬರುತ್ತಿದ್ದಾಗ ಒಬ್ಬ ಸನ್ಯಾಸಿಗಳು ನಮ್ಮ ಹಿಂದಿನಿಂದ 'ಠೀಕ್ ಹೈ' ಎಂದು ಕೂಗಿದರು. ನೀವು ನದೀ ಸ್ನಾನಮಾಡಿ ಪರಮಾರ್ಥ ವಿಚಾರ ಮಾಡುತ್ತಿರುವುದು ಕಂಡು ನನಗೆ ಬಹಳ ಸಂತೋಷ ಆಯಿತು ಎಂದು ನಮ್ಮನ್ನು ಹೊಗಳಿದರು. ಚಿದಂಬರಯ್ಯನವರು ಅವರನ್ನು ಭಿಕ್ಷಕ್ಕೆ ಕರೆದರು. ೧೧ ಘಂಟೆ ಹೊತ್ತಿಗೆ ಬರುತ್ತೇನೆ ಎಂದರೆ ಗಡಿಯಾರವು ೧೧ ಹೊಡೆಯುವ ಹೊತ್ತಿಗೆ ಸರಿಯಾಗಿ ಬಂದದ್ದು ನಮಗೆ ಅತ್ಯಂತ ಆಶ್ಚರ್ಯವನ್ನು ಉಂಟುಮಾಡಿತು. ಊಟದ ನಂತರ ಅವರು ತಾವು ಬೊಂಬಾಯಿಯಲ್ಲಿದ್ದುದು ಬಾಲ್ಯದಲ್ಲಿಯೇ ಸಂನ್ಯಾಸ ತೆಗೆದುಕೊಂಡಿದ್ದು, ಇದನ್ನೆಲ್ಲಾ ವಿವರಿಸಿ

ಹೇಳಿದರು. ಕಠೋಪನಿಷತ್ತು ಪಾರಾಯಣದ ಬಳಿಕವೇ ಊಟಕ್ಕೆ ಕುಳಿತರು. ಮಧ್ಯಾಹ್ನಾನ್ತರದಲ್ಲಿ ನಮ್ಮಿಬ್ಬರಿಗೂ ಹಿಂದಿಯಲ್ಲಿ ಸ್ವಲ್ಪ ವೇದಾಂತೋಪದೇಶವನ್ನು ಮಾಡಿದ ಕೂಡಲೇ ಹೊರಟುಹೋದರು. ಅವರ ದರ್ಶನವು ಚಿದಂಬರಯ್ಯನವರಲ್ಲಿ ಸಂನ್ಯಾಸಾಶ್ರಮದ ಕುತೂಹಲವನ್ನು ಸ್ವಲ್ಪ ಕೆರಳಿಸಿತು ಎನ್ನಬಹುದು"

ಭಾಷ್ಯಶಾಂತಿ

ಭಾಗವತರು ಹರಿಹರಕ್ಕೆ ಆಗಾಗ ಬರುತ್ತಿದ್ದರು. ಒಮ್ಮೆ ಅವರಿಗೆ ಭಾಷ್ಯಶಾಂತಿಯಲ್ಲಿ ಚಿದಂಬರಯ್ಯನವರಿಗೂ ಸುಬ್ಬರಾಯರಿಗೂ ಆಸಕ್ತಿ ಇದ್ದ ವಿಷಯ ಭಾಗವತರಿಗೆ ತಿಳಿಯಿತು. ಆಗ ಅವರು ಇವರಿಬ್ಬರಿಗೂ "ಶೃಂಗೇರಿ ಗುರುಗಳಲ್ಲಿ ಭಾಷ್ಯಶಾಂತಿ ಮಾಡಿಸಿಕೊಳ್ಳಿ" ಎಂದರು. ಈ ಮುಂಚೆ ಜೀವಣದೀಕ್ಷಿತರು ಹಾನಗಲ್ ವಿರೂಪಾಕ್ಷ ಶಾಸ್ತ್ರಿಗಳವರಲ್ಲಿ ಭಾಷ್ಯಶಾಂತಿ ಮಾಡಿಸಿಕೊಳ್ಳಿ ಎಂದಿದ್ದರು. ಸುಬ್ಬರಾಯರಿಗೆ ಚಿದಂಬರಯ್ಯನವರಿಗೆ ಆದ ಈ ಸಂದಿಗ್ಧವನ್ನು ಕುರ್ತುಕೋಟಿ ಅವರಲ್ಲಿ ಇಟ್ಟಾಗ ಅವರು ಹೇಳಿದರು 'ಜಗದ್ಗುರುಗಳನ್ನು ಈ ವಿಷಯಕ್ಕೆ ತಂದೆಯಾಗಿ ಮಾಡಿಕೊಳ್ಳಿ, ವಿರೂಪಾಕ್ಷಶಾಸ್ತ್ರಿಗಳು ಅಣ್ಣನಾಗಲಿ, ಅವರಲ್ಲಿಯೇ ಭಾಷ್ಯವನ್ನು ಓದುವಿರಂತೆ ಎಂದರು. ಸದ್ಯದಲ್ಲಿ ಕಾಲಟಿಯಲ್ಲಿ ಶಂಕರಾಚಾರ್ಯರ ಪ್ರತಿಷ್ಠೆಗೆ ಶೃಂಗೇರಿ ಜಗದ್ಗುರು ನರಸಿಂಹಭಾರತಿ ಸ್ವಾಮಿಗಳು ಬರುತ್ತಾರೆ. ಅಲ್ಲಿ ಅವರಿಂದ ಭಾಷ್ಯಶಾಂತಿ ಮಾಡಿಸಿಕೊಳ್ಳಿ' ಎಂದರು.

ಇಬ್ಬರೂ ಹರಿಹರದಲ್ಲಿಯೇ ವಾಸವಾಗಿದ್ದು, ಸೀಸನ್ ಟಿಕೆಟ್ ತೆಗೆದುಕೊಂಡು ದಾವಣಗೆರೆಗೆ ಕೆಲಸಕ್ಕೆ ಹೋಗಿ ಬರುತ್ತಿದ್ದರು. ಹರಿಹರದಲ್ಲಿ ಬೆಳಿಗ್ಗೆ ಏಳುತ್ತಲೂ ನದಿಯಲ್ಲಿ ಸ್ನಾನಮಾಡಿ ಹರಿಹರೇಶ್ವರನ ದರ್ಶನ ಮಾಡಿಕೊಳ್ಳುತ್ತಿದ್ದರು. ಮಡಿಯಲ್ಲಿಯೇ ಇದ್ದುಕೊಂಡು ಪೂಜಾ ಪಾರಾಯಣಾದಿಗಳನ್ನು ಮಾಡಿಕೊಂಡು ದಾವಣಗೆರೆಗೆ ಹೋಗಿ ಬರುತ್ತಿದ್ದರು. ಸಾಯಂಕಾಲ ಮತ್ತೆ ಹರಿಹರೇಶ್ವರನ ದರ್ಶನ ಮಾಡಿಕೊಂಡು ಮನೆಗೆ ಬಂದು ಮಲಗಿಕೊಳ್ಳುತ್ತಿದ್ದರು. ಇದು ಅವರ ದಿನಚರಿಯಾಗಿತ್ತು.

ಹರಿಹರಕ್ಕೆ ಬೆಟಗೇರಿಯ ಕೃಷ್ಣಶಾಸ್ತ್ರಿಗಳೆಂಬ ವಿದ್ವಾಂಸರು ಬಂದರು. ಹರಿಹರೇಶ್ವರನ ದರ್ಶನಕ್ಕೆ ಕರ್ಮಠರೂ ವಿದ್ವಾಂಸರೂ ಬರುವುದು ಸಾಮಾನ್ಯವಾಗಿತ್ತು. ಕ್ಷೇತ್ರದ ಮಹಿಮೆ ಅಂಥದ್ದು. ಅವರನ್ನು ಸುಬ್ಬರಾಯರು, ಚಿದಂಬರಯ್ಯನವರು ಬೆಟಗೇರಿ ಕೃಷ್ಣಶಾಸ್ತ್ರಿಯವರನ್ನು ಭೇಟಿಯಾಗಿ ಅವರಲ್ಲಿ ಭಾಷ್ಯಶಾಂತಿ ವಿಚಾರ ಪ್ರಸ್ತಾಪಿಸಿದಾಗ, "ನಾನು ಕಾಲಟಿಗೆ ಹೋಗುವವನಿದ್ದೇನೆ, ನೀವು ಬಂದರೆ ಅವಶ್ಯವಾಗಿ ಜೊತೆಯಲ್ಲಿಯೇ ಹೋಗೋಣ, ನಾನು ನಿಮಗೆ ಭಾಷ್ಯಶಾಂತಿ ಮಾಡಿಸುವಂತೆ ಗುರುಗಳಲ್ಲಿ ಕೇಳಿಕೊಳ್ಳುತ್ತೇನೆ" ಎಂದರು. ಬೆಟಗೇರಿ ಕೃಷ್ಣಶಾಸ್ತ್ರಿಗಳ ಸಾಧುವೇಷ, ಮೃದುಭಾಷೆ, ಧರ್ಮಸಮ್ಮಾನ ನಿರ್ಣಯ ಇವುಗಳಿಂದ ಬೆರಗಾಗಿ ಇಬ್ಬರೂ ಅವರೊಡನೆ ಹೊರಡಲು ಸಿದ್ಧರಾದರು.

'ಕೃಷ್ಣಶಾಸ್ತ್ರಿಗಳು ರೈಲಿನ ಸ್ಟೇಷನ್ನುಗಳ ಅನುಕ್ರಮಣಿಕೆಯ ಪಟ್ಟಿಯನ್ನು ನಮ್ಮಿಂದ ಬರೆಯಿಸಿಕೊಂಡಿದ್ದರು. ಅದರಲ್ಲಿ ಅವರು, ಬೆಳಿಗ್ಗೆ ಮಧ್ಯಾಹ್ನ ಸಾಯಂಕಾಲ ಈ ಮೂರು ಕಾಲಗಳಲ್ಲಿ ಸ್ನಾನಸಂಧ್ಯೆಗಳಿಗೆ ಅನುಕೂಲವಿರುವಂತೆ ನದಿ ಬಾವಿ ಮುಂತಾದ ಜಲಾಶಯಗಳಿರುವ ಸ್ಟೇಷನ್ನುಗಳನ್ನು ಮಾತ್ರ ಅವರು ಗುರುತುಮಾಡಿಸಿಕೊಂಡರೇ ಹೊರತು ಊಟ ಉಪಚಾರಗಳ ವಿಚಾರವನ್ನು ಮನಸ್ಸಿಗೇ ತರಲಿಲ್ಲ' (ಪುಟ ೨೦೮, ಸ್ವಹಸ್ತ ಆತ್ಮಚರಿತ್ರೆ)

ಕಾಲಟಿಯನ್ನು ಸೇರಿದಾಗ ೬೦೦ ಬಿದಿರು ಮನೆಗಳ ಕಾಲಟಿನಗರದ ನಿರ್ಮಾಣವಾಗಿತ್ತು. ಸಂಜೆ ಬಂದವರು ಸ್ನಾನಮಾಡಿ ಸ್ವಾಮಿಗಳನ್ನು ದರ್ಶಿಸಿದರು. ಬೆಟಗೇರಿ ಕೃಷ್ಣಶಾಸ್ತ್ರಿಗಳನ್ನು ಜಗದ್ಗುರುಗಳು ಆದರದಿಂದ ಮಾತಾಡಿಸಿದರು. ಅನಂತರ ಭಾಷ್ಯಶಾಂತಿ ವಿಷಯವನ್ನು ಮಠದ ಏಜೆಂಟರಾದ ಶ್ರೀಕಂಠಶಾಸ್ತ್ರಿಗಳಲ್ಲಿ ಪ್ರಸ್ತಾಪಿಸಿದಾಗ "ಈಗ ಬಹಳ ಗಲಾಟೆ ಆದ್ದರಿಂದ ಸಾಧ್ಯವಿಲ್ಲ, ಬೆಂಗಳೂರಿಗೆ ಸವಾರಿ ದಯಮಾಡಿಸಿದಾಗ ನೋಡೋಣ" ಎಂದುಬಿಟ್ಟರು. ಆಗ ಶಾಸ್ತ್ರಿಗಳು ಸ್ವಲ್ಪ ತಡೆಯಿರಿ ಪ್ರತಿಷ್ಠೆಯಾಗಲಿ, ಆಮೇಲೆ ಪ್ರಯತ್ನಿಸೋಣ ಎಂದರು.

ಶಂಕರಾಚಾರ್ಯರ ಪ್ರತಿಷ್ಠೆಯ ಕಾರ್ಯ ನಡೆದಮೇಲೆ ಆದಿನ ರಾತ್ರಿ ಬೆಟಗೇರಿ ಅವರು ಶ್ರೀಶ್ರೀಗಳವರಲ್ಲಿ ಭಾಷ್ಯಶಾಂತಿಯ ವಿಚಾರವನ್ನು ಪ್ರಸ್ತಾಪಿಸಿದರು. ಅನುಕೂಲವಿದ್ದರೆ ಈ ಪವಿತ್ರಕ್ಷೇತ್ರದಲ್ಲೇ (ಕಾಲಟಿಯಲ್ಲಿ) ಆಗಬೇಕೆಂದು ಇವರಿಬ್ಬರೂ ತೀವ್ರವಾದ ಆಕಾಂಕ್ಷೆಯುಳ್ಳವರಾಗಿದ್ದಾರೆ ಎಂದು ಬಿನ್ನವಿಸಿಕೊಂಡರು. ಆಗ ಶ್ರೀಶ್ರೀಗಳವರು "ಅವಶ್ಯವಾಗಿ ಆಗಲಿ! ಇಲ್ಲಲ್ಲದಿದ್ದರೆ ಇನ್ನೆಲ್ಲಿ ಆಗಬೇಕು? ಇನ್ನು ಯಾರು ಬೇಕಾದರೂ ಬರಲಿ! ಹೇಳು" ಎಂದು ಏಜೆಂಟರಿಗೆ ಅಪ್ಪಣೆ ಮಾಡಿದರು.

ಮಾರನೇ ದಿನ ಶಾರದಾದೇವಿಯ ಜಗುಲಿಮೇಲೆ ಸುಬ್ಬರಾಯರು ಮತ್ತು ಚಿದಂಬರಯ್ಯನವರು ಭಾಷ್ಯಶಾಂತಿಗೆ ಸಿದ್ಧರಾದರು. ಚಿದಂಬರಯ್ಯನವರು ಶಿವಪಂಚಾಕ್ಷರಿ ಮಂತ್ರವನ್ನು ಜಗದ್ಗುರುಗಳಿಂದ ಮಂತ್ರೋಪದೇಶ ಪಡೆಯಲು ನಿರ್ಧರಿಸಿದರು. ಗುರುಗಳಿಂದ ಭಾಷ್ಯಶಾಂತಿ ಆದಮೇಲೆ ಭಾಷ್ಯಪಾಠ ಮುಂದುವರಿಸಲು ಹಾನಗಲ್ ವಿರೂಪಾಕ್ಷಶಾಸ್ತ್ರಿಗಳನ್ನು ಗುರುಗಳು ಗೊತ್ತುಮಾಡಿದರು.

ದಾವಣಗೆರೆಯಲ್ಲಿ ಅಧ್ಯಾಪಕರಾದ ಚಿದಂಬರಯ್ಯನವರು ಕೆಲಕಾಲ ಹರಿಹರದಲ್ಲಿ ಇದ್ದುಕೊಂಡು ಸುಬ್ಬರಾಯರ ಜೊತೆ ಪ್ರತಿದಿನವೂ ಸ್ನಾನ ಮಾಡಿ ಹರಿಹರೇಶ್ವರನ ದರ್ಶನ ಮಾಡಿ ಬಳಿಕ ಆಹ್ನಿಕ ಪೂಜೆ ಪಾರಾಯಣ ಜಪ ಮಾಡುತ್ತಿದ್ದರು. ಶಿವಪಂಚಾಕ್ಷರಿ ಜಪವನ್ನು ಸೋಮವಾರ, ಪ್ರದೋಷಗಳಲ್ಲಿ ಒಂದು ಸಾವಿರಕ್ಕೆ ಕಡಿಮೆಯಿಲ್ಲದೆಯೇ, ಮಿಕ್ಕ ದಿನಗಳಲ್ಲಿ ನೂರೆಂಟಕ್ಕೆ ಕಡಿಮೆಯಿಲ್ಲದೆ ಒಂದು ಮಾಲಿಕೆಯಷ್ಟು ಜಪಿಸುತ್ತಿದ್ದರು. ಪ್ರತಿದಿನವೂ ಇನ್ನೂ ಜಾಸ್ತಿ ಜಪಮಾಡುತ್ತಿದ್ದರು (ಪುಟ ೨೧೭ ಸ್ವಹಸ್ತ ಆತ್ಮಚರಿತ್ರೆ).

ಅನಂತರ ದೇವರಗುಡ್ಡ (ಮೈಲಾರಲಿಂಗನ ಗುಡ್ಡ)ದಲ್ಲಿ ಖಚ್ಚರಿ ಗ್ರಾಮದಲ್ಲಿ ಇದ್ದ ವಿರೂಪಾಕ್ಷ ಶಾಸ್ತ್ರಿಗಳ ಬಳಿ ಭಾಷ್ಯಪಾಠ ಮುಂದುವರಿಸಿದರು. ಆಗ ಖಚ್ಚರಿಗೆ ಬೆಟಗೇರಿ ಕೃಷ್ಣಶಾಸ್ತ್ರಿಗಳು ಕುರ್ತುಕೋಟಿ ಭಾಗವತರೂ ಬರುತ್ತಿದ್ದರು. ಇವರಿಗೆ ಭಕ್ತಿ ಮಾರ್ಗದ ಬಗ್ಗೆ ಉಪದೇಶ ಮಾಡುತ್ತಿದ್ದರು. ಚಿದಂಬರಯ್ಯನವರು ಕೃಷ್ಣಶಾಸ್ತ್ರಿಗಳಲ್ಲಿ ಭಗವಂತನ ಮಾನಸಪೂಜೆ ಮಾಡುವ ಬಗೆ ಹೇಗೆ ಎಂದು ಕೇಳಿದರು. ಅದಕ್ಕೆ ಅವರು ಪರಮೇಶ್ವರನ ಮೂರ್ತಿಯನ್ನು ಪಾದದಿಂದ ಶಿರಸ್ಸಿನವರೆಗೆ ಧ್ಯಾನಿಸುವ ಕ್ರಮವನ್ನು ಪೂಜೆ ಮಾಡುವ ಕ್ರಮವನ್ನು ತಿಳಿಯಹೇಳಿದರು. (ಪು. ೨೧೯ ಸ್ವಹಸ್ತ ಆತ್ಮಚರಿತ್ರೆ). ಉದ್ಗಟ್ಟಿ ಪ್ರದೇಶದಲ್ಲಿ ವಿರೂಪಾಕ್ಷ ಶಾಸ್ತ್ರಿಗಳು ಸಹಸ್ರಬುಧೆ ಎಂಬುವರ ಮನೆಯಲ್ಲಿದ್ದಾಗ ಅಲ್ಲಿಗೇ ಹೋಗಿ ಸುಮಾರು ೧೫ ದಿನಗಳ ಕಾಲ ಐತರೇಯ ಭಾಷ್ಯಚಿಂತನೆ ಮಾಡಿದರು. ಆಗ ಅವರ ದಿನಚರಿ ಹೀಗಿತ್ತು: 'ಕೂಡಲಿಯ ಶ್ರೀ ಶಂಕರಾಚಾರ್ಯರು ಪೂಜಿಸುತ್ತಿದ್ದ ದೇವರಗುಡಿಯಲ್ಲಿ ಮಡಿಯಲ್ಲೇ ಇದ್ದುಕೊಂಡು ಕಾಲಕಾಲಕ್ಕೆ ನದಿಯಲ್ಲಿ ಸಂಧ್ಯಾವಂದನೆ ಮಾಡುವುದು ಊಟಕ್ಕೆ ಕರೆದಾಗ ಮನೆಯೊಳಕ್ಕೆ ಹೋಗಿ ಬರುವುದು ಭಾಷ್ಯಚಿಂತನೆ ಮಾಡುವುದು ನಡೆಯುತ್ತಿತ್ತು' (ಪುಟ ೨೨೦ ಸ್ವಹಸ್ತ ಆತ್ಮಚರಿತ್ರೆ).

ಕರ್ಣಾಟಕ ಕವಿರತ್ನ ಬಿರುದು ಗಳಿಕೆ

ಕಾಲಟಿಯಲ್ಲಿ ಭಾಷ್ಯಶಾಂತಿ ಆದ ಸ್ವಲ್ಪಕಾಲದ ಅನಂತರ ಚಿದಂಬರಯ್ಯನವರು ಕುರ್ತುಕೋಟಿ ಭಾಗವತರು, ರಂಗರಾಯರು, ಸುಬ್ಬರಾಯರು ಶಿವಮೊಗ್ಗದಲ್ಲಿ ಜಗದ್ಗುರುಗಳನ್ನು ಕಂಡರು. ಆಗ ಮಹಾಭಾಗವತರು ಜಗದ್ಗುರುಗಳ ಅನುಮತಿ ಪಡೆದು ಕುರ್ತುಕೋಟಿಯಲ್ಲಿ "ಬ್ರಾಹ್ಮಣ ಪಂಡಿತರ ಸಭೆಯನ್ನು ನಡೆಸಿದರು. ಆ ಸಭೆಗೆ ವಿರೂಪಾಕ್ಷ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು. ವೇ॥ಬ್ರ॥ ಶ್ರೀಗಳಾದ ಬೆಟಗೇರಿ ಕೃಷ್ಣಶಾಸ್ತ್ರಿಗಳು, ಅಪ್ಪಾ ಸಾಹೇಬ, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು ಮುಂತಾದ ವಿದ್ವಾಂಸರು ಆಗಮಿಸಿದರು. ಪ್ರಾಯಶಃ ಈ ಸಭೆಯಲ್ಲಿಯೇ ಚಿದಂಬರಯ್ಯನವರಿಗೆ "ಕರ್ಣಾಟಕ ಕವಿರತ್ನ" ಎಂಬ ಬಿರುದನ್ನು ವಿದ್ವಾಂಸರು ದಯಪಾಲಿಸಿದರು. ಈ ಬಿರುದು ಚಿದಂಬರಯ್ಯನವರಿಗೆ ಬಹಳ ಪ್ರಿಯವಾಗಿತ್ತು. ಬಹುತೇಕ ಅವರು ಅನಂತರದ ಎಲ್ಲ ಗ್ರಂಥಗಳಲ್ಲೂ ತಪ್ಪದೆ ಕರ್ಣಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ ಎಂದೇ ಹೆಸರು ಹಾಕಿಕೊಂಡಿದ್ದಾರೆ.

ಕರ್ಣಾಟಕ ಕವಿರತ್ನ ಬಿರುದು ಚಿದಂಬರಯ್ಯನವರಿಗೆ ಬಂದ ಕಾಲಕ್ಕೆ ಹಳಗನ್ನಡ ಕಾವ್ಯ ಯಾವುದನ್ನೂ ಬರೆದಿರಲಿಲ್ಲವೆಂದು ಕಾಣುತ್ತದೆ. ಇಂಥವರಿಗೆ ಕರ್ಣಾಟಕ ಕವಿರತ್ನ ಎಂಬ ಬಿರುದನ್ನು ಕೊಟ್ಟಿದ್ದು ಸರಿಯೇ ಎಂಬ ಸಂಶಯ ಕೆಲವರಿಗೆ ಬಂದಂತೆ ತೋರುತ್ತದೆ. ಅದಕ್ಕೆ ಉತ್ತರವಾಗಿ ಶ್ರೀ ವಿದ್ಯಾರಣ್ಯ ಕಾವ್ಯಮ್ ಬರೆದಂತೆ ತೋರುತ್ತದೆ. ಈ ಮಾತಿಗೆ ನಿದರ್ಶನವೆಂದರೆ

ಕವಿರತ್ನಾಖ್ಯೆಯನಿತ್ತರಾಗ ಕೆಲಬರ್ ವಿದ್ವಾಂಸರೊಂದಾಗಿ ಸ
ತ್ಕವಿತಾಪ್ರೌಢಿಮೆದೋರ್ಪಮುನ್ನಮದನಾಗಳ್ತಾಳಲಾಂ ನಾಣ್ಚಿದೆಂ

ಕವಿತಾರತ್ನಮಿದೀಗಳೆಂದಿನಿಸಿಕೊಳ್ವೀಗ್ರಂಥಮೇ ಮುಂದಿರಲ್
ಕವಿರತ್ನಾಖ್ಯೆಯದೇತಕೆಂದದನುಪೇಕ್ಷಾದೃಷ್ಟಿಗೀಡಾಗಿಪಂ
(ವಿದ್ಯಾರಣ್ಯಕಾವ್ಯಮ್, ಪುಟ ೮)

ಶ್ರೇಷ್ಠ ಚಂಪೂಕಾವ್ಯ ಬರೆದರೂ ಕಾವ್ಯದ ಕೊನೆಯಲ್ಲಿ ಕನ್ನಡನುಡಿವೆಣ್ಣ ನುಣ್ಣಡಿಯ ಬಿನ್ನಣದ ಚಿಣ್ಣನೆಂದು ತಮ್ಮನ್ನು ಕರೆದುಕೊಂಡಿದ್ದಾರೆ.

ಯೋಗಾಭ್ಯಾಸಿ

ಚಿದಂಬರಯ್ಯನವರು ಯೋಗಾಭ್ಯಾಸ ಮಾಡಿದ್ದರು. ಧ್ಯಾನ, ಜಪಗಳಲ್ಲಿ ವಿಶೇಷ ಸಾಧನೆ ಮಾಡಿದ್ದರು. ಬೆಂಗಳೂರು ಶಂಕರಮಠದ ಗುಹೆಯಲ್ಲಿ ಕೆಲವು ಕಾಲ ತಪಸ್ಸು ಮಾಡಿದ್ದರು. ಭಾವ ಸಂವತ್ಸರ ಶ್ರಾವಣ ಶುದ್ಧ ಪೌರ್ಣಿಮೆಯಂದು ಧ್ಯಾನಸ್ಥರಾಗಿದ್ದಾಗ ಅವರಿಗೆ ತೇಜಸ್ಸೊಂದು ಕಾಣಿಸಿಕೊಂಡಿತು. ಆ ಬೆಳಕು ಅವರನ್ನು ತಟ್ಟಿದಂತೆ ಆಯಿತು. ಈ ಅನುಭವವನ್ನು ಸೊಸೆ ಗುಂಡಮ್ಮನವರಿಗೆ ಚಿದಂಬರಯ್ಯನವರು ಸ್ವತಃ ಹೇಳಿದ್ದರು (ಸೊಸೆ ಗುಂಡಮ್ಮನವರ ಹೇಳಿಕೆ).

ಒಂದು ಕಾಲದಲ್ಲಿ ತಮ್ಮ ಜತೆಯಲ್ಲಿ ಸಹೋದ್ಯೋಗಿಗಳಾಗಿ ಕೆಲಸ ಮಾಡುತ್ತಿದ್ದ ಸುಬ್ಬರಾಯರು ಪಂಚೀಕರಣ, ವೇದಾಂತಸಾರ ಮುಂತಾದ ವೇದಾಂತ ಪ್ರಮಾಣ ಗ್ರಂಥಗಳನ್ನು ಅಭ್ಯಾಸ ಮಾಡುತ್ತಿದ್ದುದ್ದನ್ನು ಹಾಸ್ಯ ಮಾಡುತ್ತಿದ್ದರು. ಆ ಕಾಲಕ್ಕೆ ವೇದಾಂತಾಭ್ಯಾಸದಲ್ಲಿ ಅಷ್ಟು ಒಲವು ಚಿದಂಬರಯ್ಯನವರಿಗೆ ಇರಲಿಲ್ಲವೆನ್ನಬಹುದು. ಆದರೂ ಪಂಚದಶಿಯನ್ನು ಸುಬ್ಬರಾಯರೊಂದಿಗೆ ಅಧ್ಯಯನ ಮಾಡುತ್ತಿದ್ದರು. ಕಡೂರಿನಲ್ಲಿದ್ದಾಗ ೧೯೦೬ರಲ್ಲಿ ಚಿದಂಬರಯ್ಯನವರಿಗೆ ಪತ್ನಿವಿಯೋಗವಾಯಿತು. ಅನಂತರ ಪಂಚದಶಿ, ಶಂಕರಾನಂದರ ಗೀತಾ ತಾತ್ಪರ್ಯ ಬೋಧನೆಯನ್ನು ಓದಿ ವೇದಾಂತದ ಹುಚ್ಚನ್ನು ಹಿಡಿಸಿಕೊಂಡುಬಿಟ್ಟಿದ್ದರು. ಸಂನ್ಯಾಸವನ್ನು ತೆಗೆದುಕೊಂಡು ವೇದಾಂತ ಶ್ರವಣವನ್ನು ಮಾಡಬೇಕೆಂದು ಆಗಿಂದಾಗ್ಗೆ ಅವರು ಹೇಳುತ್ತಿದ್ದುದು ಚೆನ್ನಾಗಿ ನೆನಪಿದೆ ಎಂದು ವೈ. ಸುಬ್ಬರಾಯರು ಚಿದಂಬರಯ್ಯನವರ ಬಗ್ಗೆ ಬರೆದ 'ಶ್ರದ್ಧಾಂಜಲಿ' ಬರಹದಲ್ಲಿ ಹೇಳಿದ್ದಾರೆ.

"೧೯೧೦ರಲ್ಲಿ ಕುರ್ತುಕೋಟಿ ಮಹಾಭಾಗವತರೆಂಬ ಸಾಧುಗಳ ದರ್ಶನವಾದ ಮೇಲೆ ಉತ್ಕಟ ವೈರಾಗ್ಯದಿಂದ ಗೋಂದಾವಳಿಯ ಶ್ರೀ ಬ್ರಹ್ಮಚೈತನ್ಯ ಮಹಾರಾಜರೆಂಬ ಸದ್ಗುರುಗಳ ಸೇವೆಗೆಂದು ಕಡೂರಿನಲ್ಲಿ ಶಿಕ್ಷಕರಾಗಿದ್ದ ಅವರು ರಜೆ ಹಾಕಿ ಹೊರಟುಬಿಟ್ಟರು. ಕುರ್ತುಕೋಟಿಯಲ್ಲಿದ್ದಾಗ ಅವರ ಚಿತ್ತವು ಧ್ಯಾನಯೋಗ ಭಕ್ತಿಯೋಗಗಳಲ್ಲಿ ನೆಲೆಗೊಂಡಿತು ಅವರು ಬೆಳಿಗ್ಗೆ ಸಾಯಂಕಾಲ ಎರಡೂ ಹೊತ್ತು ದೀರ್ಘಕಾಲ ಪ್ರಾಣಾಯಾಮ ಸಗುಣಾರಾಧನ ಲಯಚಿಂತನ ಮುಂತಾದ ಸಾಧನಗಳನ್ನು ಮಾಡುತ್ತಿದ್ದರು. ಉಳಿದ ಕಾಲದಲ್ಲಿ ಭಕ್ತಿಪ್ರಧಾನ ಗ್ರಂಥಗಳನ್ನು ಓದುವುದು, ಬರೆಯುವುದು, ಪರಮಾರ್ಥವೆಂಬ ಮಾಸಪತ್ರಿಕೆ ಸಂಪಾದಕತ್ವ ವಹಿಸಿದ್ದರು. ಹೀಗೆ ಕಾಲಕ್ಷೇಪ ಮಾಡುತ್ತಿದ್ದರು. ಹೀಗೆ ತಮ್ಮ ತನುಮನಧನಗಳನ್ನು

ಕುರ್ತುಕೋಟಿಯಲ್ಲಿ ಶ್ರೀಮಹಾಭಾಗವತರ ಸೇವೆಗೂ ಅವರ ಭಕ್ತಮಂಡಲಿಯವರಿಗಿದ್ದ ಸತ್ರದ ಸೇವೆಗೂ ಒಪ್ಪಿಸಿಬಿಟ್ಟಿದ್ದರು. ವಾನಪ್ರಸ್ಥಾಶ್ರಮಿಗಳಂತೆ ದೇಹಾಭಿಮಾನವನ್ನು ತೀರ ತೊರೆದುಬಿಟ್ಟಿದ್ದರು.

ಚಿದಂಬರಯ್ಯನವರು ಪ್ರಾಣಾಯಾಮ ಸಾಧನೆ ಮಾಡುತ್ತಿದ್ದಾಗ ಒಮ್ಮೆ ಅವರ ತಲೆಗೆ ಗಾಳಿ ನುಗ್ಗಿದ್ದರಿಂದ ಅವರಿಗೆ ಆಗಾಗ ತಲೆಸುತ್ತು ಬರುತ್ತಿತ್ತು. ಒಮ್ಮೆ ಲಾಲ್‌ಬಾಗಿಗೆ ಸಂಚಾರ ಹೊರಟಾಗ ಅಂಗಾತಾಗಿ ತಲೆತಿರುಗಿ ಲಾಲ್‌ಬಾಗಿನಲ್ಲಿ ಬಿದ್ದಾಗ ಅಲ್ಲಿಗೆ ಕಾರಿನಲ್ಲಿ ಬಂದಿದ್ದ ಟಿ. ರಾಮಯ್ಯನವರು ಮನೆಗೆ ಕರೆತಂದುಬಿಟ್ಟರು. ಆ ದಿನವೆಲ್ಲ ಅವರಿಗೆ ಜ್ಞಾನವೇ ಬಂದಿರಲಿಲ್ಲ. ಆಗ ಶಂಕರಮಠದ ಅಗ್ರಹಾರದಲ್ಲಿ ಪಕ್ಕದ ಮನೆಯಲ್ಲಿದ್ದ ದೇವುಡು ಅವರು ಧೈರ್ಯ ಹೇಳಿ ಅವರನ್ನು ನೋಡಿಕೊಂಡು ಡಾಕ್ಟರಿಂದ ಚಿಕಿತ್ಸೆಕೊಡಿಸಿ ನೆರವಾದರು. ವಿಕ್ಟೋರಿಯಾ ಆಸ್ಪತ್ರೆಯ ವೆಂಕಟಸುಬ್ಬಯ್ಯ ಎಂಬ ಪ್ರಸಿದ್ಧ ವೈದ್ಯರು ಚಿಕಿತ್ಸೆ ನೀಡಿದವರು 'ನೋಡಿ ಇನ್ನು ಕೆಲವು ದಿನಗಳವರೆಗೆ ಇವರಿಗೆ ತಲೆಗೆ ನೀರು ಹಾಕಿಕೊಳ್ಳದಿರಲು ಹೇಳಿ' ಎಂದು ತಿಳಿಸಿಹೋದರು. ಸ್ನಾನಕ್ಕೆ ನೀರು ಸಿದ್ಧಮಾಡಲು ಹೇಳಿದಾಗ, ಸೊಸೆ ಮಾವನಿಗೆ ಡಾಕ್ಟರ್ ಹೇಳಿದ ಮಾತನ್ನು ಹೇಳಿದಾಗ 'ನೀನು ನನ್ನ ಮಾತು ಕೇಳಬೇಕೋ ವೈದ್ಯರ ಮಾತು ಕೇಳಬೇಕೋ' ಎಂದು ಹೇಳಿ ಮೈತುಂಬ ನೀರು ಹಾಕಿಸಿಕೊಂಡರು (ಸೊಸೆ ಗುಂಡಮ್ಮನವರು ಹೇಳಿದ್ದು).

ಚಿದಂಬರಯ್ಯನವರು ಧಾರವಾಡದಿಂದ ಬೆಂಗಳೂರಿಗೆ ಬಂದಮೇಲೆ ಯೋಗಸಾಧನೆಯಲ್ಲಿ ವಿಶೇಷವಾಗಿ ನಿರತರಾಗಿದ್ದರು. ಈ ಬಗ್ಗೆ ಡಿ.ಕೆ. ಭಾರದ್ವಾಜರು ಹೇಳಿದ ಮಾತು, ಮೇಲಿನ ಪ್ರಸಂಗಕ್ಕೆ ಹಿನ್ನೆಲೆ ಒದಗಿಸುತ್ತದೆ. 'ಈಚಿಗೆ ಅವರು ಯೋಗಸಾಧನೆಯಲ್ಲಿ ಮಗ್ನರಾಗಿದ್ದರು. ಇವರು ಕೈಲಾಸವಾಸಿಗಳಾಗುವುದಕ್ಕೆ ಒಂದುವರ್ಷಕ್ಕೆ ಮುಂಚೆ ಇವರು ಪಂಡಿತ ತಾರಾನಾಥರ ಬಳಿಗೆ ಬಂದು ಕೈ ತೋರಿಸಿದರು. ಆಗ ಅವರು 'ನಿಮಗೆ ದೈಹಿಕ ರೋಗಗಳಾವುವೂ ಇಲ್ಲ, ನೀವು ಯೋಗಾಭ್ಯಾಸ ಮಾಡುವಾಗ ಒಂದು ದಾರಿಯಲ್ಲಿ ಸ್ವಲ್ಪ ತಪ್ಪಿ ಅದರಿಂದ ದೈಹಿಕ ತೊಂದರೆ ಆಗಿದೆ. ಇದಕ್ಕೆ ಔಷಧದಿಂದ ಪ್ರಯೋಜನವಾಗದು, ತಮಗೆ ಯೋಗದೀಕ್ಷೆಯನ್ನಿತ್ತ ತಮ್ಮ ಗುರುಗಳೇ ನೀವು ನಿದ್ರಿಸುತ್ತಿರುವಾಗ ನಾಡಿಗಳ ಬದಲಾವಣೆ ಮೂಲಕ ನಿಮ್ಮ ತೊಂದರೆಯನ್ನು ನಿವಾರಿಸಬಹುದು' ಎಂದಿದ್ದರು. ಬಾಲ್ಯದಲ್ಲಿ ಪಂಡಿತ ತಾರಾನಾಥರಿಂದ ಪ್ರಭಾವಿತರಾದವರು ಚಿದಂಬರಯ್ಯನವರು. ಅನಂತರ ಚಿದಂಬರಯ್ಯನವರಿಗೆ ಜೀವನಸಾಧನೆ ಕಂಡ ತಾರಾನಾಥರು ಡಿ.ಕೆ. ಭಾರದ್ವಾಜರಲ್ಲಿ ಹೇಳಿದ ಮಾತಿದು "ಕರ್ನಾಟಕದಲ್ಲಿ ನಾನು ಕಂಡ ಪವಿತ್ರ ಜೀವಿಗಳಲ್ಲಿ ಇವರೊಬ್ಬರು" (ಕನ್ನಡನುಡಿ ೧೭ ನವೆಂಬರ್ ೧೯೩೯ ಡಿ.ಕೆ.ಬಿ. ಲೇಖನ).

ಜುಟ್ಟು ಬಿಡಲು ಕಾರಣ

ಶ್ರೀಮದವಧೂತಬೋಧಾನಂದ ಸರಸ್ವತೀ ಸ್ವಾಮಿಗಳು ಎಂಬ ಲೇಖನದಲ್ಲಿ ಹೊಸಕೆರೆ ಚಿದಂಬರಯ್ಯನವರೇ ಹೇಳಿಕೊಂಡ ಮಾತುಗಳಿವು: (ಅಧ್ಯಾತ್ಮ ಪ್ರಕಾಶ ೧೯೩೨ ಫೆಬ್ರವರಿ)

"ಬೆಂಗಳೂರು ದೊಡ್ಡೂರು, ಇಲ್ಲಿಗೆ ವ್ಯವಹಾರದಲ್ಲಿ ದಕ್ಷರಾದವರೂ ಬರುತ್ತಾರೆ, ಪರಮಾರ್ಥದಲ್ಲಿ ನಿಪುಣರಾದವರೂ ಬರುತ್ತಾರೆ. ಇಂಥವರ ಬರುವಿಕೆಯ ಸುಯೋಗವನ್ನು ಆಗಾಗ ಉಪಯೋಗಪಡಿಸಿಕೊಳ್ಳುವುದುಂಟು. ಅದರಲ್ಲಿಯೂ ಪರಮಾರ್ಥದವರ ವಿಷಯಕ್ಕೆ ನನ್ನ ಒಲವು ಹೆಚ್ಚು" ಎಂದು ತಿಳಿದಿದ್ದ ಅವರು ಧಾರ್ಮಿಕ ಪುರುಷರ ಬಳಿಗೆ ಹೋದಾಗ ಇವರು ಅವರ ಟೊಳ್ಳುತನ ಕಂಡು ನಿರಾಶರೂ ಆಗಿದ್ದಾರೆ. ಏಕೆಂದರೆ ಅಧ್ಯಾತ್ಮ ಸಾಧನೆಯಲ್ಲಿ ಇವರು ಚೆನ್ನಾಗಿ ನುರಿತಿದ್ದರಿಂದ ಬಂದವರ ಬಂಡವಾಳ ತಿಳಿಯುತ್ತಿತ್ತು. ಇಂಥ ಅನುಭವಗಳ ಬಗ್ಗೆ ಚಿದಂಬರಯ್ಯನವರು ಹೇಳಿರುವ ಮಾತಿದು "ಎಷ್ಟೋ ವೇಳೆ ನಾನು ಸುದ್ದಿಯ ಬೆನ್ನುಹತ್ತಿ ಅಂಥ ಎಷ್ಟೋ ಜನರ ಕಡೆಗೆ ಹೋಗಿ ಕೊನೆಗೆ ಮನೆಗೆ ಬಂದು ನಿಟ್ಟುಸಿರಿಟ್ಟ ಉದಾಹರಣೆಗಳು ನನಗೆ ಮರೆಯುವ ಹಾಗಿಲ್ಲ" ಎಂದಿದ್ದಾರೆ. ಆದರೆ ಕೆಲವೊಮ್ಮೆ ಶ್ರೇಷ್ಠ ಸಾಧುಗಳ ಪರಿಚಯ ಅವರಿಗಾಗಿತ್ತು. ಅಂಥವರಲ್ಲಿ ಮೆಚ್ಚಿದವರ ಬಗ್ಗೆ ಬರೆದ ಲೇಖನ "ಶ್ರೀಮದವಧೂತ ಬೋಧಾನಂದ ಸರಸ್ವತೀ ಸ್ವಾಮಿಗಳು" ಲೇಖನ ಸಹ ಒಂದಾಗಿದೆ.

ಈ ಲೇಖನದಲ್ಲಿ ಚಿದಂಬರಯ್ಯನವರು ಸ್ವಂತ ವಿಚಾರವೊಂದನ್ನು ಹೇಳಿದ್ದಾರೆ. ಅದೆಂದರೆ ಅವರು ಜುಟ್ಟು ಬಿಟ್ಟಿರುವುಕ್ಕೆ ಕಾರಣ ಹೇಳಿದ್ದಾರೆ. "ಸಾಮಾನ್ಯವಾಗಿ ಸಂನ್ಯಾಸದ ಮೇಲೆ ಹೆಚ್ಚಿನ ಪ್ರೀತಿ ಇರುವುದೇ ನನ್ನ ಹುಟ್ಟುಗುಣ. ಈ ಗುಣದ ಸೆಳೆತಕ್ಕೆ ಸಿಕ್ಕಿ ಒಮ್ಮೆ ನಾನೂ ನನ್ನ ತಲೆಯನ್ನು ನುಣ್ಣಗೆ ಮಾಡಿಕೊಳ್ಳಬೇಕೆಂದು ಯೋಚಿಸಿದ್ದೆನು. ಆದರೆ ತಲೆಯನ್ನು ನುಣ್ಣಗೆ ಮಾಡಿಕೊಂಡಿದ್ದರೂ ಮನಸ್ಸನ್ನು ನುಣ್ಣಗೆ ಮಾಡಿಕೊಳ್ಳದೆ ಇರುವ ಸನ್ಯಾಸಿಗಳೇ ಬಹಳವಾಗಿ ಕಂಡಿದ್ದರಿಂದ ಅವರ ಗುಂಪಿಗೆ ಸೇರುವುದಕ್ಕೆ ಇಷ್ಟವಿಲ್ಲದೆ ನಾನಿನ್ನೂ ಜುಟ್ಟನ್ನಿಟ್ಟುಕೊಂಡಿರುವೆನು. ಆ ಜುಟ್ಟು ನನ್ನ ವಯೋಧರ್ಮದಿಂದ ಎದ್ದುಕಾಣುವಷ್ಟು ಇಲ್ಲದಿದ್ದರೂ ಅದರ ಚಿಹ್ನೆಯಿನ್ನೂ ಇರುವುದು" ಈ ಮಾತನ್ನು ಬರೆದಿರುವುದು ೧೯೩೨ರಲ್ಲಿ ಎಂದರೆ ೬೨ನೇ ವಯಸ್ಸಿನಲ್ಲಿ ಬರೆದಿದ್ದಾರೆ.

ಸಂಸಾರಿಗಳಾದರೂ ಸಂನ್ಯಾಸದ ಬಗೆಗೆ ತುಂಬ ಒಲವು ಇತ್ತು ಅವರಿಗೆ. "ನಾನು ಎಷ್ಟೋ ಜನ ಸನ್ಯಾಸಿಗಳನ್ನು ನೋಡಿರುವೆನು. ಸನ್ಯಾಸಿ ವೇಷದಲ್ಲಿಯೇ ಇದ್ದು ವ್ಯವಹಾರದಲ್ಲಿ ಗೃಹಸ್ಥರನ್ನು ಮೀರಿಸಿರುವವರನ್ನು ಬಿಟ್ಟರೂ ನನ್ನ ಕಣ್ಣಿಗೆ ಬಿದ್ದವರೆಲ್ಲ ಸ್ಥೂಲವಾದ ಕರ್ಮಾಚರಣೆಯಿಂದಲೇ ಕಾಲವನ್ನು ಕಳೆಯುವವರಾಗಿರುವರು ಎಂದು ನಿಜ ಸನ್ಯಾಸಿಗಳನ್ನು ಚೆನ್ನಾಗಿ ಅರಿತಿದ್ದರು.

"ಸನ್ಯಾಸಿಯ ಕರ್ಮವು ಗೃಹಸ್ಥನ ಕರ್ಮಕ್ಕಿಂತ ಬೇರೆ ಜಾತಿಯದೆಂದು ನನ್ನ ತಿಳುವಳಿಕೆ. ಹೀಗಿದ್ದರೂ ಕರ್ಮಠರಾದ ಸನ್ಯಾಸಿಗಳನ್ನು ಕಂಡರೂ ನನಗೆ ಪ್ರೇಮವೇ. ಏಕೆಂದರೆ ಅವರು ಹೆಂಡಿರು ಮಕ್ಕಳು ಮೊದಲಾದ ತೊಡಕುಗಳನ್ನು ಕಳಚಿಕೊಂಡು 'ಜಯ ಸೀತಾರಾಮ' ಎಂದು ಧೈರ್ಯದಿಂದ ಇರುವವರ ಮೇಲೆ ನನ್ನ ಮೆಚ್ಚಿಗೆ ಬಹಳ" (ಪುಟ ೨೧೦, ಅಧ್ಯಾತ್ಮ ಪ್ರಕಾಶ ಪತ್ರಿಕೆ, ೧೯೩೨)

ನಾಣ್ಯ ಪಾದಪೂಜೆ ಸಲ್ಲದು

ಸ್ವಾಮಿಗಳ ಪಾದಪೂಜೆಯನ್ನು ನಾಣ್ಯಗಳಿಂದ ಮಾಡುವುದು ಚಿದಂಬರಯ್ಯನವರಿಗೆ ಹಿಡಿಸುತ್ತಿರಲಿಲ್ಲ. ಗಂಧ ಪುಷ್ಪಗಳಿಂದ ಮಾತ್ರ ಪಾದಪೂಜೆ ಮಾಡಬೇಕೆಂಬುದು ಅವರ ಖಚಿತಾಭಿಪ್ರಾಯವಾಗಿತ್ತು. ನಾಣ್ಯ ಪಾದಪೂಜೆ ಬಗ್ಗೆ ಅವರು ಹೀಗೆನ್ನುತ್ತಾರೆ "ನಾಣ್ಯಗಳಿಂದ ಪೂಜೆ ಮಾಡಿಸಿಕೊಳ್ಳುವುದನ್ನು ನೋಡಿದರೆ ನನಗೆ ಎಲ್ಲಿಯೂ ಇಲ್ಲದಷ್ಟು ನಗೆ ಬರುತ್ತದೆ. ನಾಣ್ಯ ಏನು ಅಂದವೋ ಚಂದವೋ ನನಗಂತೂ ತಿಳಿಯದು. ನಾಣ್ಯದಿಂದ ಪೂಜೆಯನ್ನು ಮಾಡಿದ್ದು ಪುರಾಣದಲ್ಲಿಯೂ ಎಲ್ಲಿಯೂ ಕಾಣಬರಲಿಲ್ಲ. ಹೂವ ಸುವಾಸನೆಯಂತೂ ನಾಣ್ಯಗಳಲ್ಲಿ ಕಾಣುವುದಿಲ್ಲವಷ್ಟೆ. ಬರಿ ಅಷ್ಟೇ ಆದರೆ ಬಾಧಕವಿಲ್ಲ. 'ನಾಣ್ಯವೆಂಬುದು ತನ್ನಲ್ಲಿ ವಾಸನೆಯಿಲ್ಲದಿದ್ದರೂ ಮನಸ್ಸಿನಲ್ಲಿ ದುರ್ವಾಸನೆ ಹುಟ್ಟಿಸುವಂಥ ದ್ರವ್ಯ'. ಇಂಥವನ್ನು ಪವಿತ್ರವಾದ ಪಾದಗಳ ಮೇಲೆ ಏಕೆ ಏರಿಸಬೇಕೋ ನನಗೆ ತಿಳಿಯದು" (ಪುಟ ೨೧೧, ಅಧ್ಯಾತ್ಮಪ್ರಕಾಶ ಪತ್ರಿಕೆ, ೧೯೩೨).

ಕೊನೆಯ ದಿನಗಳು

ಹೊಸಕೆರೆ ಚಿದಂಬರಯ್ಯನವರು ಮೊದಲಿನಿಂದಲೂ ಅಧ್ಯಾತ್ಮದಲ್ಲಿ ಆಸಕ್ತಿ ಉಳ್ಳವರು. ಸದಾ ಶಾಸ್ತ್ರಾಭ್ಯಾಸ ಗ್ರಂಥರಚನೆಯಲ್ಲಿ ತೊಡಗಿದವರು. ತಮ್ಮ ಕೊನೆಯ ದಿನಗಳಲ್ಲಿ ಅವರು ಕೆಲವು ಕಾಲ ಚಿತ್ರಾವತಿ ಎಂಬಲ್ಲಿ ಏಕಾಂತವಾಸ ಮಾಡಿದರು. ಆದರೆ ಶರೀರಾಲಸ್ಯದಿಂದ ಹಿಂದಿರುಗಿಬಂದು ೧೯೩೬ರಲ್ಲಿ ತಿರುಮಕೂಡಲು ನರಸೀಪುರದಲ್ಲಿ ವಾಸವಾಗಿದ್ದರು. ಅಲ್ಲಿ ಸಾವಿತ್ರಮ್ಮ ಎಂಬ ಅವರ ಭಕ್ತೆ ಮನೆಮಾಡಿಕೊಟ್ಟಿದ್ದರು. ಬೆಂಗಳೂರಿನಲ್ಲಿ ಮನೆ ಚಿಕ್ಕದು, ಜನ ಜಾಸ್ತಿ. ಪ್ರಶಾಂತ ವಾತಾವರಣ ಬೇಕೆಂದು ನರಸೀಪುರಕ್ಕೆ ಹೋಗಿದ್ದರು.

ಪ್ರಶಾಂತ ವಾತಾವರಣದಲ್ಲಿ ಗ್ರಂಥರಚನೆ ಮಾಡುತ್ತಿದ್ದ ಅವರು ಅದಕ್ಕಾಗಿ ಬೇರೆ ಊರಿನಲ್ಲಿ ಇರುತ್ತಿದ್ದುದೂ ಉಂಟು. ಉದಾಹರಣೆಗೆ ಹೇಳಬಹುದಾದರೆ ವಿದುರಾಶ್ವತ್ಥದ ದತ್ತಾತ್ರೇಯ ಆಶ್ರಮದಲ್ಲಿದ್ದಾಗ ೧೯೩೪ರಲ್ಲಿ ಪ್ರಸ್ಥಾನದ ತಿರುಳನ್ನು ತಿಳಿಸುವ ವೇದಾಂತದ ಜೀವಾಳ ಗ್ರಂಥವನ್ನು ರಚಿಸಿದರು. ೧೯೩೬ರಲ್ಲಿ ಅಲ್ಲಿಯೇ ಬ್ರಹ್ಮಸೂತ್ರಗಳ ಬೆಳಕು ಗ್ರಂಥ ರಚಿಸಿದ್ದಾರೆ.

ಚಿದಂಬರಯ್ಯನವರು ಚೈತ್ರ ಬಹುಳ ತದಿಗೆ, ಪ್ರಮೋದೂತ ಸಂವತ್ಸರ, ಪುಷ್ಯಮಾಸ (೧೯.೪.೧೯೩೮) ದಿನ ನಿಧನರಾದರು. ಆ ದಿನ ಟಿ. ನರಸೀಪುರದಲ್ಲಿ ನದೀ ಸ್ನಾನ ಮಾಡಿಕೊಂಡು ಮನೆಗೆ ಬಂದರು. ದಿನವೂ ಕನ್ನಡಿ ನೋಡಿಕೊಳ್ಳದೆ ವಿಭೂತಿ ಧರಿಸಿ ಗಂಧಾಕ್ಷತೆಗಳನ್ನು ಹಣೆಗೆ ಇಟ್ಟುಕೊಳ್ಳುತ್ತಿದ್ದವರು ಅಂದು ಕನ್ನಡಿ ತಂದಿಟ್ಟುಕೊಂಡು ಹಣೆಗಿಟ್ಟುಕೊಂಡರು. ಅವರು ಜಾಸ್ತಿ ಸಿಹಿ ತಿನ್ನುತ್ತಿರಲಿಲ್ಲ. ಆ ದಿನ ೩ ಬಟ್ಟಲು ಪಾಯಸ ಕುಡಿದರು. ಮಧ್ಯಾಹ್ನ ೧೨.೩೦ಕ್ಕೆ ನಿಧನರಾದರು. (೧೫.೬.೧೯೭೭ರಲ್ಲಿ ಲೇಖಕ

ಚಿದಂಬರಯ್ಯನವರ ಸೊಸೆ ಗುಂಡಮ್ಮನವರನ್ನು ಸಂದರ್ಶಿಸಿದಾಗ ಹೇಳಿದ ಸಂಗತಿಗಳು). ಹೊಸಕೆರೆ ಚಿದಂಬರಯ್ಯನವರ ಜಾತಕ ಬರೆದವರು ಹೇಳಿದ ಸಂಗತಿ ಎಂದರೆ ಇವರು ನಿಧನರಾದಾಗ ದೇಹದಲ್ಲಿ ಪ್ರಾಣ ಇರುತ್ತೆ, ಆದ್ದರಿಂದ ೨೪ ಗಂಟೆಗಳ ಕಾಲ ಹಾಗೇ ಇಟ್ಟಿದ್ದು ಅನಂತರ ಸಂಸ್ಕಾರ ಮಾಡಬೇಕು ಎಂದು ತಿಳಿಸಿದ್ದರು. ಆ ಪ್ರಕಾರವಾಗಿಯೇ ೨೪ ಗಂಟೆಗಳ ಕಾಲ ಹಾಗೆಯೇ ಇಟ್ಟಿತ್ತು. ಚಿದಂಬರಯ್ಯನವರು ಯೋಗಾಭ್ಯಾಸಿಗಳೂ, ವೈರಾಗ್ಯಶಾಲಿಗಳೂ ಸಾತ್ವಿಕರೂ ಆಗಿದ್ದರು.

ಕೊನೆಯ ದಿನಗಳಲ್ಲಿ ವೈ. ಸುಬ್ಬರಾಯರಿಗೂ ಚಿದಂಬರಯ್ಯನವರಿಗೂ ವೇದಾಂತದ ಕೆಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯವುಂಟಾಗಿ ಅನಂತರ ವಿಠ್ಠಲಶಾಸ್ತ್ರಿಗಳಲ್ಲಿ ವಿಚಾರವಿನಿಮಯ ಮಾಡಿಕೊಂಡಾಗ ಸುಬ್ಬರಾಯರ ಅಭಿಪ್ರಾಯಗಳು ಶಂಕರಾಚಾರ್ಯರ ಭಾಷ್ಯಾನುಸಾರ ಇದೆ ಎಂದು ಚಿದಂಬರಯ್ಯನವರಿಗೆ ಮನವರಿಕೆಯಾಯಿತು. ಅನಂತರ ಶಂಕರಸಪ್ತಾಹಕ್ಕೆ ಬರಲು ಒಪ್ಪಿದಮೇಲೆ ಸಪ್ತಾಹಕ್ಕೆ ಒಂದು ವಾರದ ಮುನ್ನ ಟಿ. ನರಸೀಪುರದಲ್ಲಿ ಸಾವಿತ್ರಮ್ಮ ಅವರ ಮಾವ ಶ್ರೀನಿವಾಸಮೂರ್ತಿಗಳ ಮನೆಯಲ್ಲಿ ನಿಧನರಾದರು.

ಚಿದಂಬರಯ್ಯನವರ ಸೊಸೆ ಗುಂಡಮ್ಮನವರು "ಮಹಾರಾಜರ ಮದ್ವೆ ಆದ ದಿನಕ್ಕೆ ೨೦ ದಿವಸಕ್ಕೆ ಮುಂಚೆ ನಮ್ಮ ಮಾವನವರು ತೀರಿಕೊಂಡರು" ಎಂದು ಲೇಖಕರಿಗೆ ಹೇಳಿದರು. ಅವರು ಹೇಳಿದ್ದು ಸರಿಯಾಗಿದೆ. ಏಕೆಂದರೆ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ವಿವಾಹ ಮಹೋತ್ಸವ ೧೯೩೮ನೇ ಇಸವಿ ಮೇ ೧೫ನೇ ತಾರೀಖು ನಡೆಯಿತು. (ಆಳುವ ಮಹಾಸ್ವಾಮಿ ಅವರ ಗ್ರಂಥ ಲೇ. ಸಿ.ಕೆ. ವೆಂಕಟರಾಮಯ್ಯನವರು, ೧೯೪೧, ಪುಟ ೪೮೫).

ನಾಡಿನಾದ್ಯಂತ ಶೋಕ ಸಂತಾಪ

ಹೊಸಕೆರೆ ಚಿದಂಬರಯ್ಯನವರು ತಮ್ಮ ೬೯ನೇ ವಯಸ್ಸಿನಲ್ಲಿ ನಿಧನರಾಗುವ ವೇಳೆಗೆ (೧೮೭೦-೧೯೩೮) ನಾಡಿನಾದ್ಯಂತ ಪ್ರಸಿದ್ಧರಾಗಿದ್ದರು. ೧೯.೪.೧೯೩೮ರಂದು ಅವರು ನಿಧನರಾದಾಗ ನಾಡಿನ ಪತ್ರಿಕೆಗಳು ವಿದ್ವಾಂಸರು ಗಣ್ಯರು ಕಣ್ಣೀರಿಟ್ಟರು. ಅವರ ಸೇವೆಯನ್ನು ಕೊಂಡಾಡಿದರು.

> ನಾಡು ನುಡಿಗಾಗಿ ಅವರು ಸಲ್ಲಿಸಿದ ಸೇವೆಯು ಅವರನ್ನು ಅಮರರನ್ನಾಗಿ ಮಾಡಿದೆ. ಅವರ ಗ್ರಂಥಗಳನ್ನು ತೆರೆದಾಗಲೆಲ್ಲ ಭವ್ಯವಾಗಿ ಭಸ್ಮವನ್ನು ಲೇಪಿಸಿ ಮೆಲ್ನಗೆಯಿಂದ ಸರಳಭಾವವನ್ನು ಸೂಸುವ, ಅವರ ಗುಂಡುಮುಖವು ನನಗೆ ಈಗಲೂ ಕಾಣಿಸುವುದು. ಚಿದಂಬರಯ್ಯನವರ ಆತ್ಮಕ್ಕೆ ಶಾಂತಿಯಿರಲಿ, ಅವರ ಕೀರ್ತಿಕಾಯ ಅಮರವಾಗಿರಲಿ.
>
> *ಡಿ.ಕೆ. ಭಾರದ್ವಾಜರು*
> *(ಕನ್ನಡ ನುಡಿಯಲ್ಲಿ)*

ಕನ್ನಡದಲ್ಲಿ ಅನೇಕ ಗ್ರಂಥಗಳನ್ನು ರಚಿಸಿ ಪ್ರಖ್ಯಾತರಾಗಿದ್ದ ಶ್ರೀಮಾನ್ ಹೊಸಕೆರೆ ಚಿದಂಬರಯ್ಯನವರು ತಾರೀಖು ೧೯.೪.೧೯೩೪ರಲ್ಲಿ ತಿರುಮಕೂಡಲು ನರಸೀಪುರದಲ್ಲಿ ದೈವಾಧೀನರಾದುದು ಕನ್ನಡ ಪ್ರಪಂಚಕ್ಕೇ ದೊಡ್ಡ ನಷ್ಟವಾಗಿದೆ.

ಸಂಪಾದಕರು

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

ಕರಾಳ ಕಾಲನ ವಶದಿಂದ ಅವರು ಕಳೆದ ಚೈತ್ರ ಬಹುಳ ತದಿಗೆಯ ದಿನ ಇಹಲೋಕವನ್ನು ಬಿಟ್ಟು ತೆರಳಿದ್ದು ಇವುಗಳಿಂದ ನನ್ನ ಮನದಲ್ಲುಂಟುಮಾಡಿರುವ ಮೆಚ್ಚುಗೆಯೂ ಮೈತ್ರಿಯ ಹೊರಹೊಮ್ಮುಗೆಯೂ ವಿರಹಶೋಕವೂ ಒಳತೋಟಿ ಆಡುತಿರುವುವು. ಕಷ್ಟ ಸಹಿಷ್ಣುಗಳಾಗಿ ನಿರಂತರ ವಿದ್ಯಾಭ್ಯಾಸಿಗಳಾಗಿ ಇಹಕ್ಕೂ ಪರಕ್ಕೂ ಬೇಕಾದ ಹೆಗ್ಗುರಿಯನ್ನು ನಡೆಯಿಂದಲೂ ನೀತಿಯಿಂದಲೂ ತೋರಿಕೊಡಬಲ್ಲ ಇಂಥ ಚಿದಂಬರಯ್ಯನವರುಗಳು ಕನ್ನಡ ನಾಡಿನಲ್ಲಿ ಹೇರಳವಾಗಿ ಉದಯಿಸಲಿ. ಜಯ ಚಿದಂಬರ!

ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು

ಅಧ್ಯಾತ್ಮ ಪ್ರಕಾಶ ಪತ್ರಿಕೆ

ನಾಡಿನ ಹಿರಿಯರ ದೃಷ್ಟಿಯಲ್ಲಿ

೧. ಕರ್ನಾಟಕದಲ್ಲಿ ನಾನು ಕಂಡ ಪವಿತ್ರ ಜೀವಿಗಳಲ್ಲಿ ಇವರೊಬ್ಬರು.

ಪಂಡಿತ ತಾರಾನಾಥ

ಕನ್ನಡ ಸಾಹಿತಿ

೨. ತಮ್ಮ ಜೀವಿತಕಾಲದಲ್ಲಿ ಅರೆ ನಿಮಿಷವೂ ವ್ಯರ್ಥವಾಗದಂತೆ ಕೇವಲ ಅಧ್ಯಾತ್ಮ ವಿಚಾರದಲ್ಲಿ ಕನ್ನಡ ಸಾಹಿತ್ಯ ಸೇವೆಯಲ್ಲಿ ತಮ್ಮ ಆಯುಷ್ಯವನ್ನು ಸವೆಯಿಸಿದವರು. ಕನ್ನಡದಲ್ಲಿ ಆಧ್ಯಾತ್ಮಿಕ ಸಾಹಿತ್ಯ ಗ್ರಂಥಗಳನ್ನು ಹೆಚ್ಚಾಗಿ ಬರೆದಿರುವವರಲ್ಲಿ ಮೊದಲನೆಯವರು.

ದ.ಕೃ. ಭಾರದ್ವಾಜ

ಪ್ರಸಿದ್ಧ ಕನ್ನಡ ಸಾಹಿತಿ

೩. ನನ್ನನ್ನು ವಿದ್ಯಾಭ್ಯಾಸದ ಇಲಾಖೆಗೆ ಸೇರಿಸಿ ಆಗಾಗ್ಗೆ ಉಪಯುಕ್ತವಾದ ಸಲಹೆಗಳನ್ನು ನಡೆನುಡಿಗಳಿಂದ ಕೊಡುತ್ತ ಏಕದೇಹ ನ್ಯಾಯದಿಂದ ದೀರ್ಘಕಾಲದವರೆಗೆ ಇದ್ದುಕೊಂಡಿದ್ದು, ನನ್ನ ಬಾಳಿಗೆ ಸುಖದ ಹೊಯ್ನೀರನ್ನು ಎರೆಯುತ್ತಿದ್ದರು.

ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿಗಳು
ಹೊಳೆನರಸೀಪುರ

೪. ನೋಡಿದರೆ ಬಿಡದೆ ಇರುವ ಪುಸ್ತಕಗಳನ್ನು ಬರೆದಿರುವವರೂ ನನ್ನ ಅತ್ಯಂತ ಬಾಲ್ಯವಯಸ್ಸಿನಲ್ಲಿ ಪೂಜ್ಯರೂ ಹಿರಿಯರೂ ಆಗಿದ್ದ ಶ್ರೀ ಚಿದಂಬರಯ್ಯನವರನ್ನು ತುಮಕೂರು ಜಿಲ್ಲೆಯ ಹೊಸಕೆರೆ ಗ್ರಾಮದಲ್ಲಿ ನೋಡಿದ ನೆನಪು ನನ್ನಲ್ಲಿ ಇಂದಿಗೂ ಹಸಿರಾಗಿದೆ

ಶೇಷಾಚಲಶರ್ಮಾ
ಪ್ರಸಿದ್ಧ ಹಿರಿಯ ಸಂಸ್ಕೃತ ವಿದ್ವಾಂಸರು

೫. ನಮ್ಮ ತಂದೆ ತಮ್ಮ ಮಧ್ಯವಯಸ್ಸಿನಲ್ಲಿ ಅವರು ದಿನವೂ ಸಂಜೆ ಭಗವದ್ಗೀತೆಯನ್ನು ಓದುತ್ತಿದ್ದರು. ಅದರಿಂದ ಮನಸ್ಸಿಗೆ ಶಾಂತಿ ಲಭಿಸುತ್ತದೆ ಎಂದು ಹೇಳುತ್ತಿದ್ದರು. ಅವರು ಬಳಸುತ್ತಿದ್ದ ಪ್ರತಿಯನ್ನು ಹೊಸಕೆರೆ ಚಿದಂಬರಯ್ಯನವರ ಅನುವಾದದೊಡನೆ ಈಗಲೂ ನಾನು ಬಳಸುತ್ತೇನೆ.

ಡಾ. ಹಾಮಾನಾಯಕ
ಪ್ರಸಿದ್ಧ ಅಂಕಣಕಾರರು

೬ ಗಾಂಧೀ ಮೈದಾನದ (ಈಗ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಇರುವ ಸ್ಥಳ) ಭಾಷಣಗಳನ್ನು ಕೇಳಲು ಸಮಾಜದ ಪ್ರತಿಷ್ಠಿತ ವ್ಯಕ್ತಿಗಳು, ವಿದ್ವಜ್ಜನರು, ಸಾಮಾನ್ಯವಾಗಿ ಬರುತ್ತಿರಲಿಲ್ಲ. ಅವರಿಗೆ ಸಿಐಡಿಗಳ ಭಯ. ಪಂಡಿತ ತಾರಾನಾಥರು ಗೀತೆಯ ಮೇಲೆ ಹತ್ತು ಭಾಷಣಗಳನ್ನು ಗಾಂಧೀ ಮೈದಾನದಲ್ಲಿ ಮಾಡಿದಾಗ ತಪ್ಪದೆ ಹೊಸಕೆರೆ ಚಿದಂಬರಯ್ಯನವರು, ವೈ. ಸುಬ್ಬರಾಯರು, ಕೆ.ವಿ. ಕೃಷ್ಣಸ್ವಾಮಿ ಅಯ್ಯರ್ ಅವರು ಬರುತ್ತಿದ್ದರು. ಮೂವರೂ ಘನವಿದ್ವಾಂಸರು, ದಾರ್ಶನಿಕರು.

ಅನಕೃ, ಬರಹಗಾರನ ಬದುಕು
ಪುಟ ೩೨-೩೩

೭ ಹೊಸಕೆರೆ ಚಿದಂಬರಯ್ಯನವರ ಗೆಳೆತನದಿಂದಾಗಿ ಕುರ್ತುಕೋಟಿ ಭಾಗವತರ ಸೇವೆಯೂ ಗೋಂದಾವಳಿ ಶ್ರೀ ಬ್ರಹ್ಮಚೈತನ್ಯಸದ್ಗುರು ಮಹಾರಾಜರಿಂದ ಮಂತ್ರೋಪದೇಶವೂ ದೊರೆತವು.

ಸಾ.ಕೃ. ರಾಮಚಂದ್ರರಾವ್
ಪ್ರಸಿದ್ಧ ವಿದ್ವಾಂಸರು

೮ ೧೯೪೪ರಲ್ಲಿ ಸ್ವದೇಶಾಭಿಮಾನಿಯಲ್ಲಿ ಪ್ರಕಟಿತವಾದ ನನ್ನ ಕೆಲವು ಲಘು ಬರಹಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ್ದೇನೆ. ಅದರಲ್ಲಿ ಒಂದು ಸಂಗ್ರಹದ ಹೆಸರು 'ದೇಹಜ್ಯೋತಿಗಳು ಮತ್ತು ಪ್ರಾಣಿ ಪ್ರಬಂಧಗಳು' ಎಂದು. ಅದಕ್ಕಿಂತ ಹಿಂದಣ ದಶಕದಲ್ಲಿ ಹೊಸಕೆರೆ ಚಿದಂಬರಯ್ಯನವರು 'ಭರತಖಂಡದ ಜೀವಜ್ಯೋತಿಗಳು' ಎಂಬ ಒಂದು ಗ್ರಂಥದಲ್ಲಿ ಪ್ರಸಿದ್ಧ ವ್ಯಕ್ತಿಗಳ ಜೀವನ ಚಿತ್ರಗಳನ್ನು ಪ್ರಕಟಿಸಿದ್ದರು. ಅವರ ಪುಸ್ತಕದ ಆಖ್ಯೆ ನನಗೆ ಪ್ರೇರಣೆಯನ್ನು ಕೊಟ್ಟಿತ್ತು.

ಶಿವರಾಮ ಕಾರಂತರು
ಸಾಹಿತ್ಯ ಮತ್ತು ನಾನು
ಸ್ಮೃತಿಪಟಲ-೨ರಲ್ಲಿ, ಪು.೨೮, ೧೯೭೮

೯ ೧೯೨೦ರಲ್ಲಿ ಧಾರವಾಡದ ರಾಷ್ಟ್ರೀಯ ವಿದ್ಯಾಲಯದಲ್ಲಿ ಇಪ್ಪತ್ತನೇ ಶತಮಾನದ ವಿಭೂತಿ ಪುರುಷರ ಚರಿತ್ರೆಗಳಲ್ಲಿಯ ಮುಖ್ಯಾಂಶಗಳನ್ನು ಹೇಳುತ್ತಿದ್ದರು. ನಾವೆಲ್ಲರೂ ಇದರಿಂದ ಪ್ರಭಾವಿತರಾದವರೇ.

ಕಡಲಬಾಳು ಪ್ರಹ್ಲಾದಾಚಾರ್ಯ
ಮ.ಗೋವಿಂದಾರಾವ್ ವಿದ್ಯಾರ್ಥಿಗಳು

ಚಿದಂಬರಯ್ಯನವರು ರಚಿಸಿದ ಗ್ರಂಥಗಳು

ಹೊಸಕೆರೆ ಚಿದಂಬರಯ್ಯನವರು ಕನ್ನಡದ ಅದ್ವಿತೀಯ ಬರಹಗಾರರಲ್ಲಿ ಒಬ್ಬರು. ಹೊಸಗನ್ನಡ ಗದ್ಯ ಲೇಖಕರಲ್ಲಿ ಅಗ್ರಗಣ್ಯರು. ಕವಿಗಳು ನಾಟಕಕಾರರು ಧಾರ್ಮಿಕ ಸಾಹಿತಿಗಳು, ಪ್ರಬಂಧಕಾರರು, ಜೀವನಚರಿತ್ರೆಕಾರರು, ಅನುವಾದಕರು, ಗ್ರಂಥ ಸಂಪಾದಕರು, ಪ್ರವಚನಕಾರರು, ಅಧ್ಯಾಪಕರು, ದೇಶಾಭಿಮಾನಿಗಳು. ಅವರು ೭೫ಕ್ಕೂ ಹೆಚ್ಚಿನ ಗ್ರಂಥಗಳನ್ನು, ಹತ್ತಾರು ಲೇಖನಗಳನ್ನು ರಚಿಸಿದ್ದಾರೆ. ಅವೆಲ್ಲಾ ಉಪಲಬ್ಧವಿಲ್ಲ. ಸುಮಾರು ಅರ್ಧದಷ್ಟು ಈ ಲೇಖಕ ಗಮನಿಸಲು ಸಾಧ್ಯವಾಗಿದೆ. ನನ್ನ ಗಮನಕ್ಕೆ ಬಂದ ಗ್ರಂಥ-ಲೇಖನಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇನೆ. ಅವರ ಸಮಗ್ರ ಕೃತಿಗಳ ಬಗ್ಗೆ ಪಿಹೆಚ್‌ಡಿ ಮಾಡಲು ಸಾಧ್ಯವಿದೆ.

ಸದ್ಯಕ್ಕೆ ದೊರೆತಿರುವ ಮಾಹಿತಿ ಪ್ರಕಾರ ಗ್ರಂಥಗಳ ವರ್ಗೀಕೃತ ವಿವರಗಳು ಹೀಗಿವೆ.

ಕಾದಂಬರಿ - ೩	ಗೀತಾಸಾಹಿತ್ಯ - ೬	ನಾಟಕ - ೮
ಶಿಕ್ಷಣ ಗ್ರಂಥ - ೭	ಜೀವನ ಚರಿತ್ರೆ - ೭	ಸ್ತೋತ್ರ ಸಾಹಿತ್ಯ - ೧೧
ಕಾವ್ಯ - ೩	ಕೀರ್ತನ ಸಾಹಿತ್ಯ - ೧೦	ನೀತಿ ಗ್ರಂಥ - ೫
ಧಾರ್ಮಿಕ ಗದ್ಯ ಗ್ರಂಥಗಳು - ೧೫		ಒಟ್ಟು ೭೫ ಗ್ರಂಥಗಳು

ಸುಮಾರು ೪ ದಶಕಗಳ ಕಾಲ ಕನ್ನಡ ನಾಡಿನ ಪತ್ರಿಕೆಗಳಿಗೆ ನಾನಾ ಬಗೆಯ ಲೇಖನಗಳನ್ನು ಬರೆದಿದ್ದಾರೆ. ಸ್ವತಃ ಸಂಪಾದಕರಾಗಿ ಪತ್ರಿಕೆಗಳನ್ನು ಸಂಪಾದಿಸಿದ್ದಾರೆ. ಅಧ್ಯಾತ್ಮಪ್ರಕಾಶ, ಪರಮಾರ್ಥ, ಸುಧರ್ಮ, ಕೃಷ್ಣಸೂಕ್ತಿ, ವಿವೇಕಾಭ್ಯುದಯ, ಸುವಾಸಿನಿ ಮೊದಲಾದ ಧಾರ್ಮಿಕ ಪತ್ರಿಕೆಗಳಲ್ಲಿ ಹೆಚ್ಚಾಗಿ ಲೇಖನಗಳನ್ನು ಬರೆದಿದ್ದಾರೆ. ಅವುಗಳ ಸಂಗ್ರಹಕಾರ್ಯ ಅಗತ್ಯವಾಗಿ ಆಗಬೇಕಿದೆ.

ಹೊಸಕೆರೆ ಚಿದಂಬರಯ್ಯನವರ ಜೀವನ ಚರಿತ್ರೆಯನ್ನಷ್ಟೇ ಕೊಡುವುದು ಪ್ರಕೃತಿ ಗ್ರಂಥದ ಉದ್ದೇಶವಾದ್ದರಿಂದ ಮತ್ತು ಪುಟಗಳ ಮಿತಿ ಮೀರುವುದರಿಂದ ಚಿದಂಬರಯ್ಯನವರ ಕೆಲವು ಕೃತಿಗಳ ಬಗ್ಗೆ ಚಿದಂಬರಯ್ಯನವರ ಮಾತುಗಳಲ್ಲೇ ಅತಿ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ನೀಡಿದೆ. ಕೃತಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಕೊಟ್ಟಿದೆ. ಇಲ್ಲಿ ಅವರು ರಚಿಸಿದ ಗ್ರಂಥಗಳ ಪಟ್ಟಿಯನ್ನಷ್ಟೇ ಕಾಣಿಸಿದೆ ಮತ್ತು ಲೇಖನಪಟ್ಟಿ (ಅಪೂರ್ಣ) ಕೊಟ್ಟಿದೆ. ಚಿದಂಬರಯ್ಯನವರ ಹತ್ತಾರು ಗ್ರಂಥಗಳು ಶಾಲಾ ಕಾಲೇಜುಗಳಿಗೆ ಪಠ್ಯಗಳಾಗಿವೆ, ಬಹುಮಾನ ಗಳಿಸಿವೆ. ಪುನರ್‌ಮುದ್ರಣಗಳಾಗಿವೆ. ಗ್ರಂಥಗಳ ಬಗ್ಗೆ ನಾಡಿನ ವಿದ್ವಾಂಸರು ಮೆಚ್ಚುಗೆ ಸೂಚಿಸಿದ್ದಾರೆ. ಈ ಮೂಲಕ ಕನ್ನಡವನ್ನು ಪುನರುಜ್ಜೀವಿಸಿದ ವಿದ್ವಾಂಸ-ಸಾಹಿತಿಗಳಲ್ಲಿ ಅಗ್ರ ಗಣ್ಯರಾಗಿದ್ದಾರೆ.

ಹೊಸಕೆರೆ ಚಿದಂಬರಯ್ಯನವರ ಸಾಹಿತ್ಯಸೇವೆ

೮೦ಕ್ಕೂ ಹೆಚ್ಚಿನ ಗ್ರಂಥಗಳನ್ನೂ ರಚಿಸಿ ನೂರಾರು ಲೇಖನಗಳನ್ನೂ ನಾಡಿನ ನಾನಾ ಪತ್ರಿಕೆಗಳಿಗೆ (೧೯೩೮ರವರೆಗೆ) ಬರೆದ ಚಿದಂಬರಯ್ಯನವರ ಸಮಗ್ರ ಸಾಹಿತ್ಯವನ್ನು ಸಂಗ್ರಹಿಸಿ ವಿಮರ್ಶಿಸಬೇಕಾಗಿದೆ. ಇಲ್ಲಿ ೮೦ ಕೃತಿಗಳ ಪೈಕಿ ಅವರ ೫೦ ಪ್ರಸಿದ್ಧ ಗ್ರಂಥಗಳನ್ನು ಅತಿ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಅವರೇ ಬರೆದ ಮಾತುಗಳಲ್ಲಿ ಸಂಗ್ರಹಿಸಲಾಗಿದೆ.

ಧಾರ್ಮಿಕ ಗ್ರಂಥಗಳು

೧) ಗೀತಾರ್ಥ ವಿವರಣೆ (೧೯೧೭) ಪ್ರ : ಪಂಡಿತ ಸಾಲಿಗ್ರಾಮ ನಾರಾಯಣಶಾಸ್ತ್ರಿ ಬೆಂಗಳೂರು ಸಂಸ್ಕೃತ ಕಾಲೇಜು, ವೆಂಕಟನಾಥ ಎಂಬುವರು ಸಂಸ್ಕೃತದಲ್ಲಿ ಗೀತೆಗೆ ಬರೆದ ಬ್ರಹ್ಮಾನಂದಗಿರಿ ವ್ಯಾಖ್ಯಾನದ ಕನ್ನಡ ಸಾರ ಸಂಗ್ರಹ ಪೀಠಿಕೆಯಾಗಿ ೧೮ ಅಧ್ಯಾಯಗಳ ಸಾರಸಂಗ್ರಹವನ್ನು ಪ್ರಾರಂಭದಲ್ಲಿ ಕೊಟ್ಟಿದ್ದಾರೆ.

"ಇದರಲ್ಲಿ ಅಖಂಡ ಭೂಮಂಡಲದ ಧರ್ಮಧ್ವಜವಾದ ಭಗವದ್ಗೀತೆಯ ಮೂಲವೂ ಅದರ ಅರ್ಥವೂ ಇರುವುದಲ್ಲದೆ ಸ್ವಲ್ಪ ಓದುವುದರೊಳಗೆ ಬಹಳ ತಿಳಿಯುವಂತೆ ಮುಮುಕ್ಷುಗಳ ಹೃದಯವನ್ನು ಅರಳಿಸಿ ಬಾಯಿನೀರು ಕರೆಸುತ್ತ ಪ್ರತಿಯೊಂದು ಯೋಗದ ವಿಷಯಕ್ಕೂ ತಕ್ಕಷ್ಟು ಪ್ರಾಶಸ್ತ್ಯವನ್ನು ಕೊಟ್ಟು ಮನಸ್ಸಿಗೆ ಸಮಾಧಾನವಾಗುವ ಹಾಗೆ ಗೀತಾರ್ಥದ ಸರ್ವಸಾರವನ್ನು ಸರಳವಾಗಿಯೂ ಸಂಗ್ರಹವಾಗಿಯೂ ಸಮರ್ಪಕವಾದ ರೀತಿಯಲ್ಲಿ ತಿಳಿಸುವ ಸುಲಭವಾದ ಅಚ್ಚ ತಿಳಿಗನ್ನಡದ ಅಪೂರ್ವ ವಿವರಣೆಯೂ ಇರುವುದು. ಈ ಗ್ರಂಥವು ಪ್ರತಿಯೊಂದು ಮನೆಯಲ್ಲಿಯೂ ಅಗತ್ಯವಾಗಿ ಇರತಕ್ಕದ್ದು. ಧರ್ಮ, ನೀತಿ ಬೋಧಕರಾದ ಉಪಾಧ್ಯಾಯರೂ ಪೌರಾಣಿಕರೂ ಇದರ ಉಪಯೋಗವನ್ನು ಪ್ರತಿದಿನವೂ ಮಾಡುವಂತೆ ಇರುವುದಲ್ಲದೆ ಆಸ್ತಿಕಬುದ್ಧಿ ಹೊಂದಿದ್ದಾರೆ. ಸ್ತ್ರೀಯರೂ ಈ ಗ್ರಂಥದಿಂದ ವೈದಿಕ ಧರ್ಮವನ್ನು ಕರತಲಾಮಲಕವಾಗಿ ತಿಳಿಯಬಹುದು."

"ದ್ವೀಪಾಂತರಗಳಲ್ಲಿರತಕ್ಕ ವರ್ಣಾಶ್ರಮ ಧರ್ಮಗಳ ಗಂಧವೇ ಇಲ್ಲದಿರುವ ಯೂರೋಪ್ ಮತ್ತು ಅಮೇರಿಕಾ ದೇಶಸ್ಥರು ನಮ್ಮ ವೇದಾಂತ ಗ್ರಂಥಗಳನ್ನು ಕುತೂಹಲದಿಂದ ಅವಲೋಕಿಸಲು ಉಪಕ್ರಮಿಸಿರುತ್ತಾರೆ. ಹೀಗಿರುವಲ್ಲಿ ಮಹರ್ಷಿಗಳ ಭೂಮಿಯಲ್ಲಿ ಜನಿಸಿ ಋಷಿಗಳ ವಂಶಕ್ಕೆ ಸೇರಿದ ಆರ್ಯರು ನಮ್ಮ ಸಿದ್ಧಾಂತಗಳನ್ನು ವಿಶದಪಡಿಸುವ ಭಗವದ್ಗೀತೆ ಮೊದಲಾದ ಗ್ರಂಥಗಳನ್ನು ಪರಿಚಯ ಮಾಡಿಕೊಳ್ಳದೇ ಇರುವುದು ಸುತರಾಂ ಸರಿಯಾದದ್ದಲ್ಲವು."

೨) ಸೂಕ್ತಿ ಮಾಲೆ ೧ ಮತ್ತು ೨ನೇ ಭಾಗಗಳು : "ದೈವಿಕ ಸ್ಫೂರ್ತಿಬಲದಿಂದ ಪೂರ್ವದ ಋಷಿಗಳು ಸಂಸ್ಕೃತದಲ್ಲಿ ಮಂತ್ರಗಳನ್ನು ಪ್ರಕಟಮಾಡಿದಂತೆ ಶ್ರೀರಾಮಕೃಷ್ಣ ಪರಮಹಂಸರು ತಮ್ಮ ದೇಶಭಾಷೆಯಲ್ಲಿ ಆಡಿರುವ ಧರ್ಮವಿಚಾರವಾದ ಅಭಿಪ್ರಾಯಗಳಿವೆ. ಪ್ರ: ಎಚ್. ಚಿದಂಬರಯ್ಯ, ಶ್ರೀ ರಾಮಮಂದಿರ, ಕುರ್ತುಕೋಟಿ (ಧಾರವಾಡ).

೩) ಪರಮಾರ್ಥ ಪತ್ರಿಕೆ : "ಇದೊಂದು ತಿಳಿಗನ್ನಡ ಮಾಸಪತ್ರಿಕೆ. ಇದರಲ್ಲಿ ವೇದ ವೇದಾಂತ ಪುರಾಣ ಇತಿಹಾಸ ಅವುಗಳ ರಹಸ್ಯಾರ್ಥಗಳೂ ಭಕ್ತಿ, ನೀತಿ, ಧರ್ಮ, ಜ್ಞಾನ, ವೈರಾಗ್ಯ ಇವುಗಳನ್ನು ಬೋಧಿಸುವ ಉಪನ್ಯಾಸಗಳೂ ಸುಲಭವಾಗಿ ತಿಳಿಯುವಂತೆ ಪರಿಚಿತರಿಂದ ಲೇಖಿಸಲ್ಪಟ್ಟು ಪ್ರತಿತಿಂಗಳೂ ಹೊರಡಿಸಲ್ಪಡುತ್ತದೆ. ಪಾರಮಾರ್ಥಿಕ ವಿಚಾರ ಮಾಡಲಪೇಕ್ಷಿಸುವ ಮುಮುಕ್ಷುಗಳಿಗೆ ಅತ್ಯಂತ ಉಪಯೋಗವಾಗಿದೆ"

ವರ್ಷಕ್ಕೆ ಚಂದಾ ೧ ರೂ. ೪ ಆಣೆ. ಪ್ರಸಾರಣ: ಪರಮಾರ್ಥ ಕಾರ್ಯಾಲಯ ಅವಿನ್ಯೂರೋಡ್, ಬೆಂಗಳೂರು.

೪) ಭಕ್ತ ಬಂಧು ಮಾಸಪತ್ರಿಕೆ : ೧೯೧೯ನೇ ಇಸವಿ ಮೊದಲ ಭಾಗದಲ್ಲಿ ಕುರ್ತುಕೋಟಿಯಿಂದ ಮಹಾಭಾಗವತರ ಜತೆ ಸಂಚಾರ ಮಾಡಿದ್ದರಿಂದ ಆದ ದೇಹಶ್ರಮ ಮನಃಶ್ರಮ ನಿವಾರಣೆಗಾಗಿ ಬೆಂಗಳೂರಿಗೆ ಹಿಂದಿರುಗಿದರು. ಆಗ ಕೊಪ್ಪಳದ ಜಯರಾಮಾಚಾರ್ಯರೆಂಬ ದೇಶಾಭಿಮಾನಿ ಕೀರ್ತನಕಾರರು ಹರಿಕೀರ್ತನ ಸಮ್ಮೇಳನವೊಂದನ್ನು ಬೆಂಗಳೂರಿನಲ್ಲಿ ಏರ್ಪಡಿಸಿದಾಗ ಅದರಲ್ಲಿ ಸಕ್ರಿಯವಾಗಿ (ಕಾರ್ಯದರ್ಶಿಗಳಾಗಿ) ಚಿದಂಬರಯ್ಯನವರು ಭಾಗವಹಿಸಿದರು. ಆ ಸಂದರ್ಭದಲ್ಲಿ ಆ ಸಮ್ಮೇಳನದಿಂದ ಪ್ರೇರಿತರಾಗಿ ಭಕ್ತಬಂಧು ಎಂಬ ಮಾಸಪತ್ರಿಕೆ ಹೊರಡಿಸಿದರು. ಪರಮಾರ್ಥ ಪತ್ರಿಕೆಯನ್ನು ೩ ವರ್ಷ ನಡೆಸಿದ ಮೇಲೆ ಸಾಲಗ್ರಾಮದ ನಾರಾಯಣಶಾಸ್ತ್ರಿಗಳಿಗೆ ವಹಿಸಿದ್ದರು. ಭಕ್ತಬಂಧು ಪತ್ರಿಕೆಯನ್ನು ಕೊನೆಯವರೆಗೂ ಚಿದಂಬರಯ್ಯನವರೇ ನಡೆಸಿದರು. ಬೆಂಗಳೂರಿನ ಬಸವನಗುಡಿಯಲ್ಲಿ ಇದರ ಕಾರ್ಯಾಲಯವಿತ್ತು. ಕೀರ್ತನಕಾರರ ಚಿತ್ರಣದ ಹರಿಕಥೆಗಳು ಭಕ್ತಬಂಧುವಿನಲ್ಲಿ ಪ್ರಕಟವಾಯಿತು. ಆಮೇಲೆ ಸಮಗ್ರ ಸಂಪುಟವಾಗಿ ಪ್ರಕಟಗೊಂಡಿತು(೧೯೩೨ರಲ್ಲಿ).

೫) ಆರ್ಯಧರ್ಮ ಪ್ರದೀಪ : ಚಿದಂಬರಯ್ಯನವರ ಪ್ರಸಿದ್ಧ ಗ್ರಂಥಗಳಲ್ಲಿ ಒಂದು ಧಾರವಾಡದ ನ್ಯಾಷನಲ್ ಸ್ಕೂಲಿನಲ್ಲಿ ಅಧ್ಯಾಪಕರಾದಾಗ ರಚಿಸಿದ್ದ ಹಲವಾರು ಮುದ್ರಣಗಳನ್ನು ಕಂಡಿದೆ. ಹಿಂದೂಧರ್ಮದ ಕೈಪಿಡಿ ಎನಿಸಿದೆ. "ಧರ್ಮಭೂಮಿಯೊಂದು ಪ್ರಸಿದ್ಧವಾದ ಈ ದೇಶದಲ್ಲಿ ಧರ್ಮಜ್ಞಾನವು ಹುಡುಗರ ಮನಸ್ಸಿನಲ್ಲಿ ಕೂಡ ಚೆನ್ನಾಗಿ ಬಿಂಬಿಸುವಂತೆ ದೇವರು, ಧರ್ಮ, ಜಗತ್ತು, ಅವಾಂತರ ಮತ್ತು ಜನ್ಮಾಂತರ, ವಿದ್ಯಾರ್ಥಿ ವೃತ್ತಿ, ಗೃಹಸ್ಥವೃತ್ತಿ ಕರ್ಮಯೋಗ ಭಕ್ತಿಯೋಗ ಮತ್ತು ಜ್ಞಾನಯೋಗ ಮೊದಲಾದ

ವಿಚಾರಗಳನ್ನು ಚೆನ್ನಾಗಿ ವಿವರಿಸಿ ಅವುಗಳಿಗೆ ಪ್ರಾಚೀನ ಶಾಸ್ತ್ರೋಕ್ತಿಗಳನ್ನೂ ಬೇರೆಬೇರೆ ಪಂಥಗಳ ಈಚೀಚಿನ ಸಾಧುಸಂತರ ವಚನ ವಿಶೇಷಗಳನ್ನೂ ಅನೇಕ ಕವಿಗಳ ಉದ್ಗಾರಗಳನ್ನು ಪ್ರಮಾಣವಾಗಿಕೊಟ್ಟು ಅನೇಕ ಯುಕ್ತಿಗಳಿಂದಲೂ ಅವುಗಳನ್ನು ಪರಿಪುಷ್ಟಿಗೊಳಿಸಿ ಆ ತತ್ತ್ವಾರ್ಥಗಳನ್ನು ಆಚರಣೆಯಲ್ಲಿ ತೋರಿಸಿದ ಪುರಾಣಪುರುಷರ ದೃಷ್ಟಾಂತಗಳನ್ನು ಮುಂದುಮಾಡಿ ವೈದಿಕಧರ್ಮದ ಸಾರ್ವಜನಿಕ ಧರ್ಮಸ್ವರೂಪವನ್ನು ವೀರ್ಯವತ್ತಾದ ಭಾಷೆಯಿಂದ ಮನಗಾಣಿಸುವ ಗ್ರಂಥ."

ಹುಡುಗರ ಮನಸ್ಸಿನಲ್ಲಿ ಕೂಡ ಬಿಂಬಿಸುವಂತೆ ಹಿಂದೂ ಮತದ ಧರ್ಮಸೂಕ್ಷ್ಮಗಳನ್ನು ಚೆನ್ನಾಗಿ ವಿವರಿಸುವ ಈ ಗ್ರಂಥ ಹಿಂದೂಧರ್ಮದ ಕೈಗನ್ನಡಿ ಆಗಿದೆ. ಎರಡೂ ವಿದ್ಯಾವರ್ಧಕ ಸಂಘದಲ್ಲಿ ಬಹುಮಾನ ಪಡೆದಿದೆ.

೬) ಅನುಭವಾಮೃತ (ಸರ್ವಾರ್ಥ ಸಂದರ್ಶಿನೀ ಟೀಕೆಯೊಂದಿಗೆ) : ಮಹಲಿಂಗರಂಗನ ಪ್ರಸಿದ್ಧ ಅದ್ವೈತಸಿದ್ಧಾಂತ ಗ್ರಂಥ ಭಾಮಿನೀಷಟ್ಪದಿಯಲ್ಲಿ ರಚಿತವಾಗಿದೆ. ತಾಳೆಗರಿ ಗ್ರಂಥಗಳನ್ನು ಕೋರಿ ಕಾಗದಪ್ರತಿಗಳನ್ನು ಮತ್ತು ಅಚ್ಚಿನ ಗ್ರಂಥಗಳನ್ನು ಸಂಶೋಧಿಸಿ 'ಶುದ್ಧಾಪಾಠ'ವನ್ನು ನಿರ್ಣಯಿಸಿದ ಗ್ರಂಥವಿದು. ಶ್ರುತಿಸ್ಮೃತಿ ವಾಕ್ಯಗಳ ಆಧಾರಕೊಟ್ಟು ಗ್ರಂಥದ ಮರ್ಮಗಳನ್ನೆಲ್ಲ ಚೆನ್ನಾಗಿ ವಿವರಿಸುತ್ತ ಕಠಿಣಶಬ್ದಗಳ ಅರ್ಥಗಳನ್ನು ಗಹನವಾದ ಕಡೆಯಲ್ಲಿ ತಾತ್ಪರ್ಯವನ್ನು ಹೇಳಿ ಕಠಿಣ ಶಬ್ದಗಳ ಅರ್ಥವನ್ನೂ ವಾಚಕರ ಜ್ಞಾನ ಪ್ರಾಪ್ತಿಗಾಗಿ ಬೇಕಾದ ಸೌಕರ್ಯಗಳನ್ನೆಲ್ಲ ಸೂರೆಮಾಡಿ ಎಂದರೆ ವಿಸ್ತಾರವಾದ ಕವಿಕಾವ್ಯ ಪೀಠಿಕೆ, ಅಧ್ಯಾಯಗಳ ಸಾರಸಂಗ್ರಹ, ಪೂರ್ವಕಥೆಗಳು, ದುರಂತಗಳನ್ನು ಉಲ್ಲೇಖಿತ ಗೀತೋಪನಿಷತ್ತುಗಳ ಉಲ್ಲೇಖ ವಿವರ ಇತ್ಯಾದಿಗಳನ್ನು ಒಳಗೊಂಡು ಆದರ್ಶಪ್ರಾಯವಾಗಿ ಬರೆದ ಗ್ರಂಥ. ಮೈಸೂರು ಸರ್ಕಾರದ ದೇವರಾಜ ಬಹದ್ದೂರ್ ನಿಧಿಯ ಬಹುಮಾನ ಪಡೆದಿದೆ.

೭) ಆತ್ಮಶಕ್ತಿಯ ತೇಜಸ್ಸು : "ಮನುಷ್ಯನಲ್ಲಿ ಅಪ್ರತಿಮ ಸಾಮರ್ಥ್ಯವು ಆವಿರ್ಭವಿಸುವಂತೆ ಮಾಡಿ ಕೀರ್ತಿ ಶರೀರರೂಪವಾದ ಚಿರಂಜೀವಿತ್ವವನ್ನು ತಂದುಕೊಡುವಂಥ ಸ್ವದೇಶಭಕ್ತಿ, ಗೋಭಕ್ತಿ, ಮಾತೃಭಕ್ತಿ, ಮಾತೃಭಾಷಾಭಕ್ತಿ, ರಾಜಭಕ್ತಿ, ಬ್ರಹ್ಮಚರ್ಯ, ಧೈರ್ಯ, ಉದ್ಯೋಗ, ಧರ್ಮನಿಷ್ಠೆ, ಪರಮಾರ್ಥವೃತ್ತಿ ಮೊದಲಾದ ಆತ್ಮಶಕ್ತಿಯ ವಿವಿಧ ವಿಚಾರ ವಿಶೇಷಗಳನ್ನು ವಿವರಿಸಿ ಆರ್ಯ ಸಂಸ್ಕೃತಿಯ ದೃಷ್ಟಿಯಿಂದ ಅವುಗಳೆಲ್ಲಾ ಕೃತಿಸಾಧ್ಯಗಳೆಂದು ಮನಗಾಣಿಸುವುದಕ್ಕಾಗಿ ಇತಿಹಾಸ ಪ್ರಸಿದ್ಧರಾದ ಲೋಕೋತ್ತರ ವಿಭೂತಿಗಳ ಆಚರಣೆಗಳನ್ನು ಉದಾಹರಿಸುವ ಉತ್ತಮಗ್ರಂಥ, ಮದ್ರಾಸಿನ ವಿದ್ವತ್ ಪರೀಕ್ಷೆಗೆ ಅಂಗೀಕೃತ ಪಠ್ಯವಾಗಿದೆ.

೮) ಭರತಖಂಡದ ಜೀವಜ್ಯೋತಿಗಳು : ಜೀವನಚರಿತ್ರೆಯ ಗ್ರಂಥ. ಹಿಂದೂಸ್ಥಾನದ ದಿಗಂತಗಳನ್ನೆಲ್ಲ ತಮ್ಮ ತಮ್ಮ ಪ್ರತಿಭೆಯಿಂದ ಪ್ರಕಾಶಗೊಳಿಸಿ ಪ್ರಸಿದ್ಧರಾಗಿರುವ ಐತಿಹಾಸಿಕ ಮಹನೀಯರ ಅನೇಕ ಚರಿತ್ರೆಗಳ ತಿರುಳನ್ನು ಅನೇಕ ಕಡೆಗಳಿಂದ ಸಂಗ್ರಹಿಸಿ ಸುಲಭವಾದ ಮತ್ತು ರಸವತ್ತಾದ ಭಾಷೆಯಿಂದ ವಿಚಿತ್ರವಾಗಿ ವಿವರಿಸಿರುವ ಸಚಿತ್ರಗ್ರಂಥ. ವಿದ್ಯಾವರ್ಧಕ ಸಂಘದಿಂದ ಬಹುಮಾನವನ್ನು ಪಡೆದಿದ್ದು, ಮದರಾಸಿನ ಇಂಟರ್‌ಮಿಡಿಯೇಟ್ ಪರೀಕ್ಷೆಗೆ ಅಂಗೀಕೃತ ಪಠ್ಯವಾಗಿದೆ.

೯) ಭರತನ ಬಂಧುಪ್ರೇಮ : ಶ್ರೀ ತುಳಸೀ ರಾಮಾಯಣದ ಸರಣಿಯನ್ನು ಹಿಡಿದು ಪ್ರೇಮರಸವನ್ನು ಸೂರೆಮಾಡುತ್ತಾ ಪ್ರಾಚೀನ ಸಂಪ್ರದಾಯಗಳನ್ನು ಆಧುನಿಕ ದೃಷ್ಟಿಯಿಂದ ಸಕಾರಣವಾಗಿ ವಿವರಿಸುತ್ತ ಬರೆದಿರುವ ಭರತನ ಕಥೆ. ವಿದ್ಯಾವರ್ಧಕ ಸಂಘದವರ ಬಹುಮಾನಕ್ಕೆ ಪಾತ್ರವಾಗಿ ಮೈಸೂರು ಸರ್ಕಾರದವರಿಂದ ಒಂದು ವರ್ಷ ಪಠ್ಯಪುಸ್ತಕವಾದದು.

೧೦) ನವೀನಕಲ್ಪ ನಾಟಕ : ಈಗಿನ ಸಾಮಾಜಿಕ ಪರಿಸ್ಥಿತಿಯು ಪಾಶ್ಚಾತ್ಯ ಪದ್ಧತಿಯನ್ನೆಲ್ಲಾ ನಾಗರಿಕತೆಯೆಂದು ಭ್ರಮಿಸಿ ಮೋಸಹೋಗುತ್ತಿರುವುದರಿಂದ ಭಾರತೀಯತ್ವವು ನೀರು ಪಾಲಾಗುತ್ತಿರುವ ದುಷ್ಪರಿಣಾಮವನ್ನು ಚಿತ್ರಿಸಿ ನಮ್ಮ ಪೂರ್ವಪದ್ಧತಿಯೇ ನಿಜವಾದ ನಾಗರಿಕತೆಯೆಂಬುದನ್ನು ಮನಗಾಣಿಸುವ ಕಲ್ಪಿತ ನಾಟಕ.

೧೧) ಪರಮಾತ್ಮಸ್ತುತಿ (ಷಟ್ಪದಿಕಾವ್ಯ) : ಪರಮಾತ್ಮನ ಮಹಿಮಾ ವಿಶೇಷಗಳು ಮನಸ್ಸಿನಲ್ಲಿ ಮೂಡುವಂತೆ ಮೃದುಮಧುರ ಶೈಲಿಯಿಂದ ಮನೋಹರವಾಗಿರುವ ಷಟ್ಪದಿಗ್ರಂಥ ವಿದ್ಯಾವರ್ಧಕ ಸಂಘದವರಿಂದ ಬಹುಮಾನ ಪಡೆದದ್ದು.

೧೨) ರಾಸಕ್ರೀಡೆ (ಕಥೆ) : ಪಶ್ಚಿಮದ ಬಿರುಗಾಳಿಯಿಂದ ಬುಡಮೇಲಾಗುತ್ತಿರುವ ಶ್ರದ್ಧೆಯ ಮೂಲಸ್ತಂಭವನ್ನು ಆಕ್ಷೇಪ ಸಮಾಧಾನ ರೂಪವಾದ ವಿಚಾರ ವಿಶೇಷಗಳಿಂದ ಗಟ್ಟಿಗೊಳಿಸಿರುವ ಶ್ರೀಮದ್ಭಾಗವತದ ಕಥಾಭಾಗ.

೧೩) ಶ್ರೀರಾಮನ ಮತ್ತು ರಾಮನಾಮದ ಮಹಿಮೆ : ಶ್ರೀ ತುಳಸೀ ರಾಮಾಯಣವನ್ನು ಹಿಡಿದು ಬರೆದ ಭಕ್ತಿರಸದ ದೇವಗಂಗಾಸ್ವರೂಪವಾದ ಪವಿತ್ರವಿಚಾರ.

೧೪) ಗಣಪತಿ ಸ್ವಯಂವರ (ಹರಿಕಥೆ)

೧೫) ಅನಸೂಯಾಖ್ಯಾನ (ಹರಿಕಥೆ)

೧೬) ಧ್ರುವಾಖ್ಯಾನ (ಹರಿಕಥೆ)

೧೭) ಶ್ರೀ ಶಂಕರಾಚಾರ್ಯರ ಆಖ್ಯಾನ (ಹರಿಕಥೆ)

ಈ ನಾಲ್ಕೂ ಗ್ರಂಥಗಳು ಪುರಾಣದ ಕಥೆಗಳಲ್ಲಿರುವ ಧರ್ಮನೀತಿಗಳನ್ನು ಕಣ್ಣಿಗೆ ಕಟ್ಟಿದ ಹಾಗೆ ಚೆನ್ನಾಗಿ ಬಿಚ್ಚಿ ತೋರಿಸಿ ಧರ್ಮಪೀಠದಲ್ಲಿ ನಿಂತು ಪ್ರತಿಪಾದಿಸುವುದಕ್ಕೆ ತಕ್ಕ ಪದಪದ್ಯಗಳೊಡನೆ ಸಮಗ್ರವಾಗಿ ಸಿದ್ಧಗೊಳಿಸಿರುವ ಕೀರ್ತನ - ಹರಿಕಥೆಗಳು.

೧೮) ಮಾಂಡೂಕ್ಯಸಂವಾದ (ಉಪನಿಷತ್ತು) : ಇದು ವೇದಾಂತವೆಂಬ ಅರಮನೆಯ ಶಿಖರದ ಮೇಲಿನ ಕಲಶದಂತಿರುವ ಮಾಂಡೂಕ್ಯೋಪನಿಷತ್ತಿನ ಶಾಂಕರಭಾಷ್ಯದ ಸರಳಾನುವಾದ. ಗುರುಶಿಷ್ಯರ ಮಾತುಗಾರಿಕೆಯ ರೂಪದಲ್ಲಿದೆ. ವೇದಾಂತದ ವಿಚಾರದಲ್ಲಿ ಸಾವಿರಾರು ಗ್ರಂಥಗಳನ್ನು ಓದಿದರೂ ಇದರ ವಿಚಾರ ಸರಣಿಗೆ ಶರಣುಬಂದ ಹೊರತು ಗತ್ಯಂತರವಿಲ್ಲ.

೧೯) ವೇದಾಂತಜೀವಾಳ (ಧಾರ್ಮಿಕಗ್ರಂಥ) : ಇನ್ನೊಬ್ಬರ ಅಭಿಪ್ರಾಯದ ಬೆರಕೆ ಇಲ್ಲದೆ ಶ್ರೀ ಶಾಂಕರಭಾಷ್ಯವನ್ನು ಮಾತ್ರ ಹಿಡಿದು ನೇರವಾಗಿ ಶ್ರುತಿಸ್ಮೃತಿಸೂತ್ರ (ಪ್ರಸ್ಥಾನತ್ರಯ) ಗಳಿಂದಲೇ ಆರಿಸಿದ ಸಂಗತಿಗಳ ಹೊಂದಿಕೆಯಿಂದ ವೇದಾಂತದ ಮೂಲಸ್ವರೂಪದ ಮುದ್ದನ್ನು ಕನ್ನಡಿಗರ ಮುಖದ ಮುಂದಿಡುವುದಕ್ಕೆ ಇದೇ ಮೊದಲು. ಬಹುಬೆಲೆಯುಳ್ಳ ವಿಚಾರಗಳ ಎಲ್ಲ ಸೊಗಸೂ ಇದರಲ್ಲಿ ಸರಳವಾದ ರೀತಿಯಲ್ಲಿ ಮನಸ್ಸಿನಲ್ಲಿ ಒಡೆದು ಮೂಡುವಂತೆ ಬಳಕೆಯಾದ ಮಾತುಗಳಲ್ಲಿ ರೂಪುಗೊಂಡಿದೆ. ಸ್ವಲ್ಪದರಲ್ಲಿ ವೇದಾಂತದ ಎಲ್ಲ ಮುಖ್ಯ ತತ್ತ್ವಗಳ ಸಂಪೂರ್ಣ ಸ್ವರೂಪವನ್ನು ಕಣ್ಣಿಗೆ ಕಟ್ಟಿದ ಹಾಗೆ ಮಾಡುವ ಇದರಲ್ಲಿ ಯುಕ್ತಿಗಳ ಸೂರೆ! ಅನುಭವದ ಮಾತುಗಳ ಸುಗ್ಗಿ.

೨೦) ಗೀತೆಯ ತಿರುಳು : ಗೀತೆಯೊಳಗೆ ಆಳದಲ್ಲಿರುವ ಅರ್ಥವಿಶೇಷಗಳನ್ನೆಲ್ಲ ಮೇಲಕ್ಕೆ ತಂದು ಹಿಗ್ಗಿಸಿರುವ ಒಳ್ಳೆ ಸವಿಕಟ್ಟಾದ ಮಾತುಗಾರಿಕೆ. ಸ್ವಲ್ಪದರಲ್ಲಿ ಬಹಳವನ್ನು ತಿಳಿಸುವುದು.

೨೧) ಗೀತೆಯ ಕೈಗನ್ನಡಿ : ಪ್ರತಿಯೊಂದು ಶ್ಲೋಕ ಅದರ ಕೆಳಗೆ ಅದರ ಸೊಗಸನ್ನೆಲ್ಲ ಭಟ್ಟಿ ಇಳಿಸಿದ ಕನ್ನಡ ತಾತ್ಪರ್ಯ.

೨೨) ಮಕ್ಕಳ ಕೈಗೀತೆ : ಮೂಲದ ಅರ್ಥವನ್ನೆಲ್ಲ ಮಕ್ಕಳಿಗೆ ಕೂಡ ತಿಳಿಯುವ ಮಾತಿನ ರೂಪಕ್ಕೆ ಇಳಿಸಿರುವುದು. ಕಥೆಯ ಸಾರಾಂಶವೂ ಅಡಕವಾಗಿದೆ. ಕೆಲವು ಚಿತ್ರಗಳೂ ಇವೆ.

೨೩) ಶ್ರೀ ವಿದ್ಯಾರಣ್ಯ ಕಾವ್ಯ : ಹೊಸಬಗೆಯ ಕಲ್ಪನೆಗಳೂ ಹೊಸ ಬಗೆಯ ವರ್ಣನೆಗಳೂ ಇದ್ದು ಶಬ್ದಾರ್ಥ ಚಮತ್ಕಾರಗಳಿಂದ ಕೂಡಿ ವಿವಿಧ ವೃತ್ತರೂಪದಲ್ಲಿ ಧರ್ಮಾಭಿಮಾನವನ್ನೂ ದೇಶಾಭಿಮಾನವನ್ನೂ ಹುರಿದುಂಬಿಸುವ ಲಲಿತವಾದ ಚಂಪೂಕಾವ್ಯ ಮದ್ರಾಸಿನ ವಿದ್ವತ್ ಪರೀಕ್ಷೆಗೆ ಅಂಗೀಕೃತ ಪಠ್ಯ.

೨೪) ಭಗವದ್ಗೀತಾರ್ಥಸಾರ ವಿಚಾರ : ಭಗವದ್ಗೀತೆಯ ಗೂಢಾರ್ಥಗಳ ಸರ್ವಸಾರವೂ ಇದರಲ್ಲಿ ತುಂಬಿ ತುಳುಕುತ್ತ ತಿಳಿವನ್ನು ಹೆಚ್ಚಿಸುವವು.

೨೫) ಗೀತಾರ್ಥಚಂದ್ರಿಕೆ : ಇದರಲ್ಲಿ ಅನ್ವಯಕ್ರಮವಾಗಿ ಪ್ರತಿಪದದ ಅರ್ಥದೊಡನೆ ಹಿತವೂ ಮಿತವೂ ಆದ ವಿವರಣೆಯು ರತ್ನಕ್ಕೆ ಕುಂದಣವನ್ನು ಕೆತ್ತಿದಂತೆ ಹೊಂದಿಕೊಂಡಿರುವುದು. ತೂಕದ ವಿಚಾರಗಳು ಮನಸ್ಸಿನಲ್ಲಿ ಒಡೆದು ಮೂಡುವಂತೆ ಯುಕ್ತಿಗಳೂ ಅನುಭವದ ಮಾತುಗಳೂ ಬೇಕಾದಷ್ಟಿರುವುದು ಅರ್ಥವಿಶೇಷಗಳೂ ಪಾಠಾಂತರಗಳೂ ಆಧಾರವಾಕ್ಯಗಳೂ ಕೂಡ ಸಮೃದ್ಧಿಯಾಗಿದ್ದು, ಇದು ಕಣ್ಣಿಗೂ ಮನಸ್ಸಿಗೂ ಕೂಡ ಆನಂದವನ್ನು ಸೂರೆಮಾಡುವುದು.

೨೬) ಪಂಚದಶೀತತ್ತ್ವಾರ್ಥ : ವೇದಾಂತವೆಂಬ ಸಮುದ್ರದ ತಲದಲ್ಲಿರುವ ದೊಡ್ಡದೊಡ್ಡ ಮುತ್ತುರತ್ನಗಳನ್ನೆಲ್ಲ ಇದು ಅಂಗೈಯೊಳಕ್ಕೆ ಬರಿಸುವುದು. ಮನಸ್ಸಿಗೆ ನುರಿಯದಂಥ ಗಡುಸಾದ ವಿಚಾರಗಳೆಂಬ ಉಕ್ಕಿನಕಡಲೆಗಳನ್ನೆಲ್ಲ ಇದು ಯುಕ್ತಿಗಳ ಉದಾಹರಣೆಗಳ ಮತ್ತು ಅನುಭವದ ಮಾತುಗಳ ಹೆಣಿಗೆಯೊಳಗೆ ಒತ್ತೆ ಹಾಕಿ ರಸವನ್ನು ಚಿಮ್ಮುವ ದ್ರಾಕ್ಷಿಯ ಹಣ್ಣುಗಳನ್ನಾಗಿ ಮಾರ್ಪಡಿಸಿರುವ ಸರಳವಾದ ವಚನರೂಪ.

೨೭) ಕೀರ್ತನಕಂಠಾಭರಣ (ಹರಿಕಥೆ) : ಕರ್ನಾಟಕ ಭಾಷಾ ಪ್ರಪಂಚಕ್ಕೆ ಹೊಸಬಗೆಯ ಸಾಹಿತ್ಯವಾಗಿ ಕೀರ್ತನಕಾರರನ್ನು ಸಜೀವಗ್ರಂಥ ಭಂಡಾರವೆನಿಸುವ ಕೀರ್ತನೆ - ಹರಿಕಥೆಗಳು. ಆಯಾಕಥೆಗಳಿಗೆ ತಕ್ಕ ಧರ್ಮನೀತಿಗಳ ಪ್ರತಿಪಾದನೆಯ ಬೇರೆಬೇರೆ ಪೀಠಿಕೆಗಳೊಡನೆ ಸಂಪೂರ್ಣ ರಾಮಾಯಣ (ಕಥೆಗಳು)(೧೦), ಭಾರತದ ಕಥೆಗಳು(೧೦), ಭಾಗವತದ ಕಥೆಗಳು(೧೦), ಉಪನ್ಯಾಸಗಳು(೯), ಸತ್ಪುರುಷರ ಕಥೆಗಳು(೯), ಒಟ್ಟು ೫ ಭಾಗಗಳಲ್ಲಿ ೪೮ ಹರಿಕಥೆಗಳನ್ನು ಪ್ರಕಟಿಸಿದೆ.

೨೮) ತಾರಾನಾಥ ತರ್ಕವಾಚಸ್ಪತಿ (ಜೀವನಚರಿತ್ರೆ) : ಅಪ್ರತಿಮ ಪಂಡಿತನಾಗಿ ಉದ್ಯೋಗಬಲದಿಂದ ತನ್ನ ಜೀವಿಕೆಯನ್ನು ಉನ್ನತಸ್ಥಿತಿಯಲ್ಲಿಟ್ಟುಕೊಂಡು ಧರ್ಮಾರ್ಥವಾಗಿ ವಿದ್ಯೆಯನ್ನು ಪ್ರಚಾರಮಾಡಿ ಪರೋಪಕಾರದಿಂದ ಸಮಸ್ತರಾಜರನ್ನು ಬೆರಗುಮಾಡಿದ ಚರಿತ್ರೆ.

೨೯) ವಾಲ್ಮೀಕಿಯ ಜಯ (ಕಾದಂಬರಿ) : ಜ್ಞಾನಬಲಕ್ಕಿಂತ ಮತ್ತು ಬಾಹುಬಲಕ್ಕಿಂತ ಪ್ರೇಮಬಲವೇ ಜಗತ್ತಿನ ನೆಮ್ಮದಿಗೆ ಕಾರಣವೆಂದು ತೋರಿಸುವ ಬಹು ಆಶ್ಚರ್ಯಕರವಾದ ಬಂಗಾಳೀ ಕಾದಂಬರಿಯ ಅನುವಾದ.

೩೦) ಗುಣನಿರೂಪಣೆ : ಇತಿಹಾಸದಿಂದ ಉದಾಹರಿಸಿ ಗುಣಗಳನ್ನೆಲ್ಲ ವೀರ್ಯವತ್ತರವಾಗಿ ಬಣ್ಣಿಸಿ ಅದರ ಏಳಿಗೆಯನ್ನು ತೋರಿಸುವ ಪ್ರಬಂಧಗಳು. ಮೈಸೂರು ದೇಶದ IV ಫಾರಮ್ಮಿಗೆ ಪಠ್ಯವಾಗಿ ಅಂಗೀಕೃತವಾದದ್ದು.

೩೧) ನೀತಿಗಳ ನೆಲಗಟ್ಟು (ಪ್ರಬಂಧಗಳು) : ಪುರಾಣೇತಿಹಾಸಗಳಲ್ಲಿರುವ ಒಂದೊಂದು ನೀತಿಯ ಅನೇಕ ಉದಾಹರಣೆಗಳನ್ನು ಒಂದೇ ಕಡೆಗೆ ತಂದು ಅವುಗಳನ್ನು ಬೇರೆಬೇರೆ ಮೆಟ್ಟಿಲುಗಳನ್ನಾಗಿ ಮಾಡಿ ನೀತಿವಿಚಾರಕ್ಕೆ ಹೊಳಪುಕೊಟ್ಟಿದೆ.

೩೨) ಚೂಡಾಲೆ (ನಾಟಕ) : ದಾಂಪತ್ಯ ಸಂಬಂಧವು ಪರಮಾರ್ಥಕ್ಕೆ ಸಾಧಕವಾದದ್ದನ್ನು ತೋರಿಸುವ ಮನೋಹರವಾದ ಸಣ್ಣ ನಾಟಕ.

೩೩) ಸುಧರ್ಮಪ್ರಭಾವ (ನಾಟಕ) : "ನಾಟಕರಚನೆಯಲ್ಲಿ ಇದು ನನ್ನ ಮೂರನೇ ಗ್ರಂಥವು: ಮೊದನೇದು ಸುಶೀಲಾ ಪರಿಣಯವೆಂಬ ಕಲ್ಪಿತಕಥೆಯು, ಎರಡನೇದು ಕೃಷ್ಣಮಹೀಶ್ವರೀ ಎಂಬ ಹೆಸರಿನ ಮೈಸೂರು ಚರಿತ್ರೆಯ ನಾಟಕ, ಮೂರನೆಯದಾದ ಈ ನಾಟಕದಲ್ಲಿ ಸಂದರ್ಭಾಂತರಗಳಿಂದ ಜನರ ಮನಸ್ಸಿನಲ್ಲಿ ಭಕ್ತಿಜ್ಞಾನವೈರಾಗ್ಯಗಳೂ ಉಜ್ಜೀವಿತವಾಗಬೇಕೆಂದು ಯತ್ನಿಸಿರಬೇಕು".

ಇದರ ಹಸ್ತಪ್ರತಿಗೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಸಂಭಾವಿಸಿರುವರು (ಬಹುಮಾನಿಸಿದ್ದಾರೆ).

೩೪) ಮಲ್ಲಾರಿಮಹಾತ್ಮೆ (ಷಟ್ಪದೀಕಾವ್ಯ) : ವಿರೂಪಾಕ್ಷಶಾಸ್ತ್ರಿಗಳು ಕ್ರಿ.ಶ. ೧೮೭೫ರಲ್ಲಿ ಪ್ರಕಟಿಸಿದ ಗ್ರಂಥಕ್ಕೆ ಚಿದಂಬರಯ್ಯನವರು ಸೌಂದರ್ಯದರ್ಶಿನಿ ಎಂಬ ಟಿಪ್ಪಣಿಯೊಡನೆ ಪ್ರಕಟಿಸಿದ್ದಾರೆ. ವಿದ್ವತ್ಪೂರ್ಣವಾಗಿ ಸಂಪಾದಿಸಿದ್ದಾರೆ. ೭೪ ವರ್ಷಗಳ ಹಿಂದೆ (೧೯೩೫ಕ್ಕೆ ಮುಂಚೆ) ಸಾಂಪ್ರದಾಯಿಕ ಕವಿತ್ವದ ತಲಪರಿಗೆಯು ಎಷ್ಟು ಸಜೀವವಾಗಿತ್ತೆಂಬುದಕ್ಕೆ ಈ ಗ್ರಂಥ ಒಳ್ಳೆ ನಿಲುಗನ್ನಡಿಯಾಗಿದೆ.

೩೫) ಮನಸ್ಸಿಗುಪದೇಶ ಮತ್ತು ಹರೇರಾಮ ಮಂತ್ರ ಪ್ರಶಂಸೆ : ಶ್ರೀ ಸಮರ್ಥರಾಮದಾಸ ಸ್ವಾಮಿಗಳು ತಮ್ಮ ದೇಶಭಾಷೆಯಾದ ಮಹರಾಷ್ಟ್ರದಲ್ಲಿ ಬರೆದಿರುವ ಮನಾಚೀಶ್ಲೋಕ ಎಂಬ ಗ್ರಂಥವು ಇಲ್ಲಿರುವ ಮನಸ್ಸಿಗುಪದೇಶಕ್ಕೆ ಮೂಲವಾಗಿರುವುದು. ಶ್ರೀ ಸಮರ್ಥ ರಾಮದಾಸರ ಗ್ರಂಥಗಳಲ್ಲಿ ಹರೇರಾಮ ಹಾಮಂತ್ರ ಸೋಪಾಜಪಾರೇ ಎಂಬ ಕೊನೆಯ ಚರಣವುಳ್ಳ ಕೆಲವು ಪದ್ಯಗಳಿವೆ. ಈ ಮುದ್ದಾದ ಎರಡು ಚಿಕ್ಕಗ್ರಂಥಗಳೂ ಆತ್ಮೋನ್ನತಿಯನ್ನು ಬಯಸುವವರಿಗೆ ಅಂದವಾದ ಎರಡು ಕಣ್ಣುಗಳಂತಿರುವವು. ಇವುಗಳನ್ನು ನಾವು ಹಾಡುತ್ತಾ ಹೋದಹಾಗೆಲ್ಲಾ ನಮ್ಮ ಹೃದಯದಲ್ಲಿ ಸ್ಫೂರ್ತಿಮೂಡುತ್ತದೆ. ಸಾಂಗತ್ಯದ ರೂಪದಲ್ಲಿ ಸರಳವಾಗಿ ಕನ್ನಡಿಗರಿಗಾಗಿ ಅನುವಾದಿಸಲಾಗಿದೆ.

೩೬) ಶಾಂತಾದೇವಿಯ ಸಂಸಾರ (ಸಾಮಾಜಿಕ ನಾಟಕ) : ೩೮ ಪುಟಗಳು ೧೯೩೨, ಬರುಬರುತ್ತ ಜನರು ವಿಷಯಾಸಕ್ತಿಯ ಸೆಳೆತಕ್ಕೆ ಸಿಕ್ಕಿ ಮನಸ್ಸನ್ನು ಧರ್ಮದ ಕಡೆಗೆ ಎಳೆಯುವುದಕ್ಕೆ ಈಗಿನ ಕಾಲಕ್ಕೆ ನಾಟಕವೇ ಒಳ್ಳೆಯ ಉಪಕರಣ. ಇದುವರೆಗೆ ಬರೆದ ನಾಟಕಗಳೆಲ್ಲ ವೈರಾಗ್ಯಮಯ. ಈ ನಾಟಕದಲ್ಲಿ ಸ್ತ್ರೀಪಾತ್ರಕ್ಕೆ ಪ್ರಾಶಸ್ತ್ಯ ನೀಡಲಾಗಿದೆ. ಈಗಿನ ಕಾಲದಲ್ಲಿ ಹೊಸ ಹೊಸಬಗೆಯ ಕತೆಗಳು ಹೊಸಹೊಸ ಬೆಡಗನ್ನು ಬೀರುತ್ತಿದೆ. ಈ ನಾಟಕದಲ್ಲಿ ಹೆಂಗಸರ ಮನಸ್ಸು ಹಿಡಿತಕ್ಕೆ ದಕ್ಕಿ ಪತಿಯನ್ನು ಆತ್ಮೋನ್ನತಿ ಮಾಡಿಕೊಳ್ಳುವ ಕತೆ ಹೃದಯಂಗಮವಾಗಿ ಮೂಡಿದೆ.

೩೭) ಗುರುಸ್ತುತಿ ಕುಸುಮಾಂಜಲಿ (ಕುಸುಮ ಷಟ್ಪದಿ ಶತಕ) : ಪರಮಾತ್ಮನ ಲೋಕಕುಟುಂಬತ್ವವನ್ನು ಸಾಕ್ಷತ್ತಾಗಿ ತೋರಿಸುವಂತೆ ಅಸಂಖ್ಯಾತರಾದ ಆತ್ಮರಿಗೂ ಜಿಜ್ಞಾಸುಗಳಿಗೂ ಅರ್ಥಾರ್ಥಿಗಳಿಗೂ ಜ್ಞಾನಿಗಳಿಗೂ ಆಶ್ರಯದಾತರಾಗಿ ಸತಾರಾ ಡಿಸ್ಟ್ರಿಕ್ಟು ಗೋಂದಾವಳಿಯನ್ನು ಭೂವೈಕುಂಠವಾಗಿ ಮಾಡಿದ್ದ ಶ್ರೀ ಬ್ರಹ್ಮಚೈತನ್ಯದ ಪರತತ್ವವನ್ನು ಅಮಾನುಷ ಲೀಲೆಗಳನ್ನು ನಿರೂಪಿಸುವ ೧೦೮ ಪದ್ಯಗಳ ಶತಕ ಕಾವ್ಯ.

೩೮) ಜಗದ್ಗುರು ಶಂಕರಾಚಾರ್ಯ ಸ್ತೋತ್ರಮಾಲೆ : ಭಜಗೋವಿಂದಂ ಧಾಟಿಯಲ್ಲಿ ರಚಿತವಾದ ೨೪ ಚೌಪದಿಗಳ ಪುಟ್ಟಗ್ರಂಥ. ಶಂಕರಾಚಾರ್ಯರ ಜೀವನವನ್ನು ಕುರಿತ ಈ ಸ್ತೋತ್ರವನ್ನು ಗೃಹಿಣಿಯರು ನಿತ್ಯದಲ್ಲಿ ಹಾಡಿಕೊಳ್ಳಲು ರಚಿಸಲಾಗಿದೆ.

೩೯) ಸ್ತ್ರೀಧರ್ಮಸಂಗ್ರಹ (ಷಟ್ಪದಿಕಾವ್ಯ) : ವಿವೇಕೋದಯ ಪತ್ರಿಕೆಯಲ್ಲಿ ಪ್ರಕಟವಾಗಿ ಪ್ರತ್ಯೇಕ ಗ್ರಂಥವನ್ನಾಗಿ ಪ್ರಕಟಿಸಿದೆ. ದೇಶೋನ್ನತಿಗೆ ಸ್ತ್ರೀಯರ ಏಳಿಗೆಯು ಅತ್ಯಗತ್ಯವಾದದು ಎಂದು ಎಲ್ಲರೂ ಒಪ್ಪುವರಷ್ಟೆ. ಓದುವುದಕ್ಕೆ ಸರಾಗವಾಗಿ ಸುಲಭವಾಗಿ ಅರ್ಥವಾಗುವ ಹೊಸಗನ್ನಡ ಷಟ್ಪದಿಗಳಲ್ಲಿ ರಚಿತವಾಗಿದೆ. ಅಗತ್ಯವಾದ ಸ್ತ್ರೀಧರ್ಮಗಳು ಬಹು ಚೆನ್ನಾಗಿರುವ ಹೋಲಿಕೆಗಳು ಮತ್ತು ಸರ್ವ ಸಮ್ಮತವಾದ ದೃಷ್ಟಾಂತಗಳು.

೪೦) ಶಂಕರ ಕಥಾಮೃತ : ಅದ್ವೈತಮತ ಸ್ಥಾಪಕರಾದ ಶ್ರೀಮದ್ಶಂಕರ ಭಗವತ್ಪಾದರುಗಳ ಅಮಾನುಷ ಚರಿತ್ರೆಯನ್ನು ಸುಲಭವಾಗಿಯೂ ಸಂಕ್ಷೇಪವಾಗಿಯೂ ಸರಳವಾಗಿಯೂ ತಿಳಿಸುವ ಸಣ್ಣ ಪುಸ್ತಕ.

೪೧) ಮಾಧವರಾವ್ ಸಿಂಧ್ಯ : ಮೊದಲೊಬ್ಬ ಸಾಧಾರಣವಾಗಿದ್ದು ತನ್ನ ಸಹಜವಾದ ಶೌರ್ಯಧೈರ್ಯಾದಿ ಗುಣಗಳಿಂದ ಅತ್ಯಂತ ಪ್ರಖ್ಯಾತಿಯನ್ನು ಹೊಂದಿ ದೇಶಹಿತಕ್ಕಾಗಿ ಹೋಗಿ ರಾಜನೀತಿಯಲ್ಲಿ ಇಂಗ್ಲಿಷರನ್ನು ಕೂಡ ಮೆಚ್ಚಿಸಿ ಹಿಂದೂಸ್ಥಾನವನ್ನು ಆಳಿದ ಮರಾಠಾ ಸರದಾರನ ಸಂಕ್ಷಿಪ್ತ ಚರಿತ್ರೆ.

೪೨) ಕಾಲಾಂತರ (ಕಾದಂಬರಿ) : ಇದೊಂದು ಪ್ರಪಂಚ ವ್ಯವಹಾರದ ಮರ್ಮವನ್ನು ತಿಳಿಸುವ ತಿಳಿಗನ್ನಡದ ಹೊಸಕಥೆ. ಓದುವುದಕ್ಕೆ ಬಾರದವರನ್ನು ಮುಗಿಸುವವರೆಗೂ ಕೈ ಬಿಡುವುದಿಲ್ಲ.

೪೩) ಮನಶ್ಶಿಕ್ಷಣ (೧೯೬೮) : ಕಡೂರಿನ ಉಪಾಧ್ಯಾಯರ ಸಂಘದಲ್ಲಿ ಮಾಡಿದ ಉಪನ್ಯಾಸ ಶ್ರೀ ಕೃಷ್ಣಸೂಕ್ತಿ ಪತ್ರಿಕೆಯಲ್ಲಿ ಅಚ್ಚಾಗಿ ಪ್ರತ್ಯೇಕವಾಗಿ ಪರಿಷ್ಕರಿಸಲ್ಪಟ್ಟಿದ್ದು. ೧೯೦೮ರಲ್ಲಿ ಪ್ರಕಟಿತ. ಮನಸ್ಶಿಕ್ಷಣ (ಟ್ರೈನಿಂಗ್ ದಿ ಮೈಂಡ್) ಎಂಬ ಮಾತಿನ ಅಭಿಪ್ರಾಯ - ಮನಸ್ಶಿಕ್ಷಣೆಗೂ ವಿದ್ಯಾಭ್ಯಾಸಕ್ಕೂ ಸಂಬಂಧ - ಮನಸ್ಶಿಕ್ಷಣೆಯ ಕೌಶಲ್ಯದ ಹೆಚ್ಚುಗಾರಿಕೆ - ಬೋಧಕರ ವಿಷಯದಲ್ಲಿ ಪೂರ್ವಿಕರ ಅಭಿಪ್ರಾಯ - ಮನಸ್ಶಿಕ್ಷಣಕ್ಕಾಗಿ ಇರಬೇಕಾದ ಪಾಠಕ್ರಮದ ಅಗತ್ಯ - ಸ್ವಶಿಕ್ಷಣೆಯ ಕೆಲವು ನಿಯಮಗಳು ಇತ್ಯಾದಿ ವಿಷಯಗಳಿವೆ.

೪೪) ಭಕ್ತಿಗೀತಾವಳಿ (ಕೀರ್ತನೆಗಳು) : ಗಾನರೂಪದಲ್ಲಿ ಭಕ್ತಿಜ್ಞಾನ ವೈರಾಗ್ಯ ಪ್ರಧಾನವಾದ ಪರಮಾತ್ಮನ ಗುಣಗಳೂ ಲೀಲೆಗಳೂ ಸರ್ವದೇವತಾ ಸ್ವರೂಪವೂ ವಾಚಕರಲ್ಲಿ ಬಿಂಬಿಸಿ ಮನಸ್ಸು ತನ್ಮಯವಾಗಿ ಹೃದಯದಲ್ಲಿ ಬತ್ತಿಕೊಂಡು ಎಲ್ಲಿಯೋ ತಳಕ್ಕೆ ಹತ್ತಿಕೊಂಡು ಹೋಗಿರುವ ಆನಂದ ರಸವು ಉಕ್ಕಿ ಹೊರಸೂಸಲೆಂದು ಈ ಗ್ರಂಥ ರಚಿಸಿದೆ.

೪೫) ಕೃಷ್ಣಮಹೀಶ್ವರಿ (೧೯೧೦) (ನಾಟಕ) : ಪುರಾಣ ಕಥೆಗಳಿಗಿಂತಲೂ ಐತಿಹಾಸಿಕವಾದ ಸಂಗತಿಗಳೇ ಈಗಿನ ಜನರಿಗೆ ವಿಶೇಷವಾಗಿ ಆದರಣೀಯವಾಗಿಯೂ ಜನಾಂಗದ ಅಭ್ಯುದಯಕ್ಕೆ ಅತ್ಯಗತ್ಯವಾಗಿಯೂ ಇರುವುದೆಂದು ಕಂಡುಬಂದುದರಿಂದ ಅಂತಹ ಐತಿಹಾಸಿಕವಾದ ನಾಟಕವೊಂದನ್ನು ಬರೆಯಬೇಕೆಂದು ಅಪೇಕ್ಷಿಸಿ ಮಾತೃಭೂಮಿಯಾದ ಮೈಸೂರು ದೇಶದ ಚರಿತ್ರ ಸೂಚಿತವಾದ ಸಂಗತಿಗಳನ್ನೆಲ್ಲಾ ಅಡಕಮಾಡಿ ಹೊಸಬಗೆಯ ಸಂವಿಧಾನದಿಂದ ಸಾಲಂಕೃತವಾಗಿರುವಂತೆ ರಚಿಸಲಾಗಿದೆ.

೪೬) ನೀತಿಸಾರ (ಕಂದಪದ್ಯಗಳು) : ಪ್ರಪಂಚದ ಧರ್ಮವನ್ನು ತಿಳಿಯುವುದು ಮುಖ್ಯವಲ್ಲವೇ? ಇದರಲ್ಲಿ ಸುಲಭವಾದ ಕಂದಪದ್ಯಗಳು, ಸರಳವಾದ ಶೈಲಿ ಬಳಕೆಯಿಂದ ಉಪಮಾನಗಳು, ಅವಶ್ಯಕವಾದ ನೀತಿಗಳು, ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಪ್ರಕಟಿತವಾಗಿದೆ.

೪೭) ವಿದ್ಯಾರಣ್ಯಾಖ್ಯಾನ (ಹರಿಕಥೆ) : ವಿದ್ಯಾರಣ್ಯರ ಜೀವನ ಮತ್ತು ಸಾಧನೆಗಳನ್ನು ಕೀರ್ತನಾ ರೂಪದಲ್ಲಿ ವಿಸ್ತಾರವಾಗಿ ನಿರೂಪಿಸಲಾಗಿದೆ. ಸ್ವಧರ್ಮ ಪತ್ರಿಕೆಯಲ್ಲಿ ಮೊದಲು ಪ್ರಕಟವಾಗಿದೆ.

೪೮) ಉತ್ತರಗೋಗ್ರಹಣ (ಹರಿಕಥೆ) : ಮಹಾಭಾರತದ ಕಥೆಯನ್ನು ಕೀರ್ತನೆ ದೃಷ್ಟಾಂತಗಳಿಂದ ಕೀರ್ತನರೂಪವಾಗಿ ಬರೆಯಲಾಗಿದೆ.

೪೯) ಶ್ರೀ ಶಂಕರಾಚಾರ್ಯರ ಆಖ್ಯಾನ (೧೯೨೬) (ಹರಿಕಥೆ) : ವಿಶೇಷವಾಗಿ ಮಾಧವೀಯ ಶಂಕರ ವಿಜಯವನ್ನೇ ಹಿಡಿದು ಆಖ್ಯಾನ ರಚಿಸಲಾಗಿದೆ. ಈ ಗ್ರಂಥವನ್ನು ಕೀರ್ತನಕಾರರಿಗೋಸ್ಕರವಾಗಿ ಬರೆದಿದ್ದಾದರೂ ಇದರ ಉಪಯೋಗವು ಕೀರ್ತನಕಾರರಿಗೆ ಮಾತ್ರವೇ ಅಲ್ಲದೆ, ಎಲ್ಲರೂ ಓದುವ ಹಾಗೆ ತಿಳಿಗನ್ನಡದ ಕಾವ್ಯವಾಗಿ ಬರೆಯಲಾಗಿದೆ. ನಡುನಡುವೆ ವಿಷಯಗಳ ವಿವರಣೆಯನ್ನು ಬರೆಯಲಾಗಿದೆ. ಎಲ್ಲರೂ ಸ್ವಕಂಠದಿಂದ ಹಾಡಿ ಆನಂದವನ್ನು ಪಡೆಯುವ ಗ್ರಂಥ.

೫೦) ಷಟ್ಪದಿ ಝೇಂಕಾರ (ಸ್ತೋತ್ರ): ಶ್ರೀಶಂಕರಾಚಾರ್ಯರ ವಿಷ್ಣುಷಟ್ಪದೀ ಸ್ತೋತ್ರದ ಆರು ಶ್ಲೋಕಗಳ ಅನುವಾದದ ಕಿರುಹೊತ್ತಿಗೆ, ತಾತ್ಪರ್ಯದೊಡನೆ ಶ್ರೀಶಂಕರ ಜಗದ್ಗುರು ಸೇವಾಸಂಘ ಹೊನ್ನವಳ್ಳಿ ಇವರು ಪ್ರಕಟಿಸಿದ್ದಾರೆ. ೧೯೨೯ರಲ್ಲಿ ಪ್ರಕಟಿತ.

(ಈ ಲೇಖಕನಿಗೆ ಉಳಿದ ಪುಸ್ತಕಗಳ ವಿವರ ಸಿಕ್ಕಿಲ್ಲ.)

ಅನುಬಂಧ - ೧
ಹೊಸಕೆರೆ ಚಿದಂಬರಯ್ಯನವರು ರಚಿಸಿದ ಗ್ರಂಥಗಳು

೧. ಕಾದಂಬರಿ (೩)

೧) ಕಾಲಾಂತರ, ೨) ಮೈತ್ರೇಯಿ, ೩) ವಾಲ್ಮೀಕಿಯ ಜಯ

೨. ನಾಟಕ (೮)

೧) ಸುಶೀಲಾ ಪರಿಣಯ, ೨) ಕೃಷ್ಣಮಹೀಶ್ವರೀ, ೧೯೧೦,
೩) ಸುಧರ್ಮ ಪ್ರಭಾವ, ೪) ಕಲಿಸಂತರಣ, ೫) ನವಿನಕಲ್ಪ,
೬) ಹಣ್ಣಾದ ಹಂಬಲಿಕೆ, ೭) ಚೂಡಾಲೆ, ೮) ಶಾಂತಾದೇವಿಯ ಸಂಸಾರ

೩. ನೀತಿ ಗ್ರಂಥ (೫)

೧) ಗುಣ ನಿರೂಪಣೆ, ೧೯೨೬
೨) ನೀತಿಗಳ ನೆಲಗಟ್ಟು, (ಭಾಗ-೧ ಮತ್ತು ೨) (೧೯೨೬ (೧೯೫೪ ಎ.ಮು.)
೩) ರಾಮಕೃಷ್ಣ ಪರಮಹಂಸರ ಸೂಕ್ತಿಮಾಲೆ ಭಾಗ೧, ೨ (ಗದ್ಯ)
೪) ಸ್ತ್ರೀಧರ್ಮ ಸಂಗ್ರಹ (೧೯೦೬) (ಪದ್ಯ)
೫) ನೀತಿಸಾರ, ೧೯೦೬

೪. ಧಾರ್ಮಿಕ ಗದ್ಯ ಗ್ರಂಥಗಳು (೧೫)

೧) ಜೀವನ್ಮುಕ್ತಿ ವಿವೇಕ (ಗದ್ಯ), ೧೯೧೮, ೧೯೨೬ (ಎ.ಮು)
೨) ವೇದಾಂತ ವಿಚಾರದ ಗುಟ್ಟು (ಗದ್ಯ)
೩) ರಾಮನಾಮದ ಮಹಿಮೆ (ಗದ್ಯ)
೪) ಆರ್ಯಧರ್ಮ ಪ್ರದೀಪ (ಗದ್ಯ)
೫) ಆತ್ಮಶಕ್ತಿಯ ತೇಜಸ್ಸು (ಗದ್ಯ)
೬) ಪಂಚದಶಿ ತತ್ವಾರ್ಥ (ಗದ್ಯ)
೭) ಈಶಸಾರ
೮) ಆರ್ಯ ಮತಸಾರ
೯) ರಾಜಭಕ್ತಿ
೧೦) ಶ್ರೀ ಶಂಕರ ಕಥಾಮೃತ
೧೧) ವೇದಾಂತದ ಜೀವಾಳ (ಗದ್ಯ), ೧೯೩೪
೧೨) ರಾಸಕ್ರೀಡೆ
೧೩) ಮಾಂಡೂಕ್ಯ ಸಂವಾದ ೧೯೨೮

೧೪) ವೇದಾಂತ ರೂಪರೇಖೆ
೧೫) ಬ್ರಹ್ಮಸೂತ್ರಗಳ ಬೆಳಕು (೧೯೩೭)

೫. ಶಿಕ್ಷಣ ಗ್ರಂಥ (೭)
೧) ಗಣಿತಾಬ್ಜಭಾಸ್ಕರ
೨) ಚರಿತ್ರ ಚಿಂತಾಮಣಿ
೩) ಉಪಾಧ್ಯಾಯರ ಯೋಗ್ಯತೆಗಳು
೪) ಮನಶ್ಶಿಕ್ಷಣ
೫) ಬೋಧನಾಕ್ರಮ
೬) ಬೋಧನೆಯ ಸ್ವಭಾವ
೭) ವಸ್ತು ಪ್ರದರ್ಶನ

೬. ಗೀತಾಸಾಹಿತ್ಯ (೬)
೧) ಭಗವದ್ಗೀತಾಸಾರ ವಿಚಾರ, ೧೯೨೮,
೧೯೬೫ (೧೯೨೬ ಎ.ಮು), ೧೯೧೭ (ಮೊ.ಮು)
೨) ಗೀತಾರ್ಥವಿವರಣೆ
೩) ಗೀತೆಯ ಕೈಗನ್ನಡಿ (೧೯೮೮)
೪) ಮಕ್ಕಳ ಕೈಗೀತೆ
೫) ಗೀತೆಯ ತಿರುಳು, ೧೯೩೧ (೧೯೪೯)
೬) ಗೀತಾರ್ಥಚಂದ್ರಿಕೆ (೧೯೨೯)

೭. ಜೀವನ ಚರಿತ್ರೆ (೭)
೧) ತಾರಾನಾಥ ತರ್ಕ ವಾಚಸ್ಪತಿ, ೧೯೨೭
೨) ಮಾಧವರಾವ ಸಿಂಧ್ಯ
೩) ಬ್ರಹ್ಮಾನಂದರು
೪) ಝಾಂಸಿ ಲಕ್ಷ್ಮೀಬಾಯಿ, ೧೯೬೫ (ಮೂ.ಮು)
೫) ಭರತನ ಬಂಧುಪ್ರೇಮ
೬) ಭರತಖಂಡದ ಜೀವಜ್ಯೋತಿಗಳು,
೧೯೨೮ (೨ನೇ ಮು) ೨೦೧೦(೬ನೆ ಮು)
(೧೯೨೩ ಮೊ.ಮು) ಭಾಗ ೧ ಮತ್ತು ೨
೭) ಮಾರುತಿಯ ಚರಿತ್ರೆ

೮. ಕಾವ್ಯ (೩)

೧) ಶ್ರೀ ವಿದ್ಯಾರಣ್ಯ ಕಾವ್ಯಂ (ಸ್ವರಚಿತ)
೨) ಅನುಭವಾಮೃತ ಟೀಕೆ (ಸಂಪಾದನೆ)
೩) ಮಲ್ಲಾರಿ ಮಹಾತ್ಮೆ ಟೀಕೆ (ಸಂಪಾದನೆ)

೯. ಸ್ತೋತ್ರ ಸಾಹಿತ್ಯ (೧೧)

೧) ಪರಮಾತ್ಮಸ್ತುತಿ (ಪದ್ಯ-ಅನುವಾದ)
೨) ಗುರುಸ್ತುತಿ ಕುಸುಮಾಂಜಲಿ (ಷಟ್ಪದಿ)
೩) ನೀತಿಸಾರ
೪) ಹರೇರಾಮ ಮಂತ್ರ ಪ್ರಶಂಸೆ (ಸಾಂಗತ್ಯ)
೫) ಉಪದೇಶ ಪಂಚಕ
೬) ಷಟ್ಪದೀ ಝೇಂಕಾರ (ಶಂಕರಸ್ತುತಿ)
೭) ಭಕ್ತಿ ಗೀತಾವಳಿ (ಕೀರ್ತನೆಗಳು)
೮) ಭಕ್ತಿ ದೀಪಿಕೆ (ಕವಿತಾ ಸಂಗ್ರಹ) ೧೯೧೦
೯) ಶ್ರೀ ಶಂಕರ ಸ್ತೋತ್ರಮಾಲೆ (ಪದ್ಯ)
೧೦) ಮನಸ್ಸಿಗೆ ಉಪದೇಶ (ಮರಾಠಿಯಿಂದ ಅನುವಾದ) (ಸಾಂಗತ್ಯ)
೧೧) ಅದ್ವೈತರಸಮಂಜರಿ (ಶ್ರೀನಲ್ಲಾ ಕವಿಯ ಸಂಸ್ಕೃತ ಗ್ರಂಥದ ಅನುವಾದ ಪದ್ಯಗಳು, ಅಧ್ಯಾತ್ಮಪ್ರಕಾಶದಲ್ಲಿ ಪ್ರಕಟಿತ)

೧೦. ಕೀರ್ತನ ಸಾಹಿತ್ಯ, ಬಿಡಿ ಪ್ರಕಟಣೆಗಳು (೫)

೧) ಶ್ರೀ ಶಂಕರಾಚಾರ್ಯರ ಆಖ್ಯಾನ, ೧೯೨೮
೨) ಧ್ರುವಾಖ್ಯಾನ
೩) ಉತ್ತರ ಗೋಗ್ರಹಣ
೪) ಶ್ರೀ ವಿದ್ಯಾರಣ್ಯಾಖ್ಯಾನ
೫) ಅನಸೂಯಾಖ್ಯಾನ

ಕೀರ್ತನಕಂಠಾಭರಣ-೫ ಭಾಗಗಳು

೬) ಸಂಪೂರ್ಣ ರಾಮಾಯಣ (೧೦ ಕಥೆಗಳು), ೧೯೨೮, ಭಾಗ-೧
೭) ಭಾರತದ ಕೆಲವು ಕಥೆಗಳು (೯ ಕಥೆಗಳು), ೧೯೩೦, ಭಾಗ-೨
೮) ಭಾಗವತದ ಕೆಲವು ಕಥೆಗಳು (೧೦ ಕಥೆಗಳು), ೧೯೩೧, ಭಾಗ-೩
೯) ಕೆಲವು ಉಪಾಖ್ಯಾನಗಳು (೯ ಕಥೆಗಳು), ೧೯೩೧, ಭಾಗ-೪
೧೦) ಕೆಲವು ಸತ್ಪುರುಷರ ಕಥೆಗಳು (೯ ಕಥೆಗಳು), ೧೯೩೧, ಭಾಗ-೫

ಒಟ್ಟು ಅಚ್ಚಾದ ಗ್ರಂಥಗಳು (೭೫)

ಅನುಬಂಧ-೨
ಹೊಸಕೆರೆ ಚಿದಂಬರಯ್ಯನವರ ಲೇಖನಗಳು

(ಅಧ್ಯಾತ್ಮಪ್ರಕಾಶ ಮಾಸಪತ್ರಿಕೆ)

೧) ಭರತಖಂಡದ ಮುಖ್ಯಧನ (ಪ್ರಬಂಧ), ೧೯೨೩, ಪುಟ ೧೯-೨೪

೨) ಅಪ್ಪಯ್ಯನವರ ವೃತ್ತಾಂತ (ಜೀವನ ಚರಿತ್ರೆ), ೧೯೨೩ ಮೇ ಮತ್ತು ಜುಲೈ, ಪುಟ ೫೪-೫೬, ೮೬-೮೮.

೩) ಸಮಸ್ಯಾ ಪೂರಣ (ಕವಿತೆ), ೧೯೨೩ ಮೇ, ಪುಟ ೮೦

೪) ಕಾವೇರಿ ಸ್ತೋತ್ರ (ಕವಿತೆ), ೧೯೨೩ ಸೆಪ್ಟೆಂಬರ್, ಪ್ರ ೧೩೩-೧೩೪

೫) ಪಂಪಾವಿರೂಪಾಕ್ಷಸ್ತೋತ್ರ (ಕವಿತೆ), ೧೯೨೩ ನವೆಂಬರ್, ಪುಟ ೨೨೮

೬) ದಾಸಬೋಧಸಾರ (ಗ್ರಂಥಪರಿಚಯ), ೧೯೨೩ ಅಕ್ಟೋಬರ್, ನವೆಂಬರ್, ೧೯೨೪ ಜನವರಿ, ಫೆಬ್ರವರಿ ಸಂಚಿಕೆಗಳು, ಪುಟ. ೧೬೯-೧೭೨, ೧೮೪-೧೮೮, ೨೪೦-೨೪೨, ೨೬೬-೨೬೮

೭) ಜಗತ್ತಿನಲ್ಲಿರುವ ದೇವರಸ್ವರೂಪ (ಪ್ರಬಂಧ), ೧೯೩೧ ಸೆಪ್ಟೆಂಬರ್, ಪುಟ ೮-೧೨

೮) ಸಂಸಾರದಲ್ಲೇನು ಸಾರ (ಪ್ರಬಂಧ), ೧೯೩೩ ಅಕ್ಟೋಬರ್, ಪುಟ ೫೭-೫೯, ೧೯೩೩ ನವೆಂಬರ್, ಪುಟ ೯೮-೧೦೧

೯) ಶಾಂತಾದೇವಿಯ ಸಂಸಾರ (ನಾಟಕ), ೧೯೩೨ ಮಾರ್ಚ್, ಏಪ್ರಿಲ್, ಮೇ, ಜೂನ್, ಜುಲೈ ಸಂಚಿಕೆಗಳಲ್ಲಿ.

೧೦) ಕಾಲಮಹಿಮೆ (ಕವಿತೆ), ೧೯೩೧ ಅಕ್ಟೋಬರ್, ಪುಟ ೪೭

೧೧) ತಿಳುವಳಿಕೆಯ ಮಾತು (ಕವಿತೆ), ೧೯೩೧ ಡಿಸೆಂಬರ್, ಪುಟ ೧೨೭

೧೨) ಮೂಢಜನರ ಮೂತತ್ವ (ಕವಿತೆ), ೧೯೨೩ ಏಪ್ರಿಲ್, ಪುಟ ೧೫

೧೩) ಗಮನ ಮತ್ತು ಮನನ (ಪ್ರಬಂಧ), ೧೯೩೨ ಜನವರಿ, ಪುಟ ೧೭೬-೧೮೧

೧೪) ಶ್ರೀಮದವಧೂತಾನಂದಸರಸ್ವತೀ ಸ್ವಾಮಿ (ಜೀವನ ಚರಿತ್ರೆ), ೧೯೩೨ ಫೆಬ್ರವರಿ

೧೫) ರಂತಿದೇವ (ಜೀವನಚರಿತ್ರೆ), ೧೯೩೧ ಅಕ್ಟೋಬರ್, ನವೆಂಬರ್

(ಶ್ರೀ ರಾಮಮೋಹನ್ ಅವರು ಲೇಖನ ವಿವರ ನೀಡಿದ್ದಾರೆ)

(ಕನ್ನಡನಾಡಿನ ಪತ್ರಿಕೆಗಳಿಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಸಂಗ್ರಹಿಸಬೇಕಾಗಿದೆ)

ಅನುಬಂಧ-೩
ಹೊಸಕೆರೆ ಚಿದಂಬರಯ್ಯನವರು
ಗ್ರಂಥರಚಿಸಿದ-ಸಂಚರಿಸಿದ-ವಾಸಿಸಿದ ಸ್ಥಳಗಳು

೧) ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹಾಗಲವಾಡಿ ಹೋಬಳಿಯ ಹೊಸಕೆರೆ ಜನ್ಮಸ್ಥಳ, ಜನನ ೨೮.೧೨.೧೮೭೦.

೨) ಬಾಲ್ಯ : ಹೊಸಕೆರೆ ಮತ್ತು ಹಿರಿಯೂರು

೩) ಸಂಸ್ಕೃತಾಭ್ಯಾಸ : ಹಿರಿಯೂರು, ಬೆಂಗಳೂರು ಊರುಗಳಲ್ಲಿ

೪) ಶಿಕ್ಷಕವೃತ್ತಿ : ಕಡೂರು, ದಾವಣಗೆರೆ, ಧಾರವಾಡ

೫) ಗುರುಸೇವೆ : ಕುರ್ತುಕೋಟಿ, ಗೋಂದಾವಳಿ ಮಹಾರಾಜರ ಬಳಿ ಮತ್ತು ಮಹಾಭಾಗವತರಲ್ಲಿ

೬) ಗ್ರಂಥರಚನೆ : ಬೆಂಗಳೂರು, ವಿದುರಾಶ್ವತ್ಥ, ಟಿ. ನರಸೀಪುರ, ತುಮಕೂರು, ದಾವಣಗೆರೆ, ಕಡೂರು, ಧಾರವಾಡ, ಹಾವೇರಿ, ಹಿರಿಯೂರು ಕುರ್ತುಕೋಟಿ (ಗ್ರಂಥಗಳಲ್ಲಿ ಉಲ್ಲೇಖಿಸಿದ ಪ್ರಕಾರ)

೭) ನಿಧನ : ಟಿ. ನರಸೀಪುರ (೧೯.೪.೧೯೩೮)

೮) ಉಪನ್ಯಾಸಗಳು : ನಾಡಿನ ನಾನಾ ಭಾಗಗಳಲ್ಲಿ ವಿಶೇಷವಾಗಿ ದಾವಣಗೆರೆ, ಕಡೂರು, ಹೊಳೆನರಸೀಪುರ, ಬೆಂಗಳೂರು, ತುಮಕೂರು, ಹೊನ್ನವಳ್ಳಿ (ತಿಪಟೂರು).

ಕೆಲವು ವಿಳಾಸಗಳು

(ಚಿದಂಬರಯ್ಯನವರ ಬಗ್ಗೆ ಸಂಶೋಧನೆ ನಡೆಸುವವರ ಗಮನಕ್ಕಾಗಿ)
ಪರಮಾರ್ಥ ಗ್ರಂಥಮಾಲೆ (ಪರಮಾರ್ಥ ಪತ್ರಿಕೆಯಲ್ಲಿ ಪ್ರಕಟವಾದ ಗ್ರಂಥಗಳು)ಯಲ್ಲಿ ೧೩ ಗ್ರಂಥಗಳನ್ನು ಪ್ರಕಟಿಸಿದವರ ವಿಳಾಸ

೧) ಪರಮಾರ್ಥ ಕಾರ್ಯಾಲಯ, ೧೫೯, ಸುಲ್ತಾನಪೇಟೆ, ಬೆಂಗಳೂರು

೨) ಎಚ್. ಚಿದಂಬರಯ್ಯ, ಶ್ರೀ ರಾಮಮಂದಿರ, ಕುರ್ತುಕೋಟಿ, ಧಾರವಾಡ ಜಿಲ್ಲೆ

೩) ಬೆಂಗಳೂರಿನಲ್ಲಿ ವಾಸವಿದ್ದ ಸ್ಥಳ : ಎಚ್. ಚಿದಂಬರಯ್ಯ, ೨೭, ಶಂಕರಮಠದ ಬೀದಿ, ಶಂಕರಪುರ, ಬೆಂಗಳೂರು (೧೯೧೮ ರಿಂದ ೧೯೨೬ ವರೆಗೆ)

೪) ಶಾಲಾವಿದ್ಯಾಭ್ಯಾಸದ ಕಾಲದಲ್ಲಿ : ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಬೊಬ್ಬೂರುರಂಗನ ಮನೆತನದವರ ಮನೆಯಲ್ಲಿ ವಾಸ.

ಲೇಖನಗಳನ್ನು ಬರೆದ ಪತ್ರಿಕೆಗಳು :

ಅಧ್ಯಾತ್ಮಪ್ರಕಾಶ(ಮಾಸಪತ್ರಿಕೆ), ಸ್ವಧರ್ಮ(ಮಾಸ), ಭಕ್ತಬಂಧು(ಮಾಸ), ಪರಮಾರ್ಥ(ಮಾಸ) - ವಿವೇಕಾಭ್ಯುದಯ(ಮಾಸ), ವಿದ್ಯಾದಾಯಿನಿ (ಮಾಸ ಪತ್ರಿಕೆ), ಕೃಷ್ಣಸೂಕ್ತಿ ಇತ್ಯಾದಿ ನಾಡಿನ ನಾನಾ ಪತ್ರಿಕೆಗಳಿಗೆ ಲೇಖನ ಕೊಟ್ಟಿದ್ದಾರೆ.

ಅನುಬಂಧ-೪
ಹೊಸಕೆರೆ ಚಿದಂಬರಯ್ಯನವರ ಬಗ್ಗೆ ಆಕರ ಸಾಹಿತ್ಯ

೧) ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ (ಸ್ವಹಸ್ತ) ಆತ್ಮಚರಿತ್ರೆ ಮತ್ತು ಕಾರ್ಯಾಲಯ ಇತಿಹಾಸ ಭಾಗ-೧ (ಗ್ರಂಥ)
೨೦೦೬, (ಮೊ.ಮು) ೫೦೧ ಪುಟಗಳು, ೩೦೦ ರೂ.
ಪ್ರ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ

೨) ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ (ಸ್ವಹಸ್ತ) ಆತ್ಮಚರಿತ್ರೆ ಮತ್ತು ಕಾರ್ಯಾಲಯ ಇತಿಹಾಸ ಭಾಗ-೨ (ಗ್ರಂಥ)
೨೦೦೭, (ಮೊ.ಮು) ೩೫೦ ಪುಟಗಳು,
ಪ್ರ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ

೩) ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಇತಿಹಾಸ, ೧೯೭೩ (ಮೊ.ಮು) (ಗ್ರಂಥ) (ಇದೇ ಗ್ರಂಥ ಶ್ರೀ ಗುರುಚರಣಾಮೃತ ಎಂಬ ಹೆಸರಿನಲ್ಲಿ ಎರಡನೇ ಮುದ್ರಣವಾಗಿ ೧೯೭೭ರಲ್ಲಿ ಪ್ರಕಟವಾಗಿದೆ)
ಲೇ: ಹೆಚ್.ಎಸ್. ಲಕ್ಷ್ಮೀ ನರಸಿಂಹಮೂರ್ತಿ
ಪ್ರ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ

೪) ಶ್ರೀ ಗುರುಚರಿತಾಮೃತ - ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ (ಗ್ರಂಥ)
ಪ್ರ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ, ೧೯೯೭

೫) ಕೆಲ್ಲಂಗೆರೆ ತಿಮ್ಮಪ್ಪದಾಸರು (ಜೀವನ ಮತ್ತು ಕೃತಿಗಳು) (ಗ್ರಂಥ)
೨೦೦೭ (ಮೊ.ಮು), ಪುಟ ೧೮೪
ಸಂ: ಪ್ರೊ. ಜಿ. ಅಶ್ವತ್ಥ ನಾರಾಯಣ ಮತ್ತು ಇತರರು
ಪ್ರ: ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನಗುಡಿ, ಬೆಂಗಳೂರು-೪

೬) ಕರ್ನಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯನವರು (ಲೇಖನ)
ಲೇ: ಟಿ.ಆರ್. ಅನಂತರಾಮು
ಆಕರ: ಸ್ವರ್ಣಮಹೋತ್ಸವ ಸಂಚಿಕೆ (ಪ್ರಕಟಣೆ ೧೦.೩.೧೯೯೬)
ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ (ರಿ) ವಿಲ್ಸನ್‌ಗಾರ್ಡನ್, ಬೆಂ.
(ಪುಟ ೬೫-೬೭, ೩ ಪುಟಗಳು)

೭) ಸುವರ್ಣ ಮಹೋತ್ಸವ ಸಂಸ್ಮರಣ ಸಂಚಿಕೆ
ಹೊನ್ನವಳ್ಳಿ ಶ್ರೀ ಶಂಕರಜಗದ್ಗುರು ಸೇವಾ ಸಂಘ, ತಿಪಟೂರು
ಪ್ರಕಟಣೆ: ೧೯೭೫

೮) ಮರೆಯಲ್ಲುಳಿದ ಮಹಾನ್ ಲೇಖಕ - ಹೊಸಕೆರೆ ಚಿದಂಬರಯ್ಯ (ನೆನಪು)
(ಲೇಖನ)
ಲೇ: ಎಂ.ಎಸ್. ರಜನೀಕಾಂತ್
ಆಕರ: ಹಿರಿಯ ಪ್ರಜೆಗಳು (ಮಾಸಪತ್ರಿಕೆ)
ಸಂ. ೩ - ಸಂ.೧೨, ಮೇ ೨೦೦೪ ವಿಶೇಷ ಸಂಚಿಕೆ
ಪುಟ ೧೨-೧೩, ೨ ಪುಟಗಳು

೯) ಉಲುಚುಕಮ್ಮೆ (ಲೇಖನ)
ಲೇ: ಸುರೇಶ ಮೂನ
ಆಕರ: ಸ್ವರ್ಣಮಹೋತ್ಸವ ಸಂಚಿಕೆ, ಉಲುಚಕಮ್ಮೆ ಬ್ರಾಹ್ಮಣ ಮಹಾಸಭಾ
ವಿಲ್ಸನ್‌ಗಾರ್ಡನ್, ಪುಟ ೭೧-೭೨, ೨ ಪುಟಗಳು

೧೦) ಹೊಸಕೆರೆ ಚಿದಂಬರಯ್ಯ (ಲೇಖನ)
ಸಂ: ಡಾ. ಬಿ. ನಂಜುಂಡಸ್ವಾಮಿ
ಆಕರ: ಅಖಿಲಭಾರತ ೬೯ನೇ ಕನ್ನಡ ಸಾಹಿತ್ಯ ಸಮ್ಮೇಳನ, ತುಮಕೂರು
೨೦೦೨ ವಿಶೇಷ ಸಂಚಿಕೆ ಕಲ್ಪಸಿರಿ, ಪುಟ ೪೭೭-೪೭೯
(ಕನ್ನಡ ವಿಷಯ ವಿಶ್ವಕೋಶದ ಲೇಖನವೇ ಇಲ್ಲಿ ಪುನರ್ ಮುದ್ರಿತ)

೧೧) ಬರಹಗಾರನ ಬದುಕು (ಆತ್ಮಕಥನ) - ಅನಕೃ (ಟಿಪ್ಪಣಿ)
೧೯೭೨ (೧), ಪುಟ ೩೨-೩೩, ರೂ. ೬೦
ಪ್ರ: ವಿಶ್ವಭಾರತಿ ಪ್ರಕಾಶನ
ಸಾಹಿತ್ಯ ಸದನ ಖಾರೆಬಾಂದ - ಮಡಗಾಂವ, ಗೋವಾ

೧೨) ಕರ್ನಾಟಕ ವಿಷಯ ವಿಶ್ವಕೋಶ (ಲೇಖನ)
ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ೧೯೭೯
ಲೇ: ಚಿದಂಬರಯ್ಯ ಹೊಸಕೆರೆ (೧೮೭೦-೧೯೩೮)
ಪುಟ ೬೧೭-೬೧೮

೧೩) ಶ್ರೇಷ್ಠ ಪತ್ರಿಕೋದ್ಯಮ : ಮ. ಗೋವಿಂದರಾವ್ (ಟಿಪ್ಪಣಿ)
೧೯೯೬
ಸಂ: ಶ್ರೀನಿವಾಸ ಹಾವನೂರು,
ಪ್ರ: ಸಾಹಿತ್ಯ ಭಂಡಾರ, ಬಳೇಪೇಟೆ, ಬೆಂಗಳೂರು-೫೩

೧೪) ಆಳುವ ಮಹಾಸ್ವಾಮಿ ಅವರು (ಜೀವನ ಚರಿತ್ರೆ) (ಟಿಪ್ಪಣಿ)
ಲೇ: ಸಿ.ಕೆ. ವೆಂಕಟರಾಮಯ್ಯ
೧೯೪೧, ಪುಟ ೪೮೫

೧೫) ಅಧ್ಯಾತ್ಮ ಪ್ರಕಾಶ (ಕ್ರೋಧ್ಯ-ವೈಶಾಖ) (ಗ್ರಂಥ ವಿಮರ್ಶೆ)
ಆರ್ಯಧರ್ಮ ಪ್ರದೀಪ

೧೬) ಬಹುಮುಖ ಪ್ರತಿಭೆಯ ಹೊಸಕೆರೆ ಚಿದಂಬರಯ್ಯ (ಲೇಖನ)
ಲೇ: ಡಾ. ಎನ್.ಕೆ. ರಾಮಶೇಷನ್
ಕಸ್ತೂರಿ ಮಾಸಪತ್ರಿಕೆ, ಪುಟ ೯೪-೯೬, ಫೆಬ್ರವರಿ ೨೦೦೪
ಪ್ರ: ಲೋಕಶಿಕ್ಷಣ ಟ್ರಸ್ಟ್, ಬೆಂಗಳೂರು

೧೭) ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು (ಜೀವನ ಚರಿತ್ರೆ) (ಗ್ರಂಥ)
ಲೇ: ಎನ್.ಎಸ್. ರಾಮಪ್ರಸಾದ್
ಪ್ರ. ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೧೮) ಮುಲಕನಾಡು ಬ್ರಾಹ್ಮಣರು (ಸಮುದಾಯ ಸಂಸ್ಕೃತಿ) (ಟಿಪ್ಪಣಿ)
೨೦೦೦, ರೂ. ೨೫೦, ಪುಟ ೫೦೦
ಲೇ: ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ
ಪ್ರ: ಮುಲಕನಾಡು ಮಹಾಸಂಘ, ೫೧೨, ೪೭ನೇ ಕ್ರಾಸ್, ೫ನೇ ಬ್ಲಾಕ್,
ಜಯನಗರ, ಬೆಂಗಳೂರು-೪೫

೧೯) ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ (ಸಂ. ೨೩, ಸಂಚಿಕೆ ೧) (ಲೇಖನ)
ಜನವರಿ - ಮಾರ್ಚ್ ೧೯೩೮, ಸಂಪಾದಕೀಯ ಟಿಪ್ಪಣಿಗಳು
ಪ್ರ: ಕಸಾಪ ಬೆಂಗಳೂರು

೨೦) ಎಂದಿಗೂ ಮರೆಯಲಾಗದ ಮಹಾಭಾಗವತರು (ಜೀವನ ಚರಿತ್ರೆ)
ಲೇ। ಡಾ. ರಾ.ಅ. ಜಾಲಿಹಾಳ, ಗದಗ
ಪ್ರ: ಸಾಹಿತ್ಯಸಿಂಧು ಪ್ರಕಾಶನ, ಬೆಂಗಳೂರು-೧.
೨೦೧೦, ರೂ. ೬೦, ಪುಟ ೧೮೦

೨೧) ಕಥಾಕೀರ್ತನ ಕಲೆ - ಲಕ್ಷ್ಮಣದಾಸವೇಲಣಕರ್
ಪ್ರ: ಕರ್ನಾಟಕ ಸಂಗೀತ ಅಕಾಡೆಮಿ, ಬೆಂಗಳೂರು. ೧೯೯೪, ಪುಟ ೧೯೭.

ಅನುಬಂಧ-೫
ಸಂದರ್ಶನಗಳು

೧) ಹೊಸಕೆರೆ ಚಿದಂಬರಯ್ಯನವರ ಸೊಸೆ ಗುಂಡಮ್ಮ
(ಮಗ ಹೊಸಕೆರೆ ಅನಂತಶಾಸ್ತ್ರಿಗಳ ಪತ್ನಿ)
ಸಂದರ್ಶನ ದಿನಾಂಕ : ೧೫.೭.೧೯೯೭
ಸಂದರ್ಶನ ಸ್ಥಳ : ಚಿದಂಬರಯ್ಯನವರ ಮೊಮ್ಮಗ ಚಿದಂಬರ
ಅವರ ಮನೆ, ನೆಲಮಂಗಲ, ಸುಭಾಷ್‌ನಗರ

೨) ಹೊಸಕೆರೆ ಚಿದಂಬರಯ್ಯನವರನ್ನು ಕಂಡವರು ಭೇಟಿ
ರಂಗನಾಥಶರ್ಮಾ, ಶೇಷಾಚಲಶರ್ಮ, (ಪ್ರಸಿದ್ಧ ಸಂಸ್ಕೃತ ವಿದ್ವಾಂಸರು)
ಶ್ರೀನಿವಾಸಮೂರ್ತಿ (ಕೆಲ್ಲಂಗೆರೆ ತಿಮ್ಮಪ್ಪನವರ ಮೊಮ್ಮಕ್ಕಳು)
ನಿಟ್ಟೂರು ಶ್ರೀನಿವಾಸರಾಯರು (ಕನ್ನಡದ ಹಿರಿಯರು)
ಬೆಳಗೆರೆ ಕೃಷ್ಣಶಾಸ್ತ್ರಿ (ಹಿರಿಯ ಸಾಹಿತಿ)

೩) ಡಿ. ವೆಂಕಟರಮಣನ್ (ಗೋಖಲೆ ಸಾರ್ವಜನಿಕ ಸಂಸ್ಥೆ)
ವೈ. ಸುಬ್ಬರಾವ್ - ಚಿದಂಬರಯ್ಯನವರ ಬಗ್ಗೆ ಪ್ರಸಂಗವೊಂದನ್ನು ಹೇಳಿದರು

೪) ಶ್ರೀನಿವಾಸರಾವ್ ಅವರ ಸೊಸೆ ಸಾವಿತ್ರಮ್ಮ
ಸಂದರ್ಶನ ದಿನಾಂಕ : ೭.೪.೨೦೧೦; ಸ್ಥಳ : ಅಂಜನಾಪುರ, ಬೆಂಗಳೂರು

೫) ನಿಖಿಲಾನಂದಗುಪ್ತಾ (ಹೊಸಕೆರೆ ಚಿದಂಬರಯ್ಯನವರ ಗೀತಾರ್ಥ ಚಂದ್ರಿಕೆ ಪ್ರಚಾರ ಆಂಧ್ರದಲ್ಲಿ ಮಾಡಿದವರು), ಕನ್ನಡ ಮತ್ತು ತೆಲುಗಿನಲ್ಲಿ

೬) ಎಚ್. ಚಿದಂಬರ (ಹೊಸಕೆರೆ ಅನಂತಮೂರ್ತಿಶಾಸ್ತ್ರಿ ಅವರ ಮಗ)
(ಚಿದಂಬರಯ್ಯನವರ ಬಗ್ಗೆ ವಂಶವೃಕ್ಷ ನೀಡಿದರು. ಲೇಖಕನ ಜೀವನಚರಿತ್ರೆ ಓದಿ ಕೆಲವು ಮಾಹಿತಿ ನೀಡಿದರು. ದಿ. ೨೭.೯.೨೦೧೦ರಲ್ಲಿ ನಿಧನರಾದರು)

ಉಲುಚುಕಮ್ಮೆ ಸಾಧಕರ ಮಾಲೆ

ಸಂಪಾದಕ ಮಂಡಲಿ

ಪ್ರಧಾನ ಸಂಪಾದಕರು	ಡಾ. ಎಸ್. ನಾಗರಾಜು
ಸಂಚಾಲಕರು	ಶ್ರೀ ಟಿ.ಆರ್. ಅನಂತರಾಮು
ಕಾರ್ಯನಿರ್ವಾಹಕ ವ್ಯವಸ್ಥಾಪಕರು	ಶ್ರೀ ಜಿ.ವಿ. ಪ್ರಭಾಕರ್

ಸದಸ್ಯರು

ಶ್ರೀ ಎನ್. ಆನಂದರಾಮರಾವ್	ಶ್ರೀ ಎಂ.ಎಸ್. ನಾಗರಾಜರಾವ್
ಶ್ರೀ ಸುರೇಶ್ ಮೂನ	ಶ್ರೀ ವಿ. ರಂಗನಾಥರಾವ್
ಶ್ರೀ ನೆ.ಲ. ರಾಮಮೂರ್ತಿ	


ಪೋಷಕರು

ಶ್ರೀ ಬಿ.ವಿ. ಕುಮಾರ್	ಶ್ರೀ ಎಲ್.ವಿ. ಶ್ರೀರಂಗರಾಜು
ಶ್ರೀ ಬಿ.ಎಸ್. ಅಶ್ವತ್ಥನಾರಾಯಣ್	ಶ್ರೀ ಆರ್. ಅನಂತರಾಮನ್

ಮಾಲೆಯ ಪ್ರಕಟಣೆಗಳು

ಕೃತಿಗಳು	ಲೇಖಕರು
ಆಸ್ಥಾನ ವಿದ್ವಾನ್ ಮಂಡಿಕಲ್ ರಾಮಾಶಾಸ್ತ್ರಿ	ಶಕುಂತಲ ರಾಮಶೇಷ್
ಕರ್ಣಾಟಕ ಕವಿರತ್ನ ಹೊಸಕೆರೆ ಚಿದಂಬರಯ್ಯ	ಜಿ. ಅಶ್ವತ್ಥನಾರಾಯಣ
ತತ್ತ್ವಜ್ಞಾನಿ ಎಂ. ಹಿರಿಯಣ್ಣ	ಮಾಲತಿ ಜಯರಾವ್
ದಿವಾನ್ ಎಂ.ಎನ್. ಕೃಷ್ಣರಾವ್	ಎಂ.ಆರ್. ನರೇಂದ್ರ
ನಟಭಯಂಕರ ಎಂ.ಎನ್. ಗಂಗಾಧರರಾಯರು	ನೆ.ಲ. ರಾಮಮೂರ್ತಿ
ಸಾಹಿತ್ಯಶಿಲ್ಪಿ ವಿ. ಸೀತಾರಾಮಯ್ಯ	ಎಂ.ವಿ. ವೆಂಕಟೇಶಮೂರ್ತಿ
ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್	ಎನ್. ಸುಬ್ಬಣ್ಣ
ನಟರತ್ನ ಕೆ.ಎಸ್. ಅಶ್ವತ್ಥ್	ಎನ್. ಆನಂದರಾಮರಾವ್
ವಿಜ್ಞಾನ ಇತಿಹಾಸಕಾರ ಬಿ.ವಿ. ಸುಬ್ಬರಾಯಪ್ಪ	ಅನ್ನಪೂರ್ಣ ವೆಂಕಟನಂಜಪ್ಪ
ವಿದ್ವಾನ್ ಶೇಷಾಚಲ ಶರ್ಮ	ಎನ್.ವಿ. ಅನಂತರಾಮಯ್ಯ

ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ ಪ್ರಾರ್ಥನಾ ಮಂದಿರ




ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ ಕಾರ್ಯಕಾರಿ ಸಮಿತಿ

ಗೌ।। ಅಧ್ಯಕ್ಷರು	ಶ್ರೀ ಪಿ.ಎನ್. ಅಶ್ವತ್ಥ ನಾರಾಯಣರಾವ್
ಗೌ।। ಉಪಾಧ್ಯಕ್ಷರು	ಶ್ರೀ ಜಿ.ವಿ. ಪ್ರಭಾಕರ್
ಗೌ।। ಕಾರ್ಯದರ್ಶಿಗಳು	ಶ್ರೀ ವಿ. ಮಂಜುನಾಥ್
ಗೌ।। ಸಹಕಾರ್ಯದರ್ಶಿಗಳು	ಶ್ರೀ ಎಸ್. ಮುರಳೀಧರ ಶಾಸ್ತ್ರಿ
ಗೌ।। ಖಜಾಂಚಿಗಳು	ಡಾ. ಕೆ. ಲಕ್ಷ್ಮೀಕಾಂತ್
ಗೌ।। ಆಂತರಿಕ ಲೆಕ್ಕಪರಿಶೋಧಕರು	ಶ್ರೀ ಎಂ. ನರಸಿಂಹ ಮೂರ್ತಿ

ಸದಸ್ಯರು

ಶ್ರೀ ಎಂ.ಎಸ್. ನಾಗರಾಜರಾವ್	ಶ್ರೀ ಕೆ.ಎಸ್. ಶಿವರಾಮ್
ಶ್ರೀ ಪಿ.ಎಸ್. ಭಾನುಪ್ರಕಾಶ್	ಶ್ರೀ ಎಸ್. ಮಂಜುನಾಥ್
ಶ್ರೀ ಎಸ್.ಆರ್. ನಾಗರಾಜ್	ಶ್ರೀ ಆರ್. ಗಣೇಶ್ ಪ್ರಸಾದ್
ಶ್ರೀ ಕೆ.ವಿ. ಗೋಪಾಲರಾವ್	ಶ್ರೀ ಡಿ.ಎಸ್. ನಾಗರಾಜ
ಶ್ರೀಮತಿ ಎ.ಎಸ್. ಕಲಾವತಿ	ಶ್ರೀಮತಿ ಎ. ಅನುರಾಧ ಕುಮಾರ್



ಪ್ರೊ. ಜಿ. ಅಶ್ವತ್ಥನಾರಾಯಣ

ಪ್ರೊ. ಜಿ. ಅಶ್ವತ್ಥನಾರಾಯಣ ಅವರು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ೩೦ ವರುಷಗಳ ಕಾಲ ಪದವಿ ತರಗತಿಗಳಿಗೆ ಕನ್ನಡ ಬೋಧಿಸಿದ್ದಾರೆ. ಐ.ಎ.ಎಸ್., ಐ.ಪಿ.ಎಸ್. ವಿದ್ಯಾರ್ಥಿಗಳಿಗಾಗಿ ಪಾಠ ಹೇಳಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಆಡಳಿತ ಕನ್ನಡ ಶಿಬಿರಗಳನ್ನು ನಡೆಸಿದ್ದಾರೆ. ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಮೆರಿಕೆಯ ಅಕ್ಕ ಸಮ್ಮೇಳನದಲ್ಲಿ ವ್ಯವಸ್ಥಾಪಕರಲ್ಲಿ ಒಬ್ಬರಾಗಿ ಕಾರ್ಯನಿರ್ವಹಿಸಿದ್ದಾರೆ. ಉಪನ್ಯಾಸ ನೀಡಿದ್ದಾರೆ. ಅಮೆರಿಕೆಯಲ್ಲಿರುವ ಕನ್ನಡ ಮಕ್ಕಳಿಗೆ ಕನ್ನಡ ಕಲಿಸಿದ್ದಾರೆ.

ವಿಜಯದಾಸರ ಕೀರ್ತನೆಗಳು ಉಗಾಭೋಗಗಳು, ಕೆಲ್ಲಂಗೆರೆ ತಿಮ್ಮಪ್ಪದಾಸರು, ಪ್ರಸನ್ನ ಶ್ರೀನಿವಾಸದಾಸರ ಕೀರ್ತನೆಗಳನ್ನು ಸಂಪಾದಿಸಿದ್ದಾರೆ. ಕುಮಾರವ್ಯಾಸ ಭಾರತ, ಭೀಷ್ಮವಿಶ್ವಟೀಕೆ, ರತ್ನಾಕರಶತಕ ಇತ್ಯಾದಿ ಅನುವಾದಿಸಿದ್ದಾರೆ. ದೇವುಡು ನರಸಿಂಹಶಾಸ್ತ್ರಿ, ಹು.ಮಾ. ರಾಮಾರಾಧ್ಯ, ದೇವರ ದಾಸಿಮಯ್ಯ, ಫ.ಗು. ಹಳಕಟ್ಟಿ ಮೊದಲಾದವರ ಜೀವನ ಚರಿತ್ರೆಗಳನ್ನು ರಚಿಸಿರುವ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದರು. ದೇವುಡು ಪ್ರತಿಷ್ಠಾನ, ಬಿಎಂಶ್ರೀ ಸ್ಮಾರಕ ಪ್ರತಿಷ್ಠಾನ, ಕರ್ನಾಟಕ ಗಾನಕಲಾ ಪರಿಷತ್ತು, ಗಮಕಕಲಾ ಪರಿಷತ್ತು ಮೊದಲಾದ ಸಂಸ್ಥೆಗಳ ಸ್ಥಾಪಕ ಸದಸ್ಯರು. ಕನ್ನಡ ಸಾಹಿತ್ಯ, ಧರ್ಮ ಕುರಿತು ಸಾವಿರಾರು ಉಪನ್ಯಾಸಗಳನ್ನು ನಾಡಿನಾದ್ಯಂತ ನೀಡಿದ್ದಾರೆ. ಆಕಾಶವಾಣಿ, ದೂರದರ್ಶನಗಳಲ್ಲಿ ಸಂದರ್ಶನ ಉಪನ್ಯಾಸ ನೀಡಿದ್ದಾರೆ. ಹತ್ತಾರು ಪತ್ರಿಕೆಗಳಲ್ಲಿ ಸಂಶೋಧನಾ ಲೇಖನಗಳನ್ನು ಬರೆದಿದ್ದಾರೆ. ೧೫೦೦೦ ಕನ್ನಡ ಗ್ರಂಥಗಳ ಸಂಗ್ರಾಹಕರು. ಪ್ರಕೃತ ಹೊಸಕೆರೆ ಚಿದಂಬರಯ್ಯನವರನ್ನು ಕುರಿತು ಜೀವನಚರಿತ್ರೆಯನ್ನು ಮೊದಲಬಾರಿ ಕನ್ನಡದಲ್ಲಿ ರಚಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ವಿಶ್ವವಿದ್ಯಾಲಯ, ಶಿಕ್ಷಣ ಇಲಾಖೆಗಳ ಪಠ್ಯಪುಸ್ತಕಗಳ ಕಾರ್ಯದಲ್ಲಿ ನೆರವಾಗಿ ಹಲವಾರು ಪಠ್ಯಗಳನ್ನು ರಚಿಸಿದ್ದಾರೆ.

₹ 50/-

ಉಲುಚುಕಮ್ಮೆ ಸಾಧಕರ ಮಾಲೆ